ಫೆಬ್ರವರಿ 2024

ಬೆಲೆ ರೂ.1

## ದೆಹಲಿ ಕರ್ನಾಟಕ ಸಂಘದ

# ಅಭಿಮತ




ಸಂಘದ ಸಭಾಂಗಣದಲ್ಲಿ 24.12.2023 ರಂದು ವಿವಿಧ ಕ್ಷೇತ್ರಗಳಲ್ಲಿನ ಸಾಧಕರಿಗೆ ಪ್ರದಾನ ಮಾಡಿದ ನಾಲ್ಕು ವಿಶಿಷ್ಟ ಪ್ರಶಸ್ತಿಗಳಿಗೆ ಭಾಜನರಾದ ನಾಡಿನ ಗಣ್ಯಮಾನ್ಯರು, ಮುಖ್ಯ ಅತಿಥಿಗಳು ಹಾಗು ವಿಶಿಷ್ಟ ಕನ್ನಡಿಗ ಪುರಸ್ಕೃತರೊಂದಿಗೆ, ಸಂಘದ ಅಧ್ಯಕ್ಷರು, ಪದಾಧಿಕಾರಿಗಳು ಮತ್ತು ಸದಸ್ಯರು



2024ರ ಗಣರಾಜ್ಯೋತ್ಸವ ಸಂದರ್ಭ, ದೆಹಲಿಯ ಕೆಂಪುಕೋಟೆ ಬಳಿ ಭಾರತ್ ಪರ್ವದಲ್ಲಿ ಐಟಿಬಿಟಿ ರಾಜಧಾನಿ ಬೆಂಗಳೂರು ನಗರದ ಕೀರ್ತಿಯನ್ನು 'ಬ್ರಾಂಡ್ ಬೆಂಗಳೂರು' ಎಂಬ ಹೆಸರಿನೊಂದಿಗೆ ಪ್ರದರ್ಶಿಸಲ್ಪಟ್ಟ ಕರ್ನಾಟಕ ರಾಜ್ಯದ ಸ್ತಬ್ಧ ಚಿತ್ರ





ಸಂಘದ ಆವರಣದಲ್ಲಿ, 26.01.2024ರಂದು ರಾಷ್ಟ್ರಧ್ವಜಾರೋಹಣದೊಂದಿಗೆ 75ನೇ ಗಣರಾಜ್ಯೋತ್ಸವ ದಿನವನ್ನು ದೇಶ ಭಕ್ತಿಯಿಂದ ಆಚರಿಸಿ ಸಂಭ್ರಮಿಸಿದ ದೆಹಲಿ ಕನ್ನಡಿಗರು

# ಕನ್ನಡ ನಾಡಿನ ಒಂಭತ್ತು ಗಣ್ಯ ಸಾಧಕರಿಗೆ 2024 ರ ಸಾಲಿನ ಪದ್ಮಪ್ರಶಸ್ತಿ ಪುರಸ್ಕಾರ


## ರಾಷ್ಟ್ರಪತಿಗಳಿಂದ ಪ್ರಶಸ್ತಿ ಪಡೆಯುತ್ತಿರುವವರು

### -: ಪದ್ಮಭೂಷಣ :-



ಡಾ. ಸೀತಾರಾಮ್ ಜಿಂದಾಲ್

### -: ಪದ್ಮಶ್ರೀ :-



ಶ್ರೀಮತಿ ಡಾ. ಪ್ರೇಮಾ ಧನರಾಜ್



ಶ್ರೀಮತಿ ಅನುಪಮ ಹೊಸ್ಕೆರೆ



ಶ್ರೀಮತಿ ಶಶಿಸೋನಿ



ಶ್ರೀ ಸೋಮಣ್ಣ



ಶ್ರೀ ಕೆ.ಎಸ್. ರಾಜಣ್ಣ



ಶ್ರೀ ಶ್ರೀಧರ್ ಮಕಂ ಕೃಷ್ಣಮೂರ್ತಿ



ಡಾ. ಸಿ.ಆರ್. ಚಂದ್ರಶೇಖರ್



ಶ್ರೀ ರೋಹನ್ ಮಚಂಡ ಬೋಪಣ್ಣ

ರಾಷ್ಟ್ರದ ಗಣರಾಜ್ಯೋತ್ಸವ ಸಂದರ್ಭದಲ್ಲಿ ಪ್ರತಿ ವರ್ಷ ಕೇಂದ್ರ ಸರ್ಕಾರವು ದೇಶದಾದ್ಯಂತ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿರುವವರನ್ನು ಗುರುತಿಸಿ ಉನ್ನತ ನಾಗರೀಕ ಪ್ರಶಸ್ತಿಗಳಾದ ಪದ್ಮ ಸರಣಿ ಪ್ರಶಸ್ತಿಗಳನ್ನು ನೀಡುತ್ತಾ ಬಂದಿದೆ. ಕರ್ನಾಟಕದಿಂದ ಅನೇಕ ಸಾಧಕರು ಈಗಾಗಲೇ ಈ ಪ್ರಶಸ್ತಿಗಳನ್ನು ರಾಷ್ಟ್ರಪತಿಗಳಿಂದ ಪಡೆದಿರುತ್ತಾರೆ. 2024ರ ಸಾಲಿನಲ್ಲಿ ಪದ್ಮ ಪ್ರಶಸ್ತಿಗಳಿಗೆ ಆಯ್ಕೆಯಾದ ಒಟ್ಟಾರೆ 132 ಸಾಧಕರ ಪಟ್ಟಿಯನ್ನು ಕೇಂದ್ರ ಸರ್ಕಾರ ಬಿಡುಗಡೆ ಮಾಡಿದೆ. ಇದರಲ್ಲಿ 5 ಜನರಿಗೆ ಪದ್ಮವಿಭೂಷಣ, 17 ಜನರಿಗೆ ಪದ್ಮಭೂಷಣ ಹಾಗೂ 110 ಜನರಿಗೆ ಪದ್ಮಶ್ರೀ ಪ್ರಶಸ್ತಿಗಳು ಪ್ರದಾನವಾಗಲಿದೆ. ಕನ್ನಡನಾಡಿನ ಒಬ್ಬರಿಗೆ ಪದ್ಮಭೂಷಣ ಹಾಗೂ ಎಂಟು ಮಂದಿ ಸಾಧಕರಿಗೆ ಈ ಬಾರಿಯ ಪದ್ಮಶ್ರೀ ಪ್ರಶಸ್ತಿ ದೊರೆಯುತ್ತಿರುವುದು ನಾಡಿನ ಸಮಸ್ತ ಕನ್ನಡಿಗರಿಗೆ ಹೆಮ್ಮೆಯ ವಿಷಯವಾಗಿದ್ದು ಹಾಗು ನಮ್ಮ ದೆಹಲಿ ಕನ್ನಡಿಗರಿಗೆ ಅತ್ಯಂತ ಸಂತೋಷ ತಂದಿದೆ.

ಈ ವರ್ಷದ ಪದ್ಮ ಪ್ರಶಸ್ತಿಗಳಿಗೆ ಭಾಜನರಾಗುತ್ತಿರುವ ಹೆಮ್ಮೆಯ ಕನ್ನಡದ ಕಣ್ಮಣಿಗಳು.

**ಪದ್ಮಭೂಷಣ ಪ್ರಶಸ್ತಿ** : ಡಾ. ಸೀತಾರಾವ್ ಜಿಂದಾಲ್, ಸಾಧನೆಯ ಕ್ಷೇತ್ರ : ವ್ಯಾಪಾರ ಮತ್ತು ಕೈಗಾರಿಕೆ

**ಪದ್ಮಶ್ರೀ ಪ್ರಶಸ್ತಿ**

1. ಶ್ರೀ ರೋಹನ್ ಮಚಂಡ ಬೋಪಣ್ಣ–ಕ್ಷೇತ್ರ–ಕ್ರೀಡೆ
2. ಶ್ರೀಮತಿ ಡಾ. ಪ್ರೇಮಾ ಧನರಾಜ್–ಕ್ಷೇತ್ರ : ಮೆಡಿಸಿನ್
3. ಶ್ರೀಮತಿ ಅನುಪಮ ಹೊಸ್ಕೆರೆ–ಕ್ಷೇತ್ರ : ಕಲೆ
4. ಶ್ರೀ ಶ್ರೀಧರ್ ಮಕಂ ಕೃಷ್ಣಮೂರ್ತಿ–ಕ್ಷೇತ್ರ : ಸಾಹಿತ್ಯ ಮತ್ತು ಶಿಕ್ಷಣ
5. ಶ್ರೀ ಕೆ.ಎಸ್. ರಾಜಣ್ಣ–ಕ್ಷೇತ್ರ : ಸಮಾಜ ಸೇವೆ
6. ಡಾ. ಸಿ.ಆರ್. ಚಂದ್ರಶೇಖರ್–ಕ್ಷೇತ್ರ : ಮೆಡಿಸಿನ್
7. ಶ್ರೀ ಸೋಮಣ್ಣ–ಕ್ಷೇತ್ರ : ಸಮಾಜಸೇವೆ
8. ಶ್ರೀಮತಿ ಶಶಿಸೋನಿ–ಕ್ಷೇತ್ರ : ವ್ಯಾಪಾರ ಮತ್ತು ಕೈಗಾರಿಕೆ

ಪದ್ಮಪ್ರಶಸ್ತಿಗಳಿಗೆ ಪುರಸ್ಕೃತರಾಗುತ್ತಿರುವ ನಾಡಿನ ಈ ಎಲ್ಲಾ ಒಂಭತ್ತು ಗಣ್ಯ ಸಾಧಕರಿಗೆ ಸಮಸ್ತ ದೆಹಲಿ ಕನ್ನಡಿಗರ ಪರವಾಗಿ ಹಾರ್ದಿಕ ಅಭಿನಂದನೆಗಳು. ಈ ಪ್ರಶಸ್ತಿಗಳನ್ನು ಪಡೆಯುತ್ತಿರುವ ದೇಶದ ಇತರ 123 ಸಾಧಕರಿಗೂ ಹಾಗೂ ಈ ಬಾರಿ ಕೇಂದ್ರ ಸರ್ಕಾರ ನೀಡುತ್ತಿರುವ ದೇಶದ ಅತ್ಯುನ್ನತ ನಾಗರೀಕ ಪ್ರಶಸ್ತಿ 'ಭಾರತ ರತ್ನ' ಪುರಸ್ಕಾರಕ್ಕೆ ಭಾಜನರಾದ ಪೂರ್ವ ಉಪಪ್ರಧಾನಿ ಶ್ರೀ ಲಾಲ್‌ಕೃಷ್ಣ ಅಡ್ವಾಣಿ ಅವರಿಗೆ ಮತ್ತು ಮರಣೋತ್ತರವಾಗಿ ಭಾರತರತ್ನ ಪ್ರಶಸ್ತಿ ನೀಡಲಾಗುತ್ತಿರುವ ಬಿಹಾರ್‌ನ ಪೂರ್ವ ಮುಖ್ಯಮಂತ್ರಿ ಜನನಾಯಕ ಕರ್ಪೂರಿ ಠಾಕೂರ್, ಪೂರ್ವ ಪ್ರಧಾನಿ ಪಿ.ವಿ. ನರಸಿಂಹರಾವ್, ಪೂರ್ವ ಪ್ರಧಾನಿ ಚರಣ್‌ಸಿಂಗ್ ಹಾಗು ಕೃಷಿ ವಿಜ್ಞಾನಿ ಡಾ. ಎಂ.ಎಸ್. ಸ್ವಾಮಿನಾಥನ್ ಅವರ ಕುಟುಂಬದವರಿಗೆ ದೆಹಲಿ ಕರ್ನಾಟಕ ಸಂಘ ಗೌರವಪೂರ್ವಕ ಅಭಿನಂದನೆಗಳನ್ನು ಅರ್ಪಿಸುತ್ತದೆ.

***ಅಭಿಮತ ವರದಿ***




**ಹಿರಿಯ ದೆಹಲಿ ಕನ್ನಡಿಗ ಶ್ರೀ ವಿ.ವಿ. ಬಿರಾದಾರ ಅವರಿಗೆ ದೆಹಲಿ ಕರ್ನಾಟಕ ಸಂಘದ 2023ರ ಸಾಲಿನ 'ವಿಶಿಷ್ಟ ಕನ್ನಡಿಗ' ಪ್ರಶಸ್ತಿ ನೀಡಿ ಅವರನ್ನು ಅಭಿನಂದಿಸಿದ ಸಂದರ್ಭ ಅತಿಥಿ ಗಣ್ಯರು, ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷರು, ಪ್ರಧಾನ ಕಾರ್ಯದರ್ಶಿಗಳು, ಪದಾಧಿಕಾರಿಗಳು ಮತ್ತು ಸದಸ್ಯರೊಂದಿಗಿನ ದೃಶ್ಯ**

# ಅಭಿಮತ

ದೆಹಲಿ ಕರ್ನಾಟಕ ಸಂಘದ

ಸಂಪುಟ 34 । ಸಂಚಿಕೆ 4–5

ಜನವರಿ, ಫೆಬ್ರವರಿ 2024



**ಅಭಿಮತ ಸಂಪಾದಕ ಮಂಡಳಿ**

ಪ್ರಧಾನ ಸಂಪಾದಕ
ಕೆ.ಎಸ್. ಮೂರ್ತಿ

ಸದಸ್ಯರು
ಎಸ್. ಕೃಷ್ಣ ಭಟ್
ಯಲ್ಲಾಲಿಂಗ ಕೊಪ್ಪದ
ತಿಮ್ಮಪ್ಪ ಜಿ.ಆರ್.
ಎಸ್. ರಮೇಶ

**ದೆಹಲಿ ಕರ್ನಾಟಕ ಸಂಘದ ಕಾರ್ಯಕಾರಿ ಸಮಿತಿ–2024–26**

ಅಧ್ಯಕ್ಷರು
ಸಿ.ಎಂ. ನಾಗರಾಜ

ಉಪಾಧ್ಯಕ್ಷರು
ವಸಂತ ಶೆಟ್ಟಿ ಬೆಳ್ಳಾರೆ
ಪೂಜಾ ಪಿ. ರಾವ್

ಪ್ರಧಾನ ಕಾರ್ಯದರ್ಶಿ
ರಾಧಾಕೃಷ್ಣ

ಖಜಾಂಚಿ
ಆಶಾಲತಾ ಎಂ.

ಜಂಟಿ ಕಾರ್ಯದರ್ಶಿಗಳು
ನಾರಾಯಣ ಬಿ.
ಅಶ್ವಿನಿ ಬಿ.ಎಸ್.

ಸಮಿತಿ ಸದಸ್ಯರು
ಡಾ. ವೆಂಕಟಾಚಲ ಜಿ. ಹೆಗಡೆ
ಕೆ.ಎಸ್. ಮೂರ್ತಿ
ಪ್ರಭಾಕರ ಮಡ್ಡಿತೋಟ
ನವೀನ್ ಕುಮಾರ್ ವಿ.
ಅರುಣ್ ಸಿ.ಎಸ್.
ಜಯಶ್ರೀ ಬಸವರಾಜು ಬಿ.ಕೆ.
ಶುಭಾ ದೇವಿಪ್ರಸಾದ್
ಮಾಲಿನಿ ಪ್ರಹ್ಲಾದ
ಎನ್.ಆರ್. ಶ್ರೀನಾಥ
ಶಶಿಕಾಂತ ಪಿ. ಪಾಟೀಲ್

**ಕಾವಲು ಸಮಿತಿ**
ಅನಂತರಾಮು ಅರಳಿ
ಸಂಜೀವ ದೇಶಪಾಂಡೆ
ಐ. ಶಂಭುಲಿಂಗಪ್ಪ


**ಸಂಪಾದಕೀಯ** ಮನದಾಳದಿಂದ...

## ಹೊಸ ವರ್ಷವು ತಂದಿದೆ ಹರ್ಷೋಲ್ಲಾಸವನ್ನು ದೆಹಲಿ ಕನ್ನಡಿಗರಿಗೆ ಜೊತೆಗೆ ನೀಡಿದೆ ಸಂಘದ ಚುಕ್ಕಾಣಿಯನ್ನು ನೂತನ ಸಮಿತಿಗೆ

ಆತ್ಮೀಯ ಓದುಗ ಬಂಧುಗಳೇ,

ಎಲ್ಲರಿಗೂ ಹೊಸ ವರ್ಷ 2024ರ ಹೃದಯಸ್ಪರ್ಶಿ ಶುಭಾಶಯಗಳು ಮತ್ತು 75ನೇ ಗಣರಾಜ್ಯೋತ್ಸವ ದಿನಾಚರಣೆಯ ಹಾರ್ದಿಕ ಅಭಿನಂದನೆಗಳು. ದೇಶದ ಮತ್ತು ನಾಡಿನ ಕನ್ನಡ ಜನತೆಗೆ ಹಾಗೂ ನಮ್ಮ ನಲ್ಮೆಯ ದೆಹಲಿ–ಎನ್‌ಸಿಆರ್ ನ ಕನ್ನಡಿಗ ಬಂಧು ಮಿತ್ರರಿಗೆ ಈ ನೂತನ ವರ್ಷ ನಿಮ್ಮೆಲ್ಲರ ಜೀವನದಲ್ಲಿ ಹೊಸ ಹುಮ್ಮಸ್ಸು, ಹೆಚ್ಚಿನ ಆರೋಗ್ಯ, ಸುಖ, ಸಂತೋಷ, ಸಮೃದ್ಧಿಯನ್ನು ತಂದು ಕೊಟ್ಟು ಹೊಸತನವನ್ನು ಮೂಡಿಸಲಿ ಎಂದು ನಾನು ಶುಭ ಹಾರೈಸುತ್ತೇನೆ.

ನಮ್ಮ ರಾಷ್ಟ್ರವು 1947 ರಲ್ಲಿ ಸ್ವಾತಂತ್ರ್ಯ ಪಡೆದಾನಂತರ ಸಂವಿಧಾನವನ್ನು ಅಂಗೀಕರಿಸಿ ಗಣರಾಜ್ಯವಾದದ್ದು 26.01.1950 ರಂದು. ದೇಶದ ಅಮೃತ ಕಾಲದಲ್ಲಿ ಹಾಗು ಸಂಘದ ಅಮೃತ ಮಹೋತ್ಸವ ಕಾರ್ಯಕಾಲದಲ್ಲಿ ಕಳೆದ ಜನವರಿ 26, 2024 ರಂದು ಈ ಸುಸಂದರ್ಭದ 75ನೇ ಗಣತಂತ್ರ ದಿನವನ್ನು ನಾವೆಲ್ಲರೂ ಸಂಭ್ರಮದಿಂದ ಆಚರಿಸಿದ್ದೇವೆ. ದೇಶಕ್ಕೆ ಸ್ವಾತಂತ್ರ್ಯವನ್ನು ತಂದುಕೊಟ್ಟ ಅಸಂಖ್ಯಾತ ಸ್ವಾತಂತ್ರ ಹೋರಾಟಗಾರರನ್ನು, ಗಾಂಧಿ, ನೆಹರು, ಶಾಸ್ತ್ರಿ, ಸರ್ದಾರ್ ಪಟೇಲರಂತಹ ಮಹಾಪುರುಷರನ್ನೂ ಮತ್ತು ಬ್ರಿಟಿಷರ ವಿರುದ್ಧ ಜನವರಿ 26ರಂದೇ ಹುತಾತ್ಮರಾದ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣನಂತಹ ವೀರರನ್ನು ಹಾಗೂ ಸಂವಿಧಾನದ ಶಿಲ್ಪಿ ಭಾರತ ರತ್ನ ಡಾ. ಬಿ.ಆರ್. ಅಂಬೇಡ್ಕರ್ ಅವರನ್ನು ಈ ಸಂಧರ್ಭದಲ್ಲಿ ಸ್ಮರಿಸುವುದು ನಮ್ಮೆಲ್ಲರ ಆದ್ಯ ಕರ್ತವ್ಯವಾಗಿದೆ. ಅವರೆಲ್ಲರಿಗೂ ನಾನು ಶಿರಬಾಗಿ ನಮಿಸುತ್ತೇನೆ.

ಹೊಸ ವರ್ಷ ಆರಂಭವಾಗುತ್ತಿದಂತೆಯೇ 2024–26ರ ಅವಧಿಗೆ ಸಂಘದ ಹೊಸ ಕಾರ್ಯಕಾರಿ ಸಮಿತಿಯ ಆಯ್ಕೆಗೆ 21.01.2024 ರಂದು ಚುನಾವಣೆ ನಡೆದಿದ್ದು ಈ ಬಾರಿ ಸ್ಪರ್ಧಿಸಿದ್ದ 31 ಅಭ್ಯರ್ಥಿಗಳು ಬಹಳ ಸೌಹಾರ್ದಯುತವಾಗಿ ಹಾಗು ಸ್ಪರ್ಧಾತ್ಮಕ ಭಾವನೆಯಿಂದ ಚುನಾವಣಾ ಕಣದಲ್ಲಿ ಭಾಗವಹಿಸಿದ್ದು ವಿಶೇಷವಾಗಿತ್ತು. ಚುನಾಯಿತರಾದ 7 ಪದಾಧಿಕಾರಿಗಳು ಮತ್ತು 8 ಸದಸ್ಯರು ಜೊತೆಗೆ ಅಧ್ಯಕ್ಷರಿಂದ ಇನ್ನಿಬ್ಬರು ನಾಮಾಂಕಿತ ಸದಸ್ಯರಾಗಿ ಸೇರ್ಪಡೆಗೊಂಡು, ರಚನೆಯಾದ ನೂತನ ಕಾರ್ಯಕಾರಿ ಸಮಿತಿ ಈಗಾಗಲೇ ಕಾರ್ಯೋನ್ಮುಖವಾಗಿದೆ.

ಸಂಘದ ಅಧ್ಯಕ್ಷರಾಗಿ ಮತ್ತೊಮ್ಮೆ ಚುನಾಯಿತರಾಗಿ ಆಡಳಿತದ ಚುಕ್ಕಾಣಿ ಹಿಡಿದಿರುವ ಶ್ರೀ ಸಿ.ಎಂ. ನಾಗರಾಜ ಅವರಿಗೆ ಮತ್ತು ಅವರ ಜೊತೆಯ ಹೊಸ ಕಾರ್ಯಕಾರಿ ಸಮಿತಿಗೆ ಆಯ್ಕೆಯಾಗಿರುವ ಎಲ್ಲಾ ಪದಾಧಿಕಾರಿಗಳು ಮತ್ತು ಸದಸ್ಯರಿಗೆ ಹಾರ್ದಿಕ ಅಭಿನಂದನೆಗಳು, ಸ್ಪರ್ಧಿಸಿದ ಎಲ್ಲಾ ಅಭ್ಯರ್ಥಿಗಳಿಗೆ, ಹಿಂದಿನ ಸಮಿತಿಯಲ್ಲಿ ಕಾರ್ಯ ನಿರ್ವಹಿಸಿದ ಪದಾಧಿಕಾರಿಗಳಿಗೆ ವಂದನೆಗಳು, ಚುನಾವಣೆಯನ್ನು ಕಟ್ಟುನಿಟ್ಟಾಗಿ ನಡೆಸಿಕೊಟ್ಟ ಚುನಾವಣಾ ಅಧಿಕಾರಿಗಳಿಗೆ ಮತ್ತು ಸಿಬ್ಬಂದಿಗೆ ಧನ್ಯವಾದಗಳು. ಹಾಗೇನೇ ನನ್ನನ್ನೂ ಸಹಾ ಎರಡನೇ ಬಾರಿಗೆ ಸದಸ್ಯನಾಗಿ ಆಯ್ಕೆ ಮಾಡಿ ಆಶೀರ್ವದಿಸಿದ ಸಂಘದ ಸದಸ್ಯ ಬಂಧುಗಳಿಗೆ ಕೃತಜ್ಞತೆಗಳು. ಚುನಾವಣಾ ಸಮಯದಲ್ಲಿ ಕೆಲಕಾಲ ಸ್ಥಗಿತಗೊಂಡಿದ್ದ ದೆಹಲಿ ಕರ್ನಾಟಕ ಸಂಘದ ಕಾರ್ಯಕ್ರಮಗಳು, ಕೆಲಸಗಳು ಎಂದಿನಂತೆ ಮುಂದುವರಿಯಲಿವೆ. ಅಧಿಕಾರ ವಹಿಸಿಕೊಂಡಿರುವ ಹೊಸ ಕಾರ್ಯಕಾರಿ ಸಮಿತಿಯು ದೆಹಲಿ ಕನ್ನಡಿಗರ ಹಿತದೃಷ್ಟಿಯಲ್ಲಿ ಅವರ ಆಶೋತ್ತರಗಳಿಗೆ ಪೂರಕವಾಗಿ ಸ್ಪಂದಿಸುತ್ತಾ ಸಂಘವನ್ನು ಅಭಿವೃದ್ಧಿ ಪಥದಲ್ಲಿ ಮುನ್ನಡೆಸಲಿ ಎಂದು ಆಶಿಸುತ್ತೇನೆ.

ಬಂಧುಗಳೇ, ಕಳೆದ ಡಿಸೆಂಬರ್ 3 ರಂದು ಸಂಘದಲ್ಲಿ ಆಯೋಜನೆಗೊಂಡ 'ಕೈರುಚಿ' ಆಹಾರಮೇಳದ ಜನಪ್ರಿಯತೆ ದೆಹಲಿ ಕನ್ನಡಿಗರಲ್ಲಿ ಮನೆ ಮಾತಾಗಿದೆ. ಡಿಸೆಂಬರ್ 16ರಂದು ನವದೆಹಲಿಯ ನಾಡಪ್ರಭು ಕೆಂಪೇಗೌಡ ಫೌಂಡೇಶನ್ ವತಿಯಿಂದ ಸಂಘದ ಸಭಾಂಗಣದಲ್ಲಿ ಹಮ್ಮಿಕೊಂಡಿದ್ದ ಅಭಿನಂದನಾ ಮತ್ತು ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಪದ್ಮಭೂಷಣ ಪುರಸ್ಕೃತ ಕಾದಂಬರಿಕಾರ ಡಾ. ಎಸ್.ಎಲ್. ಭೈರಪ್ಪನವರನ್ನು ಹಾಗು ಏರ್ ಡೆಕ್ಕನ್ ಸಂಸ್ಥಾಪಕ ಕ್ಯಾಪ್ಟನ್ ಜಿ.ಆರ್. ಗೋಪಿನಾಥ್ ಅವರನ್ನು ಪ್ರತ್ಯಕ್ಷ ಕಾಣುವ ಅವಕಾಶ ದೆಹಲಿ ಕನ್ನಡಿಗರಿಗೆ ಒದಗಿತ್ತು. ಹಾಗೇನೇ, ದೆಹಲಿ ಕರ್ನಾಟಕ ಸಂಘದಿಂದ ವಿವಿಧ ಕ್ಷೇತ್ರಗಳಲ್ಲಿ ಉತ್ತಮ ಸಾಧನೆ ಮಾಡಿದ ಕನ್ನಡಿಗರಿಗೆ ನೀಡುವ ಡಾ. ಶಿವರಾಮ ಕಾರಂತ ಪ್ರಶಸ್ತಿ, ಡಾ. ಸರೋಜಿನಿ ಮಹಿಷಿ ಪ್ರಶಸ್ತಿ, ಕನ್ನಡ ಭಾರತೀ ರಂಗ ಪ್ರಶಸ್ತಿ ಹಾಗು ಈ ವರ್ಷದಿಂದ ಸ್ಥಾಪಿಸಲಾದ ಜ್ಞಾನಪೀಠ ಪ್ರಶಸ್ತಿ ಪುರಸ್ಕೃತ ರಾಷ್ಟ್ರಕವಿ ಕುವೆಂಪು ಪ್ರಶಸ್ತಿಗಳ ಪ್ರದಾನ ಸಮಾರಂಭ ಡಿಸೆಂಬರ್ 24ರಂದು ಸಂಘದಲ್ಲಿ ನಡೆದಿದ್ದು, ಕ್ರಮವಾಗಿ ಈ ಪ್ರಶಸ್ತಿಗಳಿಗೆ ಭಾಜನರಾದ ಕನ್ನಡ ನಾಡಿನ ನಾಲ್ಕು ಗಣ್ಯ ಸಾಧಕರಾದ ಡಾ. ಗೊ.ರು. ಚನ್ನಬಸಪ್ಪ, ಡಾ. ದೊಡ್ಡರಂಗೇಗೌಡ, ಶ್ರೀ ದೊಡ್ಡಣ್ಣ ಮತ್ತು ಶ್ರೀ ಕೆ.ವೈ. ನಾರಾಯಣಸ್ವಾಮಿ ಅವರಿಗೆ ಹಾಗು ಸಂಘದ 2023ರ ವಿಶಿಷ್ಟ ಕನ್ನಡಿಗ ಪ್ರಶಸ್ತಿಯನ್ನು ಇದೇ ಕಾರ್ಯಕ್ರಮದಲ್ಲಿ ಸ್ವೀಕರಿಸಿದ ಶ್ರೀ ವಿ.ವಿ. ಬಿರಾದಾರ ಅವರಿಗೆ ಅಭಿಮತ ಓದುಗರ ಪರವಾಗಿ ಹೃದಯಪೂರ್ವಕ ಅಭಿನಂದನೆಗಳು.

ಕೇಂದ್ರ ಸರ್ಕಾರವು ನೀಡುವ ದೇಶದ ಉನ್ನತ ನಾಗರಿಕ ಪ್ರಶಸ್ತಿಗಳಾದ ಪದ್ಮ ಸರಣಿ ಪ್ರಶಸ್ತಿಗಳಿಗೆ ಈ ವರ್ಷ ಪುರಸ್ಕೃತರಾಗುತ್ತಿರುವ 132 ಗಣ್ಯರಲ್ಲಿ ನಮ್ಮ ಕರ್ನಾಟಕ ರಾಜ್ಯದಿಂದ ಒಬ್ಬರಿಗೆ 'ಪದ್ಮಭೂಷಣ' ಮತ್ತು ಎಂಟು ಜನರಿಗೆ 'ಪದ್ಮಶ್ರೀ' ಪ್ರಶಸ್ತಿಗಳು ಲಭಿಸಿವೆ. ಈ ಪ್ರಶಸ್ತಿಗಳಿಗೆ ಭಾಜನರಾಗುತ್ತಿರುವ ನಮ್ಮ ಒಂಬತ್ತು ಕನ್ನಡದ ಕಣ್ಮಣಿಗಳು ಸೇರಿದಂತೆ ಎಲ್ಲಾ ಸಾಧಕರಿಗೆ ತುಂಬು ಹೃದಯದ ಅಭಿನಂದನೆಗಳು. ದೇಶದ ಅತ್ಯುನ್ನತ ನಾಗರಿಕ ಪ್ರಶಸ್ತಿಯಾದ 'ಭಾರತ ರತ್ನ'ವನ್ನು ಈ ವರ್ಷ ಪೂರ್ವಪ್ರಧಾನಿ ಶ್ರೀ ಎಲ್.ಕೆ. ಅಡ್ವಾಣಿ ಮತ್ತು ಮರಣೋತ್ತರವಾಗಿ ಜನನಾಯಕ ಕರ್ಪೂರಿ ಠಾಕೂರ್, ಪೂರ್ವ ಪ್ರಧಾನಿ ಪಿ.ವಿ. ನರಸಿಂಹರಾವ್, ಪೂರ್ವ ಪ್ರಧಾನಿ ಚರಣ್‌ಸಿಂಗ್ ಹಾಗು ಕೃಷಿ ವಿಜ್ಞಾನಿ ಡಾ. ಎಂ.ಎಸ್. ಸ್ವಾಮಿನಾಥನ್ ಅವರಿಗೆ ನೀಡಿ ಗೌರವಿಸಲಾಗುತ್ತಿದೆ, ಅವರಿಗೂ ಗೌರವಪೂರ್ವಕ ಅಭಿನಂದನೆಗಳು

ಆತ್ಮೀಯರೇ, ಸಂಘದಲ್ಲಿ ಚುನಾವಣೆ ನಡೆಯುತ್ತಿದ್ದ ಕಾರಣ ಜನವರಿ ತಿಂಗಳಿನಲ್ಲಿ ಅಭಿಮತದ ಸಂಚಿಕೆ ಪ್ರಕಟವಾಗಿರಲಿಲ್ಲ. 2023ರ ಡಿಸೆಂಬರ್ ತಿಂಗಳಿನಲ್ಲಿ ಸಂಘದಲ್ಲಿ ಆಯೋಜನೆಗೊಂಡ 'ಕೈರುಚಿ' ಆರೋಗ್ಯ ಮೇಳ, ದೆಹಲಿ ಕರ್ನಾಟಕ ಸಂಘದ ಪ್ರಶಸ್ತಿಗಳ ಪ್ರದಾನ ಸಮಾರಂಭ, ನವದೆಹಲಿ ನಾಡಪ್ರಭು ಕೆಂಪೇಗೌಡ ಫೌಂಡೇಶನ್‌ನ ವತಿಯಿಂದ ಸಂಘದಲ್ಲಿ ಏರ್ಪಡಿಸಿದ ಅಭಿನಂದನಾ ಮತ್ತು ಪ್ರಶಸ್ತಿ ಪ್ರದಾನ ಕಾರ್ಯಕ್ರಮ, ದೆಹಲಿಯಲ್ಲಿ ವಿವಿಧೆಡೆ ಆಚರಿಸಲಾದ ಕನಕದಾಸ ಜಯಂತಿ, 2024ರ ಜನವರಿ ತಿಂಗಳಲ್ಲಿ ಸಂಘದಲ್ಲಿ ಆಚರಿಸಿದ ಗಣರಾಜ್ಯೋತ್ಸವ ದಿನಾಚರಣೆ, ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಸಂಘದ ವತಿಯಿಂದ ಸ್ವಾತಂತ್ರ್ಯ ಹೋರಾಟದಲ್ಲಿ ಹುತಾತ್ಮರಾಗಿದ್ದ ಸಂಗೊಳ್ಳಿ ರಾಯಣ್ಣನ ಸ್ಮರಣೆ ಕಾರ್ಯಕ್ರಮಗಳ ವರದಿ ಮತ್ತು ಅಗಲಿದ ಶ್ರೀ ಬೈಕೆರೆ ನಾಗೇಶ್ ಅವರಿಗೆ ನೀಡಿದ ನುಡಿ ನಮನದ ಶ್ರದ್ಧಾಂಜಲಿ ಕಾರ್ಯಕ್ರಮ ಮತ್ತು ಅವರನ್ನು ಕುರಿತ ಲೇಖನ, ಆರೋಗ್ಯ ಸಂಬಂಧಿತ ಡಾ. ಉಮಾ ಕೆ ಮತ್ತು ಡಾ. ಭೀಮ ಭಟ್ಟ ಅವರ ವಿಶೇಷ ವೈದ್ಯಕೀಯ ಲೇಖನಗಳು, ಶ್ರೀ ಸರವು ಕೃಷ್ಣ ಭಟ್ ಅವರ ತಿಂಗಳ ವ್ಯಕ್ತಿ ಅಂಕಣದಲ್ಲಿ ಶ್ರೀಮತಿ ಸುಮಿತ್ರಾ ರಾವ್ ಅವರ ಕುರಿತು ಲೇಖನ ಹಾಗು ಇತರ ಸಂಘ ಸಂಸ್ಥೆಗಳ ಕಾರ್ಯಕ್ರಮಗಳ ವರದಿಗಳನ್ನೊಳಗೊಂಡ ಅಭಿಮತದ ಫೆಬ್ರವರಿ ತಿಂಗಳ ಈ 32 ಪುಟಗಳ ಸಮಗ್ರ ಸಂಚಿಕೆಯನ್ನು ನಿಮಗೊಪ್ಪಿಸುತ್ತಿದ್ದೇನೆ. ನಿಮ್ಮ ಪ್ರೋತ್ಸಾಹ ಸದಾ ನಮಗಿರಲಿ ಎಂದು ಆಶಿಸುತ್ತಾ, ಸೂಕ್ತ ಸಲಹೆ ಮತ್ತು ಅನಿಸಿಕೆಗಳನ್ನು ನಮಗೆ ತಿಳಿಸಬೇಕೆಂದು ವಿನಂತಿಸುತ್ತೇನೆ.

ಐತಿಹಾಸಿಕ, ಪುಣ್ಯನಗರಿ ಅಯೋಧ್ಯೆಯಲ್ಲಿ ನಿರ್ಮಾಣವಾದ ಶ್ರೀ ರಾಮ ಮಂದಿರದಲ್ಲಿ ರಾಮಲಲ್ಲ–ಬಾಲರಾಮನ ಪ್ರಾಣ ಪ್ರತಿಷ್ಠಾ ಕಾರ್ಯಕ್ರಮ ಜನವರಿ 22, 2024 ರಂದು ಸಂಪನ್ನಗೊಂಡಿದ್ದು, ದೇಶದ ಜನರ ಬಹುದಿನಗಳ ಕನಸು ನನಸಾಗಿದೆ. ಬಾಲರಾಮನ ವಿಗ್ರಹದ ಶಿಲ್ಪಿ ಮೈಸೂರಿನ ಶ್ರೀ ಅರುಣ್ ಯೋಗಿರಾಜ್ ಅಪ್ಪಟ ಕನ್ನಡಿಗನೆಂಬುದು ನಮ್ಮೆಲ್ಲರಿಗೂ ಹೆಮ್ಮೆ ತಂದಿದೆ. ಶ್ರೀರಾಮನ ಕೃಪಾಶೀರ್ವಾದದೊಂದಿಗೆ ಎಲ್ಲರ ಬಾಳು ಹಸನಾಗಲಿ. **ಮತ್ತೊಮ್ಮೆ ಎಲ್ಲರಿಗೂ ಹೊಸ ವರ್ಷದ ಪ್ರೀತಿಪೂರ್ವಕ ಶುಭಕಾಮನೆಗಳು.**

**ಕೆ. ಶ್ರೀನಿವಾಸ ಮೂರ್ತಿ**
ಪ್ರಧಾನ ಸಂಪಾದಕರು


**ನಿಕಟಪೂರ್ವ ಪದಾಧಿಕಾರಿಗಳು :** (2021–23) : ಡಾ. ಎಂ.ಎಸ್. ಶಶಿಕುಮಾರ್–ಉಪಾಧ್ಯಕ್ಷರು, ಆರ್. ರೇಣುಕುಮಾರ್–ಪ್ರಧಾನ ಕಾರ್ಯದರ್ಶಿ, ಸುಮಿತಾ ಮುರಗೋಡ–ಜಂಟಿ ಕಾರ್ಯದರ್ಶಿ, **ಸದಸ್ಯರು :** ಶಿವಪ್ಪ ಎಂ., ಸವಿತಾ ನೆಲ್ಲಿ, ಸಂತೋಷ ಜೆ., ಸರವು ಕೃಷ್ಣ ಭಟ್, ವಸಂತ ಕುಮಾರ್ ಎಂ.ಬಿ.

# ಅಧ್ಯಕ್ಷರ ನುಡಿ



**ನನ್ನ ಎಲ್ಲಾ ಆತ್ಮೀಯ ಕನ್ನಡ ಬಂಧುಗಳು ಮತ್ತವರ ಕುಟುಂಬದ ಸದಸ್ಯರಿಗೆ ಹೊಸ ಕ್ಯಾಲೆಂಡರ್ ವರ್ಷ 2024ರ ಹೃದಯಪೂರ್ವಕ ಶುಭಾಶಯಗಳು !**

ಆತ್ಮೀಯ ದೆಹಲಿ ಕರ್ನಾಟಕ ಸಂಘದ ಸದಸ್ಯರೇ, ದೆಹಲಿ ಕರ್ನಾಟಕ ಸಂಘದ 2024–26ರ ಕಾರ್ಯಕಾರಿ ಸಮಿತಿಗಾಗಿ ನಡೆದ ಚುನಾವಣೆಯಲ್ಲಿ ಈ ಬಾರಿ ದಾಖಲೆ ಸಂಖ್ಯೆಯಲ್ಲಿ ಮತದಾನ ಮಾಡಿ ನೂತನ ಕಾರ್ಯಕಾರಿ ಸಮಿತಿಯನ್ನು ಆಯ್ಕೆ ಮಾಡಿದ್ದೀರಿ. ತಮಗೆ ಕೋಟಿ ಕೋಟಿ ನಮನಗಳು. ಹೊಸ ಕಾರ್ಯಕಾರಿ ಸಮಿತಿಯು ಒಳ್ಳೆಯ ಕೆಲಸಗಳನ್ನು ಮುಂದುವರಿಸುತ್ತಾ, ಹೊಸ ಆಲೋಚನೆಗಳನ್ನು ಇನ್ನೂ ಹೆಚ್ಚಿನ ಕಾರ್ಯತತ್ಪರತೆಯಿಂದ ಜಾರಿಗೆ ತರುವ ಮೂಲಕ ಉತ್ತರ ಕೊಡಲಿ ಎಂದು ಆಶಿಸುತ್ತೇನೆ.

ಬಂಧುಗಳೇ, ಚುನಾವಣೆಗಳು ಬರುತ್ತವೆ ಹೋಗುತ್ತವೆ ಆದರೆ ದೆಹಲಿ ಕರ್ನಾಟಕ ಸಂಘ ರಾಷ್ಟ್ರ ರಾಜಧಾನಿಯಲ್ಲಿ ಹಿರಿಯರ ಆಶೀರ್ವಾದದಿಂದ ನಡೆದು ಬಂದ ದಾರಿ ಗುರುತರವಾದದ್ದು. ಇಂದು ವಿಶ್ವಮಟ್ಟದಲ್ಲಿ ಸಾಂಸ್ಕೃತಿಕ ರಾಯಭಾರಿಯಾಗಿ ಅಗ್ರಸ್ಥಾನದಲ್ಲಿ ನಿಂತಿದೆ ನಮ್ಮ ಈ ಸಂಘ ಚುನಾವಣೆ ಸಂದರ್ಭದಲ್ಲಿ ಎರಡು ಗುಂಪುಗಳಾಗಿ ಸ್ಪರ್ಧೆ ಮಾಡುವುದು ಕೇವಲ ಸಂಘದ ಹಿತದೃಷ್ಟಿಯಿಂದ ಆಗಬೇಕೇ ಹೊರತು, ಆಪಾದನೆ, ವ್ಯಕ್ತಿಗತ ದ್ವೇಷ, ಅಪಪ್ರಚಾರಗಳ ದೃಷ್ಟಿಯಿಂದ ಮಾಡಬಾರದು. ಸಂಘದ ವಾರ್ಷಿಕ ಸರ್ವ ಸದಸ್ಯರ ಮಹಾ ಸಭೆಯಲ್ಲಿ ಬಂದು ತಮ್ಮಲ್ಲಿರುವ ಪ್ರಶ್ನೆಗಳನ್ನು ಸಭೆಯ ಮುಂದಿಟ್ಟು ಕೂಲಂಕುಶವಾಗಿ ಚರ್ಚಿಸಬೇಕು. ಕೆಲವರಿಗೆ ಈ ತಿಳುವಳಿಕೆ ಇಲ್ಲ.ಒಮ್ಮೆ ದೆಹಲಿ ಕರ್ನಾಟಕ ಸಂಘದ ಸದಸ್ಯರಾದರೆ ಸಾಕು ಎಲ್ಲವನ್ನು ತಿಳಿದ ಹಾಗೆ ಮಾತನಾಡುವ ಅಪ್ರಬುದ್ಧ ಜನರು ಇರುತ್ತಾರೆ. ಸಂಘದ ಅನುಕೂಲಕ್ಕಾಗಿ ಕೆಲವೊಂದು ಕೆಲಸ ಕಾರ್ಯಗಳು ನಾವೆಲ್ಲರೂ ಸೇರಿ ಮಾಡಬೇಕೇ ಹೊರತು ತಮ್ಮ ಸ್ವಾರ್ಥ ಹಿತಾಸಕ್ತಿಗಾಗಿ ಮಾಡಬಾರದು. ಹಳೆಯ ಕಾರ್ಯ ಸಮಿತಿಯಲ್ಲಿ ಅಧ್ಯಕ್ಷನಾಗಿ ಅಮೃತ ಮಹೋತ್ಸವದ ಸಂದರ್ಭದಲ್ಲಿ ಜವಾಬ್ದಾರಿಗಳನ್ನು ಹೊತ್ತುಕೊಂಡು ನಿಮ್ಮ ಆಶೀರ್ವಾದದೊಂದಿಗೆ ಅಧ್ಯಕ್ಷನಾಗಿ ಮರಳಿ ಬಂದಿರುವೆ. ನಾವು ನುಡಿದ ಹಾಗೆ ಎಲ್ಲಾ ಕೆಲಸಗಳು ಕಾರ್ಯಗಳು ಇತಿಹಾಸದಲ್ಲಿ **ನಾ ಭೂತೋ ನಾ ಭವಿಷ್ಯತಿ.** ಎಂಬಂತೆ ಸಾರ್ವಕಾಲಿಕ ದಾಖಲೆಯಾಗಿ ಕಾರ್ಯಕ್ರಮಗಳು ನಡೆಯುತ್ತಾ ಬಂದವು. ಮಾನ್ಯ ಪ್ರಧಾನ ಮಂತ್ರಿಗಳಾದ ಶ್ರೀ ನರೇಂದ್ರ ಮೋದೀಜಿ ಅವರು ಅಮೃತ ಮಹೋತ್ಸವದ ಅಂಗವಾಗಿ ಸಾಂಸ್ಕೃತಿಕ ಉತ್ಸವಗಳ ಸಮಾರೋಪ ಸಮಾರಂಭದ ಉದ್ಘಾಟನೆಯನ್ನು ಮಾಡಿ ಸಂಘದ ಪ್ರತಿಷ್ಠೆಯನ್ನು ನೂರು ಪಟ್ಟು ಹೆಚ್ಚುವಂತೆ ಮಾಡಿದರು.

**ಈ ಅಮೃತ ಮಹೋತ್ಸವ ಸಂದರ್ಭದಲ್ಲಿ ಅತಿ ಹೆಚ್ಚು ಸ್ನೇಹಿತರಿಂದ, ಕೇಂದ್ರ ಮತ್ತು ರಾಜ್ಯ ಸರ್ಕಾರದಿಂದ ನಾಲ್ಕೂವರೆ ಕೋಟಿ ಧನಸಹಾಯದ ರೂಪದಲ್ಲಿ ತಂದು ಕಾರ್ಯಕ್ರಮಗಳನ್ನ ಮಾಡಿ,** ಜೊತೆಗೆ ಸಂಘದ ಖಾತೆಗೆ **ಒಂದೂವರೆ ಕೋಟಿ ಎಫ್‌ಡಿ ಮಾಡಲಾಯಿತು. ಇದು ಈವರೆಗೆ ಮತ್ತೊಂದು ರೀತಿಯ ದಾಖಲೆ.** ಸಂಘದಲ್ಲಿ ನನ್ನ **ಅಧ್ಯಕ್ಷತೆಯ ಅವಧಿಯಲ್ಲಿ ಸಂಘದ ಖಜಾನೆಯಿಂದ ಒಂದು ರೂಪಾಯಿಯನ್ನೂ ಸಹಾ ತೆಗೆಯದೆ ಎಲ್ಲ ಖರ್ಚುಗಳಿಗೆ ಹೊರಗಡೆಯಿಂದ ಅನುದಾನ/ದೇಣಿಗೆಯ ರೂಪದಲ್ಲಿ ಹಣವನ್ನು ತಂದು ಕಾರ್ಯಕ್ರಮಗಳನ್ನು ನಡೆಸಿದ್ದು ಇತಿಹಾಸ.** ಸಂಘದ ಇತಿಹಾಸದಲ್ಲಿ ಅತಿ ಹೆಚ್ಚು ಕಲಾವಿದರನ್ನು ರಾಷ್ಟ್ರ ರಾಜಧಾನಿಗೆ ಕರ್ನಾಟಕದಿಂದ ಕರೆಸಲಾಗಿತ್ತು. ಮೂರೂವರೆ ಸಾವಿರ ಕಲಾವಿದರನ್ನು ತಾಯ್ನಾಡಿನಿಂದ ಕರೆಸಿ, ನಮ್ಮ ನಾಡಿನ ಭಾಷೆ, ಸಾಹಿತ್ಯ, ಕಲೆ ಮತ್ತು ಸಂಸ್ಕೃತಿಗಳನ್ನು ಬಿಂಬಿಸುವ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ರಾಷ್ಟ್ರ ರಾಜಧಾನಿಗೆ ಪರಿಚಯಿಸಲಾಯಿತು. ರಾಜ್ಯೋತ್ಸವ, ದಸರಾ ಸಂಭ್ರಮ, ಮಹಿಳಾ ದಿನಾಚರಣೆಯ ಜೊತೆಗೆ ದೆಹಲಿಯ ಎಲ್ಲಾ ಕನ್ನಡ ಪರ ಸಂಘ ಸಂಸ್ಥೆಗಳಿಗೆ ಮೂಲಕ ಅತಿ ಹೆಚ್ಚು ಸ್ಥಳೀಯ ಕಲಾವಿದರಿಗೆ ಸಂಘದ ವೇದಿಕೆಯನ್ನು ಬಳಸಿಕೊಳ್ಳುವ ಅವಕಾಶ ಕಲ್ಪಿಸಿಕೊಡಲಾಯಿತು. ಆದರೆ ಅತಿ ಹೆಚ್ಚು ಸಮಯ ಸಂಘಕ್ಕಾಗಿ ನೀಡಿದವರಿಗೆ ಹಾಗೂ ಸಮಯ ನೀಡದವರಿಗೂ ಕಾರ್ಯಕಾರಿ ಸಮಿತಿಯ ಪರವಾಗಿ ಅಭಿನಂದನೆಗಳು ದೊರೆತವು...

**ಬಂಧುಗಳೇ, ರಾಷ್ಟ್ರದ ರಾಜಧಾನಿಯಲ್ಲಿ ಕನ್ನಡದ ಕೈಂಕರ್ಯಕ್ಕಾಗಿ ನಮ್ಮ ಅಮೂಲ್ಯವಾದ ಸಮಯವನ್ನು ನೀಡುವುದು ಸುಲಭವಾದ ಮಾತಲ್ಲ.. ತಮ್ಮ ತಮ್ಮ ಕುಟುಂಬಕ್ಕಿಂತಲೂ ಹೆಚ್ಚು ಕರ್ನಾಟಕ ಸಂಘಕ್ಕಾಗಿ ಸಮಯ ನೀಡಿ ಕೆಲಸ ಮಾಡಿದ ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷರುಗಳಿಗೆ, ಪದಾಧಿಕಾರಿಗಳಿಗೆ ಮತ್ತು ಇತರ ಮಹನೀಯರುಗಳಿಗೆ ಈ ಸಮಯದಲ್ಲಿ ನಾನು ಕೋಟಿ ಕೋಟಿ ನಮನಗಳನ್ನು ತಿಳಿಸುತ್ತೇನೆ.** ತಾಯ್ನಾಡಿನಿಂದ ನಮ್ಮ ಹೊಟ್ಟೆಪಾಡಿಗಾಗಿ ಇಷ್ಟು ದೂರ ಬಂದಿರುವ ನಾವುಗಳು ಚುನಾವಣೆಗಳಿಗಾಗಿ ನಮ್ಮ ನಮ್ಮ ಸಂಬಂಧಗಳನ್ನ ಕೆಡಿಸಿಕೊಳ್ಳಬಾರದು. ದೆಹಲಿ ಕರ್ನಾಟಕ ಸಂಘದ ಬೆಳವಣಿಗೆಯ ಜವಾಬ್ದಾರಿ ಕೇವಲ ಚುನಾವಣೆಯಲ್ಲಿ ಆರಿಸಿ ಬಂದಿರುವ ಪದಾಧಿಕಾರಿಗಳದ್ದು ಮಾತ್ರವಲ್ಲ ಸಂಘದ ಪ್ರತಿಯೊಬ್ಬ ಸದಸ್ಯರದ್ದೂ ಕೂಡ.

ಏನೇ ಆಗಲಿ ಬಂಧುಗಳೇ ಪ್ರಸ್ತುತ ದೆಹಲಿ ಕರ್ನಾಟಕ ಸಂಘದ ಚುನಾವಣೆಯಲ್ಲಿ ಬಹಳಷ್ಟು ಅಪಪ್ರಚಾರಗಳು ನಡೆದವು, ಎಷ್ಟೋ ಆಪಾದನೆಗಳನ್ನು, ಜಾತಿ, ಬಣ, ಮತ್ತು ಪ್ರಾಂತ್ಯಗಳನ್ನು ಚುನಾವಣೆಯ ಮಧ್ಯೆ ತಂದರೂ ಸಹಾ, ನಾನು ನಂಬಿದ ಕನ್ನಡ ಜಾತಿಗೆ ಜಯ ಸಿಕ್ಕಿದೆ. ಪ್ರಜ್ಞಾವಂತ ಸದಸ್ಯರಾದ ತಾವು ಮತ್ತೊಮ್ಮೆ ನನ್ನನ್ನು ಅಧ್ಯಕ್ಷರನ್ನಾಗಿ ಆಯ್ಕೆ ಮಾಡಿದ್ದೀರಿ, ನಿಮಗೆಲ್ಲಾ ನನ್ನ ಅನಂತಾನಂತ ನಮನಗಳು. ಮೊದಲ ಅವಧಿಯಂತೆ ಈ ಬಾರಿಯೂ ನಾನು ನಮ್ಮ ಈ ಹೆಮ್ಮೆಯ ಸಂಘದಲ್ಲಿ ನನ್ನ ಜವಾಬ್ದಾರಿಯನ್ನು ಪ್ರಾಮಾಣಿಕತೆ ಮತ್ತು ನೈತಿಕತೆಯಿಂದ ನಿಭಾಯಿಸುತ್ತಾ ಸಂಪೂರ್ಣವಾಗಿ ಸಂಘದ ಏಳಿಗೆಗೆ ದುಡಿಯುತ್ತೇನೆ ಎಂದು ನಿಮಗೆ ಪ್ರಮಾಣ ಮಾಡಿ ತಿಳಿಸಬಯಸುತ್ತೇನೆ. ಇದೇ ರೀತಿ ನನ್ನ ಜೊತೆ ಆಯ್ಕೆಯಾಗಿ ಬಂದ ಎಲ್ಲ ಸದಸ್ಯರುಗಳು ಮತ್ತು ಪದಾಧಿಕಾರಿಗಳು ಸಹ ಚುನಾವಣೆ ಸಂದರ್ಭದಲ್ಲಿ ಹೇಳಿದ ಹಾಗೆ ಅವರವರ ಕೆಲಸಗಳನ್ನ ಜವಾಬ್ದಾರಿಯುತವಾಗಿ ಮಾಡಿ ಸಂಘದ ಹೆಚ್ಚಿನ ಪ್ರಗತಿಗೆ ದುಡಿಯಲಿ, ಚುನಾವಣೆಯಲ್ಲಿ ನೀಡಿದ ಭರವಸೆಗಳನ್ನು, ಕಾರ್ಯಯೋಜನೆಗಳನ್ನು ಸಂಘದ ಸದಸ್ಯರಿಗೆ ತಲುಪುವಂತೆ ನನ್ನ ಜೊತೆ ಸೇರಿಕೊಂಡು ಸದಸ್ಯರ ಹಿತ ದೃಷ್ಟಿಯಿಂದ ಸಕಾರಾತ್ಮಕವಾಗಿ ಶ್ರಮಿಸಲಿ ಎಂದು ಆಶಿಸುತ್ತೇನೆ.

ದೆಹಲಿ ಕರ್ನಾಟಕ ಸಂಘಕ್ಕೆ ಸಹಕಾರ ನೀಡಿದಂತಹ ಬಹಳ ಜನ ದೆಹಲಿ ಕನ್ನಡಿಗರು ಇದ್ದಾರೆ. ಅವರು ರಾಜಕೀಯ ವ್ಯಕ್ತಿಗಳಾಗಬಹುದು ಅಥವಾ ಒಬ್ಬ ಸಾಧಾರಣ ವ್ಯಕ್ತಿಯಾಗಿರಬಹುದು, ಆದರೆ ಸಂಘಕ್ಕೆ ನೀಡಿದ ಕೊಡುಗೆಗಳು ತುಂಬಾ ಇವೆ. ಇದರಲ್ಲಿ ಮುಖ್ಯವಾಗಿ ದೆಹಲಿ ಕರ್ನಾಟಕ ಸಂಘದ ಹೊಸ ಕಟ್ಟಡ ಕಟ್ಟುವ ಸಂದರ್ಭದಲ್ಲಿ ಶ್ರೀಯುತ ಕೆ.ಆರ್. ನಾಗರಾಜ್ ಅವರ ಅಧ್ಯಕ್ಷತೆಯ ಕಾಲದಲ್ಲಿ ದಿವಂಗತ ಅನಂತ ಕುಮಾರ್ ಅವರ ಕೊಡುಗೆ ಅಪಾರವಾದದ್ದು. ಅವರನ್ನು ಈ ಸಂದರ್ಭದಲ್ಲಿ ನೆನೆಸಿಕೊಳ್ಳಲೇಬೇಕು. ಏಕೆಂದರೆ ಆ ಸಂದರ್ಭದಲ್ಲಿ ಸಂಘಕ್ಕೆ ಕೆಲವೊಂದು ಕಾನೂನು ತೊಡುಕುಗಳಿದ್ದರೂ ಸಹಾ ಕೇಂದ್ರದ ನಗರಾಭಿವೃದ್ಧಿ ಮಂತ್ರಿಗಳಾಗಿದ್ದ ಶ್ರೀ ಅನಂತ ಕುಮಾರ್ ಅವರು ಆ ಸಮಯದಲ್ಲಿ ದೆಹಲಿ ಕರ್ನಾಟಕ ಸಂಘಕ್ಕೆ ಸುಮಾರು 3 ಕೋಟಿಗಿಂತಲೂ ಜಾಸ್ತಿ ಸರ್ಕಾರಕ್ಕೆ ಕಟ್ಟಬೇಕಾಗಿದ್ದ ಪರಿಸ್ಥಿತಿಯಲ್ಲಿ, ಹೆಚ್ಚುವರಿ ಹಣವನ್ನು ಮನ್ನಾ ಮಾಡಿಸಿ ಕಟ್ಟಬೇಕಾಗಿದ್ದ ಸ್ವಲ್ಪ ಹಣವನ್ನು ಮಾತ್ರ ಪಾವತಿ ಮಾಡಲು ಅನುವು ಮಾಡಿಕೊಟ್ಟು ಸಂಘಕ್ಕೆ ಸಹಾಯ ಮಾಡಿದ್ದರು. ಆ ಸಂದರ್ಭದಲ್ಲಿ, ಹೊಸ ಕಟ್ಟಡ ನಮ್ಮದಾಯಿತು. ಹಾಗೆ ಅವರ ಜೊತೆ ಕೆಲಸ ಮಾಡುತ್ತಿದ್ದ ದೆಹಲಿ ಕರ್ನಾಟಕ ಸಂಘದ ಹಿರಿಯ ಸದಸ್ಯರಾದ ಶ್ರೀ ಬೈಕೆರೆ ನಾಗೇಶ್ ಅವರು ಅನೇಕ ಕೇಂದ್ರ ಮಂತ್ರಿಗಳ ಜೊತೆ ಕೆಲಸ ಮಾಡಿ ಕರ್ನಾಟಕ ಭವನದ ದೆಹಲಿ ವಿಶೇಷ ಪ್ರತಿನಿಧಿಯಾಗಿ, ಕನ್ನಡಕ್ಕೆ, ಕರ್ನಾಟಕಕ್ಕೆ ಸಲ್ಲಬೇಕಾಗಿದ್ದ ಎಲ್ಲಾ ಸವಲತ್ತುಗಳನ್ನು ಕೇಂದ್ರದಿಂದ ರಾಜ್ಯಕ್ಕೆ ತರುವಲ್ಲಿ ಯಶಸ್ವಿಯಾದಂತವರು. ಜೊತೆಗೆ, ವಿಶೇಷವಾಗಿ ದೆಹಲಿ ಕರ್ನಾಟಕ ಸಂಘಕ್ಕೆ ನಾನು ಪ್ರಧಾನ ಕಾರ್ಯದರ್ಶಿಯಾಗಿದ್ದಾಗ ಸನ್ಮಾನ್ಯ ಶ್ರೀ ಬಿ.ಎಸ್. ಯಡಿಯೂರಪ್ಪನವರು ಮುಖ್ಯಮಂತ್ರಿಗಳಾಗಿದ್ದರು. ಆ ಸಮಯದಲ್ಲಿ ಕರ್ನಾಟಕ ಸರ್ಕಾರದಿಂದ ಒಂದು ಕೋಟಿ ರೂಪಾಯಿಗಳನ್ನು ದೆಹಲಿ ಕರ್ನಾಟಕ ಸಂಘದಲ್ಲಿ ಹೆಚ್ಚುವರಿ ರೂಮುಗಳನ್ನು ಮಾಡಿಸಲು ನೀಡಿದರಲ್ಲದೇ, ಜೊತೆಗೆ ಕನ್ನಡ ಶಾಲೆಗೆ ಎರಡು ಬಸ್ಸುಗಳನ್ನು, ಒಂದು ಕೋಟಿ ಧನ ಸಹಾಯ ಕೊಡಿಸಿದಂತಹ ಪುಣ್ಯಾತ್ಮರು ಶ್ರೀ ನಾಗೇಶ್‌ರವರು. ತಾಯ್ನಾಡಿಗೆ ಹಿಂತಿರುಗಿದ ಅವರು ಇತ್ತೀಚೆಗೆ ಬೆಂಗಳೂರಿನಲ್ಲಿ ಅನಾರೋಗ್ಯದಿಂದ ನಿಧನರಾಗಿರುವುದು ತುಂಬಾ ಬೇಸರ ತಂದಿದೆ. ಅವರಿಗೆ ದೆಹಲಿ ಕರ್ನಾಟಕ ಸಂಘದ ಪರವಾಗಿ ಭಾವಪೂರ್ಣ ಶ್ರದ್ಧಾಂಜಲಿಯನ್ನು ಅರ್ಪಿಸಿದ್ದೇವೆ. ಇಂತಹ ಪುಣ್ಯಾತ್ಮರು ಮತ್ತೆ ಮತ್ತೆ ಹುಟ್ಟಿ ಬರಲಿ ಎಂದು ಆಶಿಸುತ್ತೇನೆ.

ಬಂಧುಗಳೇ, ಡಿಸೆಂಬರ್ ತಿಂಗಳಲ್ಲಿ ದೆಹಲಿ ಕರ್ನಾಟಕ ಸಂಘದಿಂದ ನೀಡಲಾದ ಪ್ರಶಸ್ತಿಗಳು ಅರ್ಹ ಗಣ್ಯ ಸಾಧಕರಿಗೆ ಸಂದಿವೆ. ಅದರಲ್ಲಿ ಮುಖ್ಯವಾಗಿ ರಾಷ್ಟ್ರಕವಿ ಕುವೆಂಪು ಪ್ರಶಸ್ತಿಯನ್ನು ಶ್ರೀ ಕೆ.ವೈ. ನಾರಾಯಣಸ್ವಾಮಿ ಅವರಿಗೆ, ಡಾ. ಶಿವರಾಮ ಕಾರಂತ ಪ್ರಶಸ್ತಿ, ಡಾ. ಗೊ.ರು. ಚನ್ನಬಸಪ್ಪನವರಿಗೆ, ಡಾ ಸರೋಜಿನಿ ಮಹಿಷಿ ಪ್ರಶಸ್ತಿಯನ್ನು ಡಾ. ದೊಡ್ಡರಂಗೇಗೌಡ ಅವರಿಗೆ ಮತ್ತು ದೆಹಲಿ ಕರ್ನಾಟಕ ಸಂಘದ ಕನ್ನಡ ರಂಗಭಾರತೀ ರಂಗ ಪ್ರಶಸ್ತಿಯನ್ನು ಹಿರಿಯ ನಟ ಶ್ರೀ ದೊಡ್ಡಣ್ಣ ಅವರಿಗೆ ನೀಡಿದ್ದೇವೆ. ನಮ್ಮೆಲ್ಲರ ಪ್ರೀತಿ, ಅಭಿಮಾನಕ್ಕೆ ಶ್ರೀಯುತರೆಲ್ಲರೂ ಬಂದು ದೆಹಲಿ ಕರ್ನಾಟಕ ಸಂಘದಲ್ಲಿ ಪ್ರಶಸ್ತಿಗಳನ್ನು ಸ್ವೀಕರಿಸಿ ಸಂಘದ ಘನತೆಯನ್ನು ಹೆಚ್ಚಿಸಿದ್ದಾರೆ. ಸಮಸ್ತ ದೆಹಲಿ ಕನ್ನಡಿಗರ ಪರವಾಗಿ ಅವರಿಗೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ.

ಇನ್ನು, ದೆಹಲಿಯಲ್ಲಿ ನಮ್ಮ ಕರ್ನಾಟಕ ಸಂಘದ ಆಶ್ರಯದಲ್ಲಿ ಬೆಳೆದು ಬಂದ ಕೆಲವು ಸಂಘ ಸಂಸ್ಥೆಗಳು ಅತ್ಯಂತ ಉತ್ತಮ ಕಾರ್ಯಗಳನ್ನು ಮಾಡುತ್ತಾ ಬರುತ್ತಿವೆ. ಅದರಲ್ಲಿ ಮುಖ್ಯವಾಗಿ ನಾಡಪ್ರಭು ಕೆಂಪೇಗೌಡ ಫೌಂಡೇಶನ್, ನವದೆಹಲಿ ವತಿಯಿಂದ ಪ್ರತಿ ವರ್ಷದಂತೆ ಈ ವರ್ಷವೂ ಫೌಂಡೇಶನ್‌ನ ವಾರ್ಷಿಕೋತ್ಸವ ಸಂದರ್ಭದಲ್ಲಿ ಪದ್ಮ ಪ್ರಶಸ್ತಿ ಪಡೆದಂತಹ ಗಣ್ಯರಿಗೆ ಅಭಿನಂದನೆ ಮಾಡುವ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು ಇದರಲ್ಲಿ ಮುಖ್ಯವಾಗಿ ಕನ್ನಡದ ಖ್ಯಾತ ಕಾದಂಬರಿಕಾರರೂ ಮತ್ತು ಹಿರಿಯ ಸಾಹಿತಿಗಳಾದ ಪದ್ಮಭೂಷಣ ಪುರಸ್ಕೃತ ಡಾ. ಎಸ್.ಎಲ್. ಭೈರಪ್ಪ ಅವರನ್ನು ಗೌರವಿಸಿ ಅಭಿನಂದಿಸಲಾಗಿದೆ. ಹಾಗು, ವಿಶೇಷವಾಗಿ ಸಾಮಾನ್ಯ ಜನರು ವಿಮಾನ ಪ್ರಯಾಣ ಮಾಡಲು ಅನುವು ಮಾಡಿಕೊಟ್ಟ ಪುಣ್ಯಾತ್ಮರೂ, ಕಡಿಮೆ ದರದ ವಿಮಾನಯಾನ ಸಂಸ್ಥೆ ಏರ್ ಡೆಕ್ಕನ್ ಸಂಸ್ಥಾಪಕರಾದ ಕ್ಯಾಪ್ಟನ್ ಜಿ.ಆರ್. ಗೋಪಿನಾಥ್ ಅವರಿಗೆ 'ನಾಡಪ್ರಭು ಕೆಂಪೇಗೌಡ' ಪ್ರಶಸ್ತಿಯನ್ನು ನೀಡಿ ಗೌರವಿಸಲಾಗಿದೆ. ಜೊತೆಗೆ ಇದೇ ಸಂದರ್ಭದಲ್ಲಿ ನೂರು ಆರ್ಥಿಕವಾಗಿ ಹಿಂದುಳಿದ ಮಕ್ಕಳಿಗೆ ವಿದ್ಯಾರ್ಥಿ ವೇತನ, ಅರ್ಹತೆ ಆಧಾರಿತ ಮಕ್ಕಳಿಗೆ ವಿದ್ಯಾರ್ಥಿ ವೇತನ ಮತ್ತು ಪ್ರತಿಭಾ ಪುರಸ್ಕಾರವನ್ನು ಕೆಂಪೇಗೌಡ ಫೌಂಡೇಶನ್ ವತಿಯಿಂದ ನೀಡಲಾಯಿತು. ನಾಲ್ಕು ವರ್ಷಗಳ ಹಿಂದೆ ಫೌಂಡೇಶನ್‌ನಿಂದ ಪ್ರತಿಭಾ ಪುರಸ್ಕೃತರಾದ ವಿದ್ಯಾರ್ಥಿಗಳು ಇಂದು ದೊಡ್ಡ ದೊಡ್ಡ ಕಂಪನಿಗಳಲ್ಲಿ ಕ್ಯಾಂಪಸ್ ಮೂಲಕ ಆಯ್ಕೆಯಾಗಿ ಕೆಲಸ ಗಿಟ್ಟಿಸಿದ್ದಾರೆ ಎಂಬುದು ಫೌಂಡೇಶನ್‌ಗೆ ಹೆಮ್ಮೆ ಎನಿಸಿದ ವಿಷಯ. ಕನ್ನಡ ಮಕ್ಕಳಿಗೆ ಅಭಿನಂದನೆಯನ್ನು ಪರಮಪೂಜ್ಯ ಜಗದ್ಗುರು ಶ್ರೀ ಡಾ. ನಿರ್ಮಲಾನಂದನಾಥ ಮಹಾಸ್ವಾಮೀಜಿಗಳ ಆಶೀರ್ವಾದದೊಂದಿಗೆ ಮತ್ತು ಗಣ್ಯಾತಿ ಗಣ್ಯರ ಸಮ್ಮುಖದಲ್ಲಿ ಸನ್ಮಾನಿಸಿದ ಅತ್ಯಂತ ಸುಂದರವಾದ ಕಾರ್ಯಕ್ರಮ ದೆಹಲಿ ಕರ್ನಾಟಕ ಸಂಘದಲ್ಲಿ ನಡೆದಿದೆ. ಇದಕ್ಕೆ ಕಾರಣಕರ್ತರಾದ ನವದೆಹಲಿ ನಾಡಪ್ರಭು ಕೆಂಪೇಗೌಡ ಫೌಂಡೇಶನ್‌ನ ಅಧ್ಯಕ್ಷರಾದ ಶ್ರೀ ಬಿ.ಎಲ್. ಸುರೇಶ್ ಡಿಸಿಪಿ ಅವರಿಗೆ ಮತ್ತು ಎಲ್ಲಾ ಪದಾಧಿಕಾರಿಗಳಿಗೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಹಾಗೇಯೇ, ಈ ವರ್ಷದ ಪದ್ಮ ಪ್ರಶಸ್ತಿಗಳನ್ನು ಸ್ವೀಕರಿಸಲಿರುವ ಕನ್ನಡ ನಾಡಿನ 9 ಸಾಧಕರಿಗೆ ದೆಹಲಿ ಕರ್ನಾಟಕ ಸಂಘದ ಪರವಾಗಿ ಅಭಿನಂದನೆಗಳು.

**ಕೊನೆಯದಾಗಿ ಪ್ರಸ್ತುತ ಎಲ್ಲಾ ದೆಹಲಿ ಕರ್ನಾಟಕ ಸಂಘದ ಸದಸ್ಯರಲ್ಲಿ ಒಂದು ಮನವಿ ದೆಹಲಿ ಕರ್ನಾಟಕ ಸಂಘದ ನಿಯಮಾವಳಿ ಪ್ರಕಾರ ಹತ್ತು ವರ್ಷದ ನಂತರ ಎಲ್ಲಾ ಸದಸ್ಯರುಗಳು 50 ರೂಪಾಯಿ ನೀಡುವ ಮೂಲಕ ಸಂಘದಲ್ಲಿನ ಅವರ ಸದಸ್ಯತ್ವವನ್ನು ಮರು ನೊಂದಣಿ ಮಾಡಿಸಬೇಕು. ಆದಕಾರಣ ಸಂಘದಲ್ಲಿ ಸದಸ್ಯತ್ವ ಪಡೆದು 10 ವರ್ಷ ತುಂಬಿದ ಎಲ್ಲಾ ಸದಸ್ಯರುಗಳು ತಮ್ಮ ಸದಸ್ಯತ್ವವನ್ನು ಪುನರ್ ನವೀಕರಣ (ರಿನ್ಯೂವಲ್) ಮಾಡಿಸಿ ಎಂದು ನಿಮ್ಮಲ್ಲಿ ಪ್ರಾರ್ಥಿಸಿಕೊಳ್ಳುತ್ತಿದ್ದೇನೆ.**

**ಸತ್ಯಮೇವ ಜಯತೆ.. ಜೈ ಭುವನೇಶ್ವರಿ...**
***ಜೈ ಕನ್ನಡಾಂಬೆ....***

***ಸಿ.ಎಂ. ನಾಗರಾಜ***
ಅಧ್ಯಕ್ಷರು

## ಮುನ್ನೋಟ

ದೆಹಲಿಯ ಎಲ್ಲಾ ಕನ್ನಡ ಬಾಂಧವರಿಗೆ ಸಕ್ಷೇಮ ನಮಸ್ಕಾರಗಳು. ದಿನಾಂಕ 21.01.2024 ರಂದು ಸಂಘದ ಕಾರ್ಯಕಾರಿ ಸಮಿತಿಯ ಆಯ್ಕೆಗಾಗಿ ನಡೆದ ಚುನಾವಣೆಯಲ್ಲಿ ಈವರೆಗಿನ ದಾಖಲೆ ಸಂಖ್ಯೆಯಲ್ಲಿ ಭಾಗವಹಿಸಿ ತಮ್ಮ ಮತ ಚಲಾವಣೆ ಮಾಡುವುದರ ಮೂಲಕ ಪ್ರಜಾಪ್ರಭುತ್ವ ವ್ಯವಸ್ಥೆಯ ತಮ್ಮ ಹಕ್ಕು ಹಾಗೂ ಭಾದ್ಯತೆಯನ್ನು ಸಮರ್ಪಕವಾಗಿ ನಿಭಾಯಿಸಿರುವ ಸಮಸ್ತ ದೆಹಲಿ ಕನ್ನಡ ಸದಸ್ಯ ಬಾಂಧವರಿಗೆ ಇಡೀ ಕಾರ್ಯಕಾರಿ ಸಮಿತಿಯ ಪರವಾಗಿ ಹಾರ್ದಿಕ ಅಭಿನಂದನೆಗಳನ್ನು ಸಲ್ಲಿಸುತ್ತಿದ್ದೇನೆ.

ಜೊತೆಗೆ ಈ ಬಾರಿ ಅತ್ಯಂತ ಅನುಭವಿಗಳಾದ ಶ್ರೀ ಸಿ.ಎಂ. ನಾಗರಾಜ, ಡಾ. ವೆಂಕಟಾಚಲ ಜಿ. ಹೆಗಡೆ ಹಾಗೂ ಶ್ರೀ ವಸಂತ ಶೆಟ್ಟಿ ಬೆಳ್ಳಾರೆಯವರಂತಹ ಹಿರಿಯರೊಂದಿಗೆ ಅತ್ಯಂತ ಜನಪ್ರಿಯ ಹಾಗೂ ಸಹೃದಯಿ ಕನ್ನಡಿಗರ ತಂಡವನ್ನು ಕಾರ್ಯಕಾರಿ ಸಮಿತಿಗೆ ಆಯ್ಕೆ ಮಾಡಿರುತ್ತೀರಿ.ಇದರೊಂದಿಗೆ ಹೊಸ ತಂಡಕ್ಕೆ ಸಂಘವನ್ನು ಸಾಂಸ್ಕೃತಿಕವಾಗಿ, ಸುಸಂಸ್ಕೃತಿಯೊಂದಿಗೆ, ಕಾನೂನುಬದ್ಧವಾಗಿ ನಡೆಸಬೇಕಾದಂತಹ ಜವಾಬ್ದಾರಿಯನ್ನು ನೀಡಿರುತ್ತೀರಿ.

ಅಮೃತ ಕಾಲದ ಗುಂಗಿನಿಂದ ಹೊರಬಂದು ನಾವೀಗ ಕೆಲವು ಅರ್ಥಪೂರ್ಣ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬೇಕಾಗಿದೆ ಜೊತೆಗೆ ಸಂಘದ ಆರ್ಥಿಕ ಸ್ಥಿತಿಗತಿಗನುಸಾರವಾಗಿ ಸೂಕ್ತ ಯೋಜನೆಗಳನ್ನು ಹಾಕಿಕೊಳ್ಳಬೇಕು. ಈ ನಿಟ್ಟಿನಲ್ಲಿ ಸರ್ವ ಸದಸ್ಯರ ಸಲಹೆ ಸಹಕಾರ ಅಗತ್ಯ. ನಿಮ್ಮ ಸಲಹೆ ಸಹಕಾರಕ್ಕೆ ಸಂಘದಲ್ಲಿ ಸದಾ ಸ್ವಾಗತವಿದೆ. ಸಂಘ ಆಯೋಜಿಸುವ ಕಾರ್ಯಕ್ರಮಗಳಲ್ಲಿ ಸದಾಕಾಲ ಭಾಗವಹಿಸಿ ಮತ್ತು ಬೆಂಬಲಿಸಿ.

ಆದುದರಿಂದ ದೆಹಲಿಯಲ್ಲಿ ನೆಲೆಸಿರುವ ವಿವಿಧ ವರ್ಗದ, ವಿವಿಧ ವೃತ್ತಿಪರ ಸದಸ್ಯರೊಂದಿಗೆ ಚರ್ಚೆ ನಡೆಸಿ ಮುಂಬರುವ ಕಾರ್ಯಕ್ರಮಗಳಿಗೆ ಹೊಸ ರೂಪ ನೀಡುವುದರೊಂದಿಗೆ ಅವರನ್ನೂ ಸಂಘದ ಕಾರ್ಯ ಚಟುವಟಿಕೆಗಳಲ್ಲಿ ಪಾಲುದಾರರನ್ನಾಗಿಸುವ ನಿಟ್ಟಿನಲ್ಲಿ ಕಾರ್ಯ ನಿರ್ವಹಿಸುವ ಭರವಸೆ ನೀಡುತ್ತಿದ್ದೇನೆ.

ಬನ್ನಿ, ಸಹಕರಿಸಿ, ನಾವು–ನೀವು ಜೊತೆಗೂಡಿ ಸಂಘದ ಹಿತ ಕಾಪಾಡೋಣ.

ಶುಭಾಶಯಗಳೊಂದಿಗೆ,

***ರಾಧಾಕೃಷ್ಣ***
*ಪ್ರಧಾನ ಕಾರ್ಯದರ್ಶಿ*

# ದೆಹಲಿ ಕರ್ನಾಟಕ ಸಂಘದಲ್ಲಿ ಸಂಭ್ರಮದ 75ನೇ ಗಣರಾಜ್ಯೋತ್ಸವ ದಿನಾಚರಣೆ



ದೆಹಲಿ ಕರ್ನಾಟಕ ಸಂಘದಲ್ಲಿ 26.01.2024 ರಂದು 75ನೇ ಗಣರಾಜ್ಯೋತ್ಸವವನ್ನು ದೇಶಭಕ್ತಿಯೊಂದಿಗೆ ಬಹಳ ಸಡಗರ ಸಂಭ್ರಮದಿಂದ ಆಚರಿಸಲಾಯಿತು.

ಭಾರತ ದೇಶವು ಬ್ರಿಟೀಷರಿಂದ 1947ರಲ್ಲಿ ಸ್ವಾತಂತ್ರ್ಯ ಪಡೆದ ನಂತರ, ಡಾ. ಬಿ.ಆರ್. ಅಂಬೇಡ್ಕರ್ ಅವರ ಅಧ್ಯಕ್ಷತೆಯಲ್ಲಿ ರೂಪಿತಗೊಂಡ ಸಂವಿಧಾನವನ್ನು 26.01.1950 ರಂದು ಅಂಗೀಕರಿಸಿದ ದಿನವನ್ನು ಕಳೆದ 74 ವರ್ಷಗಳಿಂದ 'ಗಣರಾಜ್ಯೋತ್ಸವ'ವನ್ನಾಗಿ ದೇಶದಾದ್ಯಂತ ಆಚರಿಸುತ್ತಾ ಬಂದಿದ್ದು ಈ ವರ್ಷ ದೇಶದ ಆಜಾದಿ ಕಾ ಅಮೃತ ಕಾಲ ಹಾಗು ಸಂಘದ ಅಮೃತ ಮಹೋತ್ಸವ ಕಾರ್ಯಕಾಲದಲ್ಲಿ 75ನೇ ಗಣರಾಜ್ಯೋತ್ಸವ ದಿನವನ್ನು ದೆಹಲಿ ಕನ್ನಡಿಗರು ಒಟ್ಟು ಸೇರಿ ಸಂಘದ ಆವರಣದಲ್ಲಿ ಆಚರಿಸಿದ್ದು ವಿಶೇಷವಾಗಿತ್ತು. ಶುಕ್ರವಾರ ಬೆಳಿಗ್ಗೆ 10.00 ಗಂಟೆಗೆ ಸಂಘದ ಸಾಂಸ್ಕೃತಿಕ ಸಮುಚ್ಚಯದ ಆವರಣದಲ್ಲಿ ಸಂಘದ ಅಧ್ಯಕ್ಷ ಶ್ರೀ ಸಿ.ಎಂ. ನಾಗರಾಜ ಅವರು ರಾಷ್ಟ್ರ ಧ್ವಜಾರೋಹಣ ಮಾಡಿದರು. ನೆರೆದಿದ್ದ ಸಂಘದ ಕಾರ್ಯಕಾರಿ ಸಮಿತಿ ಪದಾಧಿಕಾರಿಗಳು, ಸಂಘದ ಸದಸ್ಯರು, ಮಹಿಳೆಯರು ಮತ್ತು ಮಕ್ಕಳು ರಾಷ್ಟ್ರಗೀತೆ ಹಾಡಿ ರಾಷ್ಟ್ರ ಧ್ವಜಕ್ಕೆ ನಮನ ಸಲ್ಲಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಅಧ್ಯಕ್ಷ ಶ್ರೀ ಸಿ.ಎಂ. ನಾಗರಾಜ ಅವರು ಸಂಘದ ಅಮೃತ ವರ್ಷದ ಕಾರ್ಯಕಾಲದಲ್ಲಿ ಈ ಗಣರಾಜ್ಯೋತ್ಸವ ಆಚರಿಸುತ್ತಿರುವುದು ಬಹಳ ಸಂತೋಷದ ವಿಷಯ. ನಮ್ಮ ರಾಷ್ಟ್ರವು ಸಂವಿಧಾನವನ್ನು ಅಂಗೀಕರಿಸಿ ಗಣರಾಜ್ಯವಾದ ಈ ದಿನ ದೇಶಕ್ಕೆ ಸ್ವಾತಂತ್ರ್ಯ ತಂದು ಕೊಟ್ಟ ಹೋರಾಟಗಾರರನ್ನು ಸ್ಮರಿಸುವುದು ನಮ್ಮ ಕರ್ತವ್ಯ. ಸಂವಿಧಾನ ಶಿಲ್ಪಿ ಡಾ. ಬಿ.ಆರ್. ಅಂಬೇಡ್ಕರ್ ಅವರ ಸಾಧನೆ ಶ್ಲಾಘನೀಯ ಎಂದರು. ಹಾಗೇನೇ, ಸ್ವಾತಂತ್ರ್ಯಾನಂತರ ಅನೇಕ ರಾಜಮನೆತನಗಳು, ಸಂಸ್ಥಾನಗಳೂ ಅದರಲ್ಲೂ ವಿಶೇಷವಾಗಿ ಮೈಸೂರು ಸಂಸ್ಥಾನವು ದೇಶದ ಅಭಿವೃದ್ಧಿಗೆ ತಮ್ಮದೇ ಆದ ಕೊಡುಗೆಯನ್ನು ನೀಡಿವೆ, ಅವರೆಲ್ಲರನ್ನೂ ಹಾಗೂ ಸ್ವಾತಂತ್ರ್ಯ ಹೋರಾಟದಲ್ಲಿ ಈ ದಿನ ಹುತಾತ್ಮರಾದ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಅವರನ್ನು ಈ ಸಂದರ್ಭದಲ್ಲಿ ಸ್ಮರಿಸುತ್ತೇನೆ, ಸಮಸ್ತ ದೆಹಲಿ ಕನ್ನಡಿಗರಿಗೆ ಹಾರ್ದಿಕ ಶುಭಾಶಯಗಳು ಎಂದು ಹೇಳಿದರು.

ಸಂಘದ ಪ್ರಧಾನ ಕಾರ್ಯದರ್ಶಿ ಶ್ರೀ ಆರ್. ರೇಣುಕುಮಾರ್ ಅವರು ಮಾತನಾಡಿ ದೇಶವು ಸ್ವಾತಂತ್ರ್ಯ ಹೊಂದಿ ಬ್ರಿಟೀಷರ ಆಳ್ವಿಕೆಯಿಂದ ಮುಕ್ತಿ ಪಡೆದ ನಂತರ ಅನೇಕ ರಾಜಮನೆತನ, ಸಂಸ್ಥಾನಗಳನ್ನೆಲ್ಲಾ ಏಕೀಕರಣಗೊಳಿಸಿ ಡಾ. ಅಂಬೇಡ್ಕರ್ ಅವರ ಮುಂದಾಳತ್ವದಲ್ಲಿ ಸಿದ್ಧಪಡಿಸಿದ ಭಾರತದ ಸಂವಿಧಾನವನ್ನು ಅಂಗೀಕರಿಸಿದ ಈ ಸುದಿನವನ್ನು ನಾವು ಗಣರಾಜ್ಯೋತ್ಸವ ದಿನವನ್ನಾಗಿ ಆಚರಿಸುತ್ತಿದ್ದೇವೆ. ಈ ಸಂದರ್ಭ ಇಂದಿನ ಧ್ವಜಾರೋಹಣ ಕಾರ್ಯಕ್ರಮದಲ್ಲಿ ಭಾಗವಹಿಸಿರುವ ಸಮಸ್ತ ದೆಹಲಿ ಕನ್ನಡಿಗರಿಗೆ ಧನ್ಯವಾದಗಳನ್ನು ಹಾಗೂ ದೇಶದ ಜನತೆಗೆ ಅಭಿನಂದನೆಗಳನ್ನು ತಿಳಿಸುತ್ತೇನೆ ಎಂದರು.

ಈ ಕಾರ್ಯಕ್ರಮದಲ್ಲಿ ಹಿರಿಯ ದೆಹಲಿ ಕನ್ನಡಿಗರೂ, ಸಂಘದ ಮಾಜಿ ಅಧ್ಯಕ್ಷರೂ ಹಾಗೂ ಜೆ.ಎನ್.ಯು. ನ ಪ್ರಾಧ್ಯಾಪಕರೂ ಆದ ಡಾ. ವೆಂಕಟಾಚಲ ಜಿ. ಹೆಗಡೆಯವರೂ ಸೇರಿದಂತೆ ಸಂಘದ ಕಾರ್ಯಕಾರಿ ಸಮಿತಿಯ ಪದಾಧಿಕಾರಿಗಳೂ, ಸಂಘದ ಸದಸ್ಯರು, ಮಕ್ಕಳು, ಮಹಿಳೆಯರೂ ಹಾಗು ಉತ್ತಮ ಸಂಖ್ಯೆಯಲ್ಲಿ ದೆಹಲಿ ಕನ್ನಡಿಗರು ಭಾಗವಹಿಸಿ ದೇಶಪ್ರೇಮ ಮೆರೆದರು. ■

***ಅಭಿಮತ ವರದಿ***

## ಅಭಿನಂದನೆ



ಬೆಂಗಳೂರಿನಲ್ಲಿ ಕರ್ನಾಟಕ ರಾಜ್ಯ ಪೊಲೀಸ್ ಇಲಾಖೆಯ 1 ನೇ ಪಡೆ, ಕೆಎಸ್ಐಎಸ್ಎಫ್ ನಲ್ಲಿ ಪೊಲೀಸ್ ಅಧೀಕ್ಷಕರು ಮತ್ತು ಕಮಾಂಡೆಂಟ್ ಆಗಿರುವ ಹೆಮ್ಮೆಯ ಕನ್ನಡಿಗರಾದ ಶ್ರೀ ಎ. ನಾಗರಾಜ ಅವರು, ತಮ್ಮ ಸೇವಾವಧಿಯಲ್ಲಿ ನಿರ್ವಹಿಸಿದ ಅತ್ಯುತ್ತಮ ಕೆಲಸಗಳನ್ನು ಪರಿಗಣಿಸಿ ಗಣರಾಜ್ಯೋತ್ಸವ ದಿನದಂದು ಮಾನ್ಯ ರಾಷ್ಟ್ರಪತಿಗಳು ದಯಪಾಲಿಸುವ 'ಶ್ಲಾಘನೀಯ ಸೇವಾ ಪದಕ'ವನ್ನು ಪಡೆದಿರುತ್ತಾರೆ. ಹಾಗು ವೈಮಾನಿಕ ಭದ್ರತೆ ತರಬೇತಿ ಸಂಸ್ಥೆ, ಕೆಎಸ್ಐಎಸ್ಎಫ್ ಘಟಕದ ಮುಖ್ಯಸ್ಥರಾಗಿ ಇವರು ನಿರ್ವಹಿಸಿರುವ ಕೆಲಸ ಕಾರ್ಯಗಳನ್ನು ಮೆಚ್ಚಿ ಡೈರೆಕ್ಟರ್ ಜನರಲ್, ಬಿಸಿಎಎಸ್ ನವದೆಹಲಿ ಅವರು 'ಶ್ಲಾಘನೀಯ ಪತ್ರ'ವನ್ನು ಸಹಾ ಇವರಿಗೆ ನೀಡಿ ಗೌರವಿಸಿರುತ್ತಾರೆ. ಇದು ನಾಡಿನ ಎಲ್ಲ ಕನ್ನಡಿಗರಿಗೂ ಹೆಮ್ಮೆಯ ವಿಷಯ.

ದಕ್ಷ ಪೋಲಿಸ್ ಅಧಿಕಾರಿಯಾಗಿರುವ ಶ್ರೀ ಎ. ನಾಗರಾಜ ಅವರು ಮೂಲತಃ ಕೋಲಾರ ಜಿಲ್ಲೆಯವರು. ಪೋಲಿಸ್ ಇಲಾಖೆಯಲ್ಲಿ ಪ್ರಮುಖ ಜವಾಬ್ದಾರಿಗಳನ್ನು ನಿಭಾಯಿಸಿರುವ ಇವರು, ಈ ಹಿಂದೆ ಕಾಡಗಳ್ಳ ವೀರಪ್ಪನ್ ವಿರುದ್ಧದ ಕಾರ್ಯಾಚರಣೆ (ಎಸ್‌ಟಿಎಫ್)ಯಲ್ಲಿ ಯಶಸ್ವಿಯಾಗಿ ಪಾಲ್ಗೊಂಡಿದ್ದರು.

ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷರಾದ ಶ್ರೀ ಸಿ.ಎಂ. ನಾಗರಾಜ ಅವರ ಆತ್ಮೀಯ ಮಿತ್ರರಾದ ಶ್ರೀಯುತರು ಇತ್ತೀಚೆಗೆ ದೆಹಲಿಯಲ್ಲಿ ಸಂಘಕ್ಕೆ ಭೇಟಿ ನೀಡಿದ ಸಂದರ್ಭ ಅವರನ್ನು ಸಮಸ್ತ ದೆಹಲಿ ಕನ್ನಡಿಗರ ಪರವಾಗಿ ಗೌರವಿಸಿ ಅಭಿನಂದಿಸಲಾಯಿತು. ಅವರಿಗೆ ಹಾರ್ದಿಕ ಶುಭಾಶಯಗಳು.

## ದೆಹಲಿ ಕರ್ನಾಟಕ ಸಂಘದ ಜನಪ್ರಿಯ

# 'ಕೈರುಚಿ' ಆಹಾರ ಮೇಳಕ್ಕೆ ಅಪಾರ ಜನಮನ್ನಣೆ





ದೆಹಲಿ ಕರ್ನಾಟಕ ಸಂಘದ ಆವರಣದಲ್ಲಿ ದಿನಾಂಕ 03.12.2023 ರಂದು ಕರ್ನಾಟಕದ ವಿವಿಧ ಜಿಲ್ಲೆಗಳ ತಿಂಡಿ ತಿನಿಸುಗಳ 'ಕೈರುಚಿ' ಆಹಾರಮೇಳವನ್ನು ಆಯೋಜಿಸಲಾಗಿತ್ತು. ಸ್ಥಳೀಯ ಕನ್ನಡಿಗರು ಹಾಕಿದ್ದ ಸುಮಾರು 26 ಆಹಾರ ಮಳಿಗೆಗಳಲ್ಲಿ ವಿಶೇಷವಾಗಿ ಕನ್ನಡಿಗ ಗೃಹಿಣಿಯರು ತಮ್ಮ ತಮ್ಮ ಮನೆಯಲ್ಲಿ ತಯಾರು ಮಾಡಿ ತಂದ ಶುಚಿ ರುಚಿಯಾದ ತಿಂಡಿ ತಿನಿಸುಗಳನ್ನು ಅಪಾರ ಸಂಖ್ಯೆಯಲ್ಲಿ ಭಾಗವಹಿಸಿದ್ದ ದೆಹಲಿ ಕನ್ನಡಿಗರಿಗೆ ಉಣಬಡಿಸಿದರು.

ಕಳೆದ ಏಳು ವರ್ಷಗಳಿಂದ ಪ್ರತಿ ವರ್ಷವೂ ದೆಹಲಿ ಕರ್ನಾಟಕ ಸಂಘವು ಚಳಿಗಾಲದ ತಿಂಗಳುಗಳಲ್ಲಿ ದೆಹಲಿ ಕನ್ನಡಿಗರಲ್ಲಿ ಬಹಳ ಜನಪ್ರಿಯವಾಗಿರುವ ಆಹಾರ ಮೇಳವನ್ನು ಆಯೋಜಿಸುತ್ತಾ ಬಂದಿದೆ. ಈ ವರ್ಷ ಏರ್ಪಡಿಸಿದ ಎಂಟನೇ ಆಹಾರ ಮೇಳದಲ್ಲಿ ದೆಹಲಿ ಎನ್‌ಸಿಆರ್ ನ ಕನ್ನಡತಿಯರು ಬಹಳ ಉತ್ಸಾಹದಿಂದ ಆಹಾರ ಮಳಿಗೆಗಳಲ್ಲಿ ಕರ್ನಾಟಕದ ವಿವಿಧ ಜಿಲ್ಲೆಗಳ ವೈವಿಧ್ಯಮಯ ಆಹಾರ ಪದಾರ್ಥಗಳನ್ನು, ರುಚಿಕರವಾದ ಸಸ್ಯಹಾರ ಮತ್ತು ಮಾಂಸಹಾರ ತಿಂಡಿ ತಿನಿಸುಗಳನ್ನು ಬಹಳ ಆಕರ್ಷಕವಾದ ದರದಲ್ಲಿ (ಕನಿಷ್ಠ 10 ರೂಪಾಯಿ, ಗರಿಷ್ಠ 100 ರೂಪಾಯಿ) ಇಲ್ಲಿನ ಜನರಿಗೆ ನೀಡಿದರು.

ಭಾನುವಾರ ಬೆಳಿಗ್ಗೆ 10.30 ಕ್ಕೆ ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಜಾದುಗಾರ್ ಶ್ರೀ ಎಂಡಿ. ಕೌಶಿಕ್ ಅವರ ಉಪಸ್ಥಿತಿಯಲ್ಲಿ ಈ ಬಾರಿಯ ಸಂಘದ ವಿಶಿಷ್ಟ ಕನ್ನಡಿಗ ಪ್ರಶಸ್ತಿ ಪುರಸ್ಕೃತ ಪೊಲೀಸ್ ಅಧಿಕಾರಿ, ಶ್ರೀ ಬಿ.ಎಲ್. ಸುರೇಶ್, ಡಿಸಿಪಿ, ಕ್ರೈಂ ಅಂಡ್ ವ್ಯುಮೆನ್ ಸೆಲ್ ದೆಹಲಿ ಪೊಲೀಸ್ ಅವರು ಆಹಾರ ಮೇಳವನ್ನು ಉದ್ಘಾಟಿಸಿದರು. ಈ ಸಂದರ್ಭದಲ್ಲಿ ಕೇಂದ್ರ ಸಂಸ್ಕೃತಿ ಇಲಾಖೆಯ ನಿರ್ದೇಶಕರಾದ ಶ್ರೀ ಭಟ್ನಾಗರ್ ಮತ್ತು ಅವರ ಪತ್ನಿ ಉಪಸ್ಥಿತರಿದ್ದರು.

ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷ ಶ್ರೀ ಸಿ.ಎಂ. ನಾಗರಾಜ ಅವರು ಮಾತನಾಡಿ, ಪ್ರತಿ ವರ್ಷದಂತೆ ಈ ವರ್ಷವೂ ಆಹಾರ ಮೇಳವನ್ನು ಆಯೋಜಿಸಿದ್ದೇವೆ, ಈ ಬಾರಿ 26 ಮಳಿಗೆಗಳನ್ನು ಹಾಕಲಾಗಿದ್ದು, ನಮ್ಮ ದೆಹಲಿ ಕನ್ನಡಿಗ ಮಹಿಳೆಯರು ಬಹಳ ಉತ್ಸಾಹದಿಂದ ಈ ಕಾರ್ಯಕ್ರಮದಲ್ಲಿ ವಿವಿಧ ಬಗೆಯ ತಿಂಡಿ ತಿನಿಸುಗಳನ್ನು ಆಗಮಿಸಿರುವ ದೆಹಲಿ ಕನ್ನಡಿಗರಿಗೆ ಮತ್ತು ಕನ್ನಡೇತರರಿಗೆ ಬಹಳ ಅಲ್ಪ ದರದಲ್ಲಿ ನೀಡುತ್ತಿದ್ದಾರೆ, ಜೊತೆಗೆ ವಿಶೇಷವಾಗಿ ಮಕ್ಕಳಿಗೆ ಮತ್ತು ಆಸಕ್ತರಿಗೆ ಜಾದುಗಾರ ಶ್ರೀ ಎಂ.ಡಿ. ಕೌಶಿಕ್ ಮತ್ತು ಸಂಗಡಿಗರಿಂದ ಮ್ಯಾಜಿಕ್ ಶೋ ಮತ್ತು ಸಂಜೆ ಜನಪ್ರಿಯ ಕನ್ನಡ ನಟ ಹ್ಯಾಟ್ರಿಕ್ ಹೀರೊ ಶಿವರಾಜ್ ಕುಮಾರ್ ಅಭಿನಯದ 'ಘೋಸ್ಟ್' ಚಲನಚಿತ್ರವನ್ನು ಪ್ರದರ್ಶಿಸುತ್ತಿದ್ದೇವೆ. ಕನ್ನಡಿಗರು ಈ ನಮ್ಮ ಆಹಾರ ಮೇಳದಲ್ಲಿ ಕರ್ನಾಟಕ ಶೈಲಿಯ ತಿಂಡಿ ತಿನಿಸುಗಳ ರುಚಿಯನ್ನು ಸವಿಯಬೇಕೆಂದು ಹಾಗು ಮ್ಯಾಜಿಕ್ ಶೋ ಮತ್ತು ಸಿನಿಮಾ ಶೋಗಳನ್ನು ವೀಕ್ಷಿಸಿ ಆನಂದಿಸಬೇಕೆಂದು ಕೇಳಿಕೊಂಡರು. ಆಹಾರ ಮಳಿಗೆ ಹಾಕಿರುವ ಎಲ್ಲಾ ಮಹಿಳೆಯರಿಗೆ, ಉದ್ಘಾಟನೆ ಮಾಡಿದ ಡಿಸಿಪಿ ಶ್ರೀ ಬಿ.ಎಲ್. ಸುರೇಶ್, ಮುಖ್ಯ ಅತಿಥಿ ಶ್ರೀ ಎಂ.ಡಿ. ಕೌಶಿಕ್ ಅವರಿಗೆ ಧನ್ಯವಾದಗಳನ್ನು ಅರ್ಪಿಸಿದರು. ಹಾಗೇನೇ, ಆಹಾರ ಮಳಿಗೆಗಳನ್ನು ಹಾಕಿದ ಕನ್ನಡಿಗರಿಗೆ ದೆಹಲಿ ಕರ್ನಾಟಕ ಸಂಘದ ವತಿಯಿಂದ ಸಹಾಯಧನ ಮತ್ತು ವಿಶೇಷ ಬಹುಮಾನಗಳನ್ನು ನೀಡಲಾಗುವುದು ಎಂದು ಅಧ್ಯಕ್ಷರು ತಿಳಿದರು.

ಉದ್ಘಾಟನಾ ಕಾರ್ಯಕ್ರಮದಲ್ಲಿ ಸಂಘದ ಪ್ರಧಾನ ಕಾರ್ಯದರ್ಶಿ ಶ್ರೀ ಆರ್. ರೇಣುಕುಮಾರ್, ಖಜಾಂಚಿ ಶ್ರೀ ರಾಧಾಕೃಷ್ಣ, ಕಾರ್ಯಕಾರಿ ಸಮಿತಿ ಪದಾಧಿಕಾರಿಗಳು ಮತ್ತು ಸದಸ್ಯರು, ಹಿರಿಯ ದೆಹಲಿ ಕನ್ನಡಿಗರು, ಮಹಿಳೆಯರು ಮತ್ತು ಮಕ್ಕಳು ಭಾಗವಹಿಸಿದ್ದರು. ಸಂಘದ ಜಂಟಿ ಕಾರ್ಯದರ್ಶಿ ಶ್ರೀಮತಿ ಸುಮಿತಾ ಮುರಗೋಡ ಅವರು ಅಧ್ಯಕ್ಷರ ಜೊತೆ ಸಂಚಾಲಕರಾಗಿ ಆಹಾರ ಮೇಳದ ಆಯೋಜನೆಯಲ್ಲಿ ಸಹಕರಿಸಿದರು.

ಆಹಾರ ಪ್ರಿಯರಿಗೆ ಕೂಪನ್ ಖರೀದಿಸುವ ವ್ಯವಸ್ಥೆ ಮಾಡಲಾಗಿತ್ತು, ವಿವಿಧ ಆಹಾರ ಮಳಿಗೆಗಳಲ್ಲಿ ಕೂಪನ್ ಕೊಟ್ಟು ನಾನಾ ಬಗೆಯ ದಕ್ಷಿಣ ಮತ್ತು ಉತ್ತರ ಭಾರತೀಯ ಸಸ್ಯಾಹಾರ ಮತ್ತು ಮಾಂಸಹಾರ ತಿನಿಸುಗಳನ್ನು ಪಡೆಯಬಹುದಾಗಿತ್ತು. ವಿಶೇಷವಾಗಿ ಜೋಳದ ರೊಟ್ಟಿ, ರಾಗಿಮುದ್ದೆ, ಬಿಸಿ ಬಿಸಿ ಇಡ್ಲಿ, ದಾವಣಗೆರೆ ಬೆಣ್ಣೆ ದೋಸೆ, ನಾಟಿ ಕೋಳಿ ಸಾರು, ಚಿಕನ್ ಚಾಪ್, ಮಟನ್ ಫ್ರೈ, ಫಿಶ್ ಫ್ರೈ, ಚಿಕನ್ 65 ಮಟನ್ ಮಸಾಲ, ಅವರೆಕಾಯಿ ಬಿಸಿಬೇಳೆ ಬಾತ್, ಲೆಮನ್ ರೈಸ್, ಒಡೆ, ಗೋಳಿಬಜೆ, ಮೆಣಸಿನಕಾಯಿ ಬೋಂಡ, ಶೇಂಗಾ ಹೋಳಿಗೆ, ವಿವಿಧ ಬಗೆಯ ಸಿಹಿ ತಿಂಡಿಗಳು, ಕಾಫಿ ಟೀ, ಟೊಮ್ಯಾಟೋ ಸೂಪ್ ಮುಂತಾದವು ವಿವಿಧ ಮಳಿಗೆಗಳಲ್ಲಿ ಲಭ್ಯವಿದ್ದವು. ಸುಮಾರು 3500ಕ್ಕೂ ಹೆಚ್ಚು ದೆಹಲಿ ಕನ್ನಡಿಗರು ಈ ಆಹಾರ ಮೇಳದಲ್ಲಿ ಪಾಲ್ಗೊಂಡು ಬಗೆ ಬಗೆಯ ಕರ್ನಾಟಕ ಶೈಲಿಯ ಆಹಾರ ಪದಾರ್ಥಗಳ ರುಚಿಯನ್ನು ಸವಿದು ಆನಂದ ಪಟ್ಟರು.



ಮಧ್ಯಾಹ್ನದ ವೇಳೆ ಶ್ರೀ ಎಂ.ಡಿ. ಕೌಶಿಕ್ ಮತ್ತು ತಂಡದವರಿಂದ ಸಂಘದ ಸಭಾಂಗಣದಲ್ಲಿ ಪ್ರದರ್ಶನಗೊಂಡ ಅತ್ಯದ್ಭುತ ಮ್ಯಾಜಿಕ್ ಶೋ ನೆರೆದಿದ್ದ ಮಕ್ಕಳು, ಮಹಿಳೆಯರು ಮತ್ತು ಸಭಿಕರನ್ನು ರೋಮಾಂಚನಗೊಳಿಸಿತು. ವಿಶೇಷವಾಗಿ ಸ್ಥಳೀಯ ಮಕ್ಕಳು ವಿಸ್ಮಯಭರಿತ ಮ್ಯಾಜಿಕ್ ಶೋ ವೀಕ್ಷಿಸಿ ಆನಂದಪಟ್ಟರು. ನಂತರ ಸಭಾಂಗಣದಲ್ಲಿ ಪ್ರದರ್ಶಿಸಲ್ಪಟ್ಟ ನಟ ಶ್ರೀ ಶಿವರಾಜಕುಮಾರ್ ಅವರು ನಟಿಸಿರುವ 'ಘೋಸ್ಟ್' ಚಲನಚಿತ್ರವು ಸಿನೆಮಾ ಪ್ರಿಯರಿಗೆ ಬಹಳ ದಿನಗಳ ನಂತರ ದೆಹಲಿಯಲ್ಲಿ ಕನ್ನಡ ಚಿತ್ರವನ್ನು ದೊಡ್ಡ ಪರದೆ ಮೇಲೆ ನೋಡುವ ಅವಕಾಶ ಕಲ್ಪಿಸಿತ್ತು, ಒಟ್ಟಾರೆ, ರಜಾ ದಿನ ಭಾನುವಾರದಂದು ಸಂಘದ ಕೈರುಚಿ ಆಹಾರ ಮೇಳದಲ್ಲಿ ಭಾಗಿಯಾದ ದೆಹಲಿ ಕನ್ನಡಿಗರು ಕರ್ನಾಟಕ ರಾಜ್ಯದ ನಾನಾ ಪ್ರದೇಶಗಳ ವಿವಿಧ ಜಿಲ್ಲೆಯ ಬಗೆ ಬಗೆಯ ತಿಂಡಿ ಪದಾರ್ಥಗಳನ್ನು ಸಂಘದ ಆವರಣದಲ್ಲಿ ಸವಿದು ಸಂಭ್ರಮಿಸಿದರು. ಕೆಲವೊಂದು ಆಹಾರ ಮಳಿಗೆಗಳಲ್ಲಿ ಜನಸಂದಣೆ ದಟ್ಟವಾಗಿತ್ತು, ಕೆಲವು ತಿಂಡಿ ತಿನಿಸುಗಳಿಗೆ ಅಪಾರ ಬೇಡಿಕೆ ಇತ್ತು. ಸಂಘದ ಆವರಣವು ಆಹಾರ ಪ್ರಿಯ ಕನ್ನಡಿಗರಿಂದ ತುಂಬಿ ತುಳುಕಿತ್ತು.

ಸಂಘದ ಅಮೃತ ಮಹೋತ್ಸವ ಕಾರ್ಯಕಾಲದಲ್ಲಿ ಯಶಸ್ವಿಯಾಗಿ ಆಯೋಜನೆಗೊಂಡ ಕಾರ್ಯಕ್ರಮಗಳ ಪಟ್ಟಿಗೆ ಕೈರುಚಿ ಆಹಾರ ಮೇಳವು ಸೇರಿತ್ತು.■

***ಅಭಿಮತ ವರದಿ***

## 03.12.2023ರಂದು ಸಂಘದ ಆವರಣದಲ್ಲಿ ನಡೆದ ಕೈರುಚಿ ಆಹಾರ ಮೇಳದ ಮಳಿಗೆಗಳ ದೃಶ್ಯಾವಳಿ



















**26 ವಿವಿಧ ಆಹಾರ ಮಳಿಗೆಗಳನ್ನು ಹಾಕಿ ತಿಂಡಿ ತಿನಿಸುಗಳನ್ನು ನೀಡಿದ ದೆಹಲಿ ಕನ್ನಡಿಗರು ಶ್ರೀಮತಿಯರಾದ**

- ಸುಮಾ ಜೋತೆಪ್ಪ (ಸಸ್ಯಹಾರ)
- ಸುಮಿತಾ ಮುರಗೋಡ (ಕಿಡ್ಸ್ ಸ್ಪೆಷಲ್)
- ಲಕ್ಷ್ಮೀ ಕಿಣಿ (ಸಸ್ಯಾಹಾರ)
- ಸುಜಾತ ನಾಯಕ್ (ಸಸ್ಯಾಹಾರ)
- ಮಾಯಾ ರಾವ್ (ಸಸ್ಯಾಹಾರ)
- ಪಾರ್ವತಿ ಉಭಾಳೆ (ಸಸ್ಯಾಹಾರ)
- ರೂಪಶ್ರೀ ನರಸಿಂಹಮೂರ್ತಿ (ಸಸ್ಯಾಹಾರ)
- ಸವಿತಾ ನೆಲ್ಲಿ (ಡೆಸೆರ್ಟ್ ಕಾರ್ನರ್)
- ಶೃತಿ ರಮೇಶ್ (ದಾವಣಗೆರೆ ಸ್ಪೆಷಲ್ ಸಸ್ಯಾಹಾರ)
- ಸರಸ್ವತಿ (ಸಸ್ಯಾಹಾರ)
- ಶ್ವೇತಾ ಸುಧೀರ್ (ಮಲೆನಾಡು ವೈವಿಧ್ಯಗಳು–ಸಸ್ಯಾಹಾರ)
- ಸುಜಾತ ನಿಂಬಾಳ್ (ಸಸ್ಯಾಹಾರ)
- ಉಷಾ ಬಿರಾದಾರ (ಕಲ್ಯಾಣ ಕರ್ನಾಟಕ–ಸಸ್ಯಾಹಾರ)
- ರತ್ನ (ಮಂಡ್ಯ ಸ್ಪೆಷಲ್ –ಮಾಂಸಾಹಾರ)
- ಸುನಂದ ಸಾಬುದರ್ಗಾ (ಬಿಜಾಪುರ ಸ್ಪೆಷಲ್–ಮಾಂಸಾಹಾರ)
- ಆಶಾಲತಾ ಎಂ.(ಮಂಡ್ಯ–ಮಾಂಸಾಹಾರ)
- ಕವಿತಾ ಲಕ್ಷ್ಮಣ ಕಟ್ಟಿಮನಿ (ವಿಜಯಪುರ–ಮಾಂಸಾಹಾರ)
- ಶ್ರೀಲಕ್ಷ್ಮೀ ಚಂದ್ರಶೇಖರ (ಮಾಂಸಾಹಾರ)
- ಶೃತಿ ವಿನೋದ್ ಕೈಕಾಡೆ (ನಮ್ಮ ಬೆಳಗಾವಿ–ಮಾಂಸಾಹಾರ)
- ಪ್ರಿಯದರ್ಶಿನಿ ಮರಿಬಸಪ್ಪ (ಗಣಿನಾಡು ಬಳ್ಳಾರಿ–ಮಾಂಸಾಹಾರ)
- ಭಾರತಿ ತಿಮ್ಮಪ್ಪ (ಚಿಕ್ಕಮಗಳೂರು ಸ್ಪೆಷಲ್–ಮಾಂಸಾಹಾರ)
- ಶೃತಿ ಭಜಂತ್ರಿ (ಮಾಂಸಾಹಾರ)

**ಶ್ರೀಯುತರಾದ**

- ಯು.ಜಿ. ಸುಧೀರ್ ಕುಮಾರ್ (ಮಾಂಸಾಹಾರ)
- ಮಾಧವ (ಕರಾವಳಿ ಸ್ಪೆಷಲ್–ಮಾಂಸಾಹಾರ),
- ಗೋಪಾಲ್ ತಲವಾರ್ (ಮಾಂಸಾಹಾರ)
- ಗೌರಿಶಂಕರ ಫುಡ್ ಇಂಡಸ್ಟ್ರೀಸ್ (ಉತ್ತರ ಕರ್ನಾಟಕದ ವೈಶಿಷ್ಟ ಪೂರ್ಣ ಪ್ಯಾಕ್ಡ್ ಫುಡ್ಸ್)







# ದೆಹಲಿ ಕರ್ನಾಟಕ ಸಂಘದ ವಾರ್ಷಿಕ ಸರ್ವ ಸದಸ್ಯರ ಮಹಾಸಭೆ





ದೆಹಲಿ ಕರ್ನಾಟಕ ಸಂಘದ ಸಭಾಂಗಣದಲ್ಲಿ ದಿನಾಂಕ 14.01.2024 ರಂದು 2022–23ರ ವಾರ್ಷಿಕ ಸರ್ವ ಸದಸ್ಯರ ಮಹಾಸಭೆಯನ್ನು ಕರೆಯಲಾಗಿತ್ತು. ಇದರಲ್ಲಿ ಸುಮಾರು 150 ಕ್ಕೂ ಹೆಚ್ಚು ಸಂಘದ ಸದಸ್ಯರು ಭಾಗವಹಿಸಿದ್ದರು.

ಭಾನುವಾರ ಬೆಳಿಗ್ಗೆ 11.30ರ ವೇಳೆಗೆ ಪ್ರಾರಂಭಗೊಂಡ ಮಹಾಸಭೆ ಮಧ್ಯಾಹ್ನ 4.00 ಗಂಟೆಯವರೆಗೆ ನಡೆಯಿತು. ಸಂಘದ ಅಧ್ಯಕ್ಷರಾದ ಶ್ರೀ ಸಿ.ಎಂ. ನಾಗರಾಜ, ಪ್ರಧಾನ ಕಾರ್ಯದರ್ಶಿ ಶ್ರೀ ಆರ್. ರೇಣುಕುಮಾರ್, ಉಪಾಧ್ಯಕ್ಷರಾದ ಡಾ. ಎಂ.ಎಸ್. ಶಶಿಕುಮಾರ್ ಮತ್ತು ಶ್ರೀಮತಿ ಪೂಜಾ ಪಿ. ರಾವ್, ಖಜಾಂಚಿ ಶ್ರೀ ರಾಧಾಕೃಷ್ಣ ಹಾಗೂ ಜಂಟಿ ಕಾರ್ಯದರ್ಶಿಗಳಾದ ಶ್ರೀ ನಾರಾಯಣ ಬಿ ಮತ್ತು ಶ್ರೀಮತಿ ಸುಮಿತಾ ಮುರಗೋಡ ಅವರು ವೇದಿಕೆಯಲ್ಲಿದ್ದರು.

ಅನೇಕ ಹಿರಿಯ ದೆಹಲಿ ಕನ್ನಡಿಗರು ಹಾಗು ಸಂಘದ ಆಜೀವ ಸದಸ್ಯರು ಸಭೆಯಲ್ಲಿ ಭಾಗವಹಿಸಿ ಅನೇಕ ವಿಷಯಗಳನ್ನು ಚರ್ಚಿಸಿದರು, ಸುಧಾರಣೆಗಳಿಗೆ ಸಲಹೆ ನೀಡಿದರು. ಸಂಘದ ಅಧ್ಯಕ್ಷ ಶ್ರೀ ಸಿ.ಎಂ. ನಾಗರಾಜ ಅವರು ಸದಸ್ಯರ ಪ್ರಶ್ನೆಗಳಿಗೆ ಉತ್ತರ ಮತ್ತು ಪ್ರತಿಕ್ರಿಯೆ ನೀಡಿದರು. ಸಭೆಯಲ್ಲಿ ವಿಷಯಸೂಚಿಗಳನ್ನು ಚರ್ಚಿಸಿ ಅನುಮೋದಿಸಲಾಯಿತು.

ಅನಂತರ ಈ ಬಾರಿ ಹೊಸ ಕಾರ್ಯಕಾರಿ ಸಮಿತಿ ಆಯ್ಕೆ ಚುನಾವಣೆಯನ್ನು ನಡೆಸಲು ನೇಮಿತಗೊಂಡ ಚುನಾವಣಾ ಅಧಿಕಾರಿ ಶ್ರೀ ಡಿವಿಎಸ್. ಮೂರ್ತಿ ಅವರನ್ನು ವೇದಿಕೆಗೆ ಬರಮಾಡಿಕೊಂಡು ಹೂಗುಚ್ಛವನ್ನು ನೀಡಿ ಸಭೆಗೆ ಪರಿಚಯಿಸಲಾಯಿತು. ಶ್ರೀ ಡಿವಿಎಸ್. ಮೂರ್ತಿಯವರು 21.01.2024 ರಂದು ನಡೆಯುವ ಚುನಾವಣಾ ಪ್ರಕ್ರಿಯೆ ಕುರಿತು ಸ್ಥೂಲವಾಗಿ ವಿವರಿಸಿದರು. ನಂತರ ಚುನಾವಣಾ ಕಣದಲ್ಲಿದ್ದ ಅಭ್ಯರ್ಥಿಗಳನ್ನು ಒಬ್ಬೊಬ್ಬರನ್ನಾಗಿ ವೇದಿಕೆಗೆ ಕರೆಯಲಾಯಿತು. ಆಯಾ ಅಭ್ಯರ್ಥಿಗಳು ತಮ್ಮ ಸ್ವ–ಪರಿಚಯ ಸಭೆಗೆ ನೀಡಿ ಮತ ಕೋರಿದರು. ಪ್ರಧಾನ ಕಾರ್ಯದರ್ಶಿಗಳ ವಂದನೆಯೊಂದಿಗೆ ಸಭೆ ಮುಕ್ತಾಯವಾಯಿತು. ಆಗಮಿಸಿದ್ದ ಎಲ್ಲರಿಗೂ ಭೋಜನದ ವ್ಯವಸ್ಥೆ ಮಾಡಲಾಗಿತ್ತು.

**2024-26 ರ ಅವಧಿಗೆ ಸಂಘದ ಹೊಸ ಕಾರ್ಯಕಾರಿ ಸಮಿತಿ ಆಯ್ಕೆ ಚುನಾವಣೆಯಲ್ಲಿ ಸ್ಪರ್ಧಿಸಿದ ಅಭ್ಯರ್ಥಿಗಳು**

**ಅಧ್ಯಕ್ಷ ಸ್ಥಾನಕ್ಕೆ :**
1. ಶ್ರೀ ಸಿ.ಎಂ. ನಾಗರಾಜ
2. ಶ್ರೀ ಆರ್. ರೇಣುಕುಮಾರ್

**ಉಪಾಧ್ಯಕ್ಷ ಸ್ಥಾನಕ್ಕೆ :**
1. ಡಾ. ಎಂ.ಎಸ್. ಶಶಿಕುಮಾರ್
2. ಶ್ರೀ ವಸಂತ ಶೆಟ್ಟಿ ಬೆಳ್ಳಾರೆ

**ಉಪಾಧ್ಯಕ್ಷ ಸ್ಥಾನಕ್ಕೆ** (ಮಹಿಳಾ ಮೀಸಲು)
1. ಶ್ರೀಮತಿ ಪೂಜಾ ಪಿ. ರಾವ್
2. ಶ್ರೀಮತಿ ಶೋಭಾ ಗೌಡ

**ಪ್ರಧಾನ ಕಾರ್ಯದರ್ಶಿ ಸ್ಥಾನಕ್ಕೆ :**
1. ಶ್ರೀ ರಾಧಾಕೃಷ್ಣ
2. ಶ್ರೀ ಸಂತೋಷ ಜೆ.

**ಜಂಟಿ ಕಾರ್ಯದರ್ಶಿ ಸ್ಥಾನಕ್ಕೆ :**
1. ಶ್ರೀ ನಾರಾಯಣ ಬಿ.
2. ಶ್ರೀ ಶಶಿಕಾಂತ್ ಪಿ. ಪಾಟೀಲ್

**ಜಂಟಿ ಕಾರ್ಯದರ್ಶಿ ಸ್ಥಾನಕ್ಕೆ** (ಮಹಿಳಾ ಮೀಸಲು)
1. ಶ್ರೀಮತಿ ಅಶ್ವಿನಿ ಬಿ.ಎಸ್.
2. ಶ್ರೀಮತಿ ಸುಮಿತಾ ಮುರಗೋಡ

**ಖಜಾಂಚಿ ಸ್ಥಾನಕ್ಕೆ :**
1. ಶ್ರೀಮತಿ ಆಶಾಲತಾ ಎಂ.
2. ಶ್ರೀ ಶ್ರೀನಾಥ ಎನ್.ಆರ್.

**ಸದಸ್ಯ ಸ್ಥಾನಕ್ಕೆ :**
1. ಶ್ರೀ ಸಿ.ಎಂ. ಅಂಗಡಿ
2. ಶ್ರೀ ಅರುಣ್ ಸಿ.ಎಸ್.
3. ಶ್ರೀ ಎಚ್.ಎಸ್. ಜಗದೀಶ್
4. ಶ್ರೀಮತಿ ಜಯಶ್ರೀ ಬಸವರಾಜು ಬಿ.ಕೆ.
5. ಶ್ರೀ ಎಸ್. ಕುಮಾರ್
6. ಶ್ರೀ ಕೆ.ಎಸ್. ಮೂರ್ತಿ
7. ಶ್ರೀ ನವೀನ್ ಕುಮಾರ್ ವಿ.
8. ಶ್ರೀ ಪ್ರಭಾಕರ ಮಡ್ಡಿತೋಟ್
9. ಶ್ರೀಮತಿ ರತ್ನ
10. ಶ್ರೀ ಶಶಿಕಾಂತ
11. ಶ್ರೀ ಶಿವಪ್ಪ ಎಂ.
12. ಶ್ರೀ ವಸಂತ ಕುಮಾರ್
13. ಡಾ. ವೆಂಕಟಾಚಲ ಜಿ. ಹೆಗಡೆ

**ಸದಸ್ಯ ಸ್ಥಾನಕ್ಕೆ** (ಮಹಿಳಾ ಮೀಸಲು)
1. ಶ್ರೀಮತಿ ಸಿ.ಪಿ. ಭಾರ್ಗವಿ
2. ಶ್ರೀಮತಿ ಗೀತಾ ಎನ್
3. ಶ್ರೀಮತಿ ಮಾಲಿನಿ ಪ್ರಹ್ಲಾದ
4. ಶ್ರೀಮತಿ ಶುಭಾ ದೇವಿಪ್ರಸಾದ್

21.01.2024 ರಂದು ಭಾನುವಾರ ಬೆಳಿಗ್ಗೆ 8.00 ರಿಂದ ಸಂಜೆ 5.00 ರವರೆಗೆ ನಡೆದ ಮತದಾನದಲ್ಲಿ ಸುಮಾರು 919 ಆಜೀವ ಸದಸ್ಯರು ತಮ್ಮ ಅಮೂಲ್ಯವಾದ ಮತವನ್ನು ಚಲಾಯಿಸಿದರು. ಪದಾಧಿಕಾರಿಗಳು ಮತ್ತು ಸದಸ್ಯರ ಸ್ಥಾನಕ್ಕೆ ಒಟ್ಟಾರೆ 31 ಅಭ್ಯರ್ಥಿಗಳು ಬಹಳ ಸೌಹಾರ್ದಯುತವಾಗಿ ಹಾಗೂ ಸ್ಪರ್ಧಾತ್ಮಕ ಮನೋಭಾವದಿಂದ ಚುನಾವಣೆಯಲ್ಲಿ ಸ್ಪರ್ಧಿಸಿದ್ದರು. ಸಂಜೆ 6.30 ಗಂಟೆಯಿಂದ ಪ್ರಾರಂಭವಾದ ಮತ ಎಣಿಕೆ ಮಧ್ಯ ರಾತ್ರಿಯ ವೇಳೆಗೆ ಮುಕ್ತಾಯವಾಗಿ ಫಲಿತಾಂಶವನ್ನು ಘೋಷಿಸಲಾಯಿತು.

**ಚುನಾವಣಾ ಫಲಿತಾಂಶ**

2024–26ರ ಅವಧಿಯ ನೂತನ ಕಾರ್ಯಕಾರಿ ಸಮಿತಿಗೆ ಚುನಾಯಿತರಾಗಿ ಆಯ್ಕೆಗೊಂಡ ಅಭ್ಯರ್ಥಿಗಳು

**ಪದಾಧಿಕಾರಿಗಳು**

ಶ್ರೀ ಸಿ.ಎಂ. ನಾಗರಾಜ–ಅಧ್ಯಕ್ಷರು

ಶ್ರೀ ವಸಂತ ಶೆಟ್ಟಿ ಬೆಳ್ಳಾರೆ–ಉಪಾಧ್ಯಕ್ಷರು

ಶ್ರೀಮತಿ ಪೂಜಾ ಪಿ. ರಾವ್–ಉಪಾಧ್ಯಕ್ಷರು (ಮಹಿಳಾ ಮೀಸಲು)

ಶ್ರೀ ರಾಧಾಕೃಷ್ಣ–ಪ್ರಧಾನ ಕಾರ್ಯದರ್ಶಿ

ಶ್ರೀ ನಾರಾಯಣ ಬಿ.–ಜಂಟಿ ಕಾರ್ಯದರ್ಶಿ

ಶ್ರೀಮತಿ ಅಶ್ವಿನಿ ಬಿ.ಎಸ್.–
ಜಂಟಿ ಕಾರ್ಯದರ್ಶಿ(ಮಹಿಳಾ ಮೀಸಲು)

ಶ್ರೀಮತಿ ಆಶಾಲತಾ ಎಂ.–ಖಜಾಂಚಿ

**ಸದಸ್ಯರು**

ಡಾ. ವೆಂಕಟಾಚಲ ಜಿ. ಹೆಗಡೆ
ಶ್ರೀ ಕೆ.ಎಸ್. ಮೂರ್ತಿ
ಶ್ರೀ ನವೀನ್ ಕುಮಾರ್ ವಿ.
ಶ್ರೀ ಪ್ರಭಾಕರ ಮಡ್ಡಿತೋಟ್
ಶ್ರೀ ಅರುಣ್ ಸಿ.ಎಸ್.
ಶ್ರೀಮತಿ ಜಯಶ್ರೀ ಬಸವರಾಜು ಬಿ.ಕೆ.

**ಸದಸ್ಯರು** (ಮಹಿಳಾ ಮೀಸಲು)

ಶ್ರೀಮತಿ ಶುಭಾ ದೇವಿಪ್ರಸಾದ್
ಶ್ರೀಮತಿ ಮಾಲಿನಿ ಪ್ರಹ್ಲಾದ

ಈ ಚುನಾವಣೆಯನ್ನು ಶಿಸ್ತು ಪಾಲನೆಯೊಂದಿಗೆ ಅತ್ಯಂತ ಸಮರ್ಪಕವಾಗಿ ನಡೆಸಿಕೊಟ್ಟ ಚುನಾವಣಾ ಅಧಿಕಾರಿ ಶ್ರೀ ಡಿವಿಎಸ್. ಮೂರ್ತಿ, ಸಹಕರಿಸಿದ ಶ್ರೀ ಅನಂತರಾಮ ಅರಳಿ ಹಾಗೂ ಶ್ರಮಿಸಿದ ಸಂಘದ ವ್ಯವಸ್ಥಾಪಕರು ಮತ್ತು ಚುನಾವಣಾ ಸಿಬ್ಬಂದಿಗೆ ದೆಹಲಿ ಕರ್ನಾಟಕ ಸಂಘವು ಕೃತಜ್ಞತೆಗಳನ್ನು ಅರ್ಪಿಸುತ್ತದೆ. ಚುನಾವಣೆಯಲ್ಲಿ ಸ್ಪರ್ಧಿಸಿ ಆಯ್ಕೆಯಾದ ಎಲ್ಲಾ ನೂತನ ಪದಾಧಿಕಾರಿಗಳಿಗೆ ಮತ್ತು ಸದಸ್ಯರಿಗೆ ಅಭಿನಂದನೆಗಳು. ಸ್ಪರ್ಧಿಸಿದ ಎಲ್ಲಾ ಅಭ್ಯರ್ಥಿಗಳಿಗೂ ಹಾಗೂ ಕೊರೆಯುವ ಚಳಿಯಲ್ಲಿ ಸಂಘಕ್ಕೆ ಬಂದು ಮತದಾನ ನೀಡಿದ ಸಂಘದ ಆಜೀವ ಸದಸ್ಯರಿಗೆ ಧನ್ಯವಾದಗಳು. ■

***ಅಭಿಮತ ವರದಿ***

# 2024-26ರ ಅವಧಿಗೆ ಆಯ್ಕೆಯಾಗಿರುವ ನೂತನ ಕಾರ್ಯಕಾರಿ ಸಮಿತಿ

## ಪದಾಧಿಕಾರಿಗಳು ಮತ್ತು ಸದಸ್ಯರು



**ಅಧ್ಯಕ್ಷರು-ಶ್ರೀ ಸಿ.ಎಂ. ನಾಗರಾಜ**

**ಶ್ರೀ ಸಿ.ಎಂ. ನಾಗರಾಜ :** ಎಂ.ಎ. ಪದವೀಧರ, ಸಮೂಹ ಮಾಧ್ಯಮ ಮತ್ತು ಪತ್ರಿಕೋದ್ಯಮದಲ್ಲಿ ಸ್ನಾತಕೋತ್ತರ ಡಿಪ್ಲೊಮ. ಮೂಲತಃ ಕೋಲಾರ ಜಿಲ್ಲೆಯವರಾದ ಇವರು ಪ್ರಸ್ತುತ ದೆಹಲಿ ಪೋಲೀಸ್ ಇಲಾಖೆಯಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ. ದೆಹಲಿ ಕರ್ನಾಟಕ ಸಂಘದ ಒಂದು ಅವಧಿಗೆ ಜಂಟಿ ಕಾರ್ಯದರ್ಶಿಯಾಗಿ, ಐದು ಅವಧಿಗೆ ಪ್ರಧಾನ ಕಾರ್ಯದರ್ಶಿಯಾಗಿ, 2021–23 ಅವಧಿಯಲ್ಲಿ ಪ್ರಥಮ ಬಾರಿ ಅಧ್ಯಕ್ಷರಾಗಿ ಒಟ್ಟು 20 ವರ್ಷ ಸಂಘದಲ್ಲಿ ಕಾರ್ಯ ನಿರ್ವಹಿಸಿದ ಅನುಭವವಿರುವ ಇವರು ಅಧ್ಯಕ್ಷರಾಗಿ ದೇಶದ ಉದ್ದಗಲಕ್ಕೂ ಕನ್ನಡಿಗರು ದೆಹಲಿ ಕರ್ನಾಟಕ ಸಂಘದ ಸಾಂಸ್ಕೃತಿಕ ವೈಭವವನ್ನು ಗಮನಿಸುವಂತ ಕೆಲಸ ಮಾಡಿದ್ದಾರೆ. ಮಾನ್ಯ ಪ್ರಧಾನಮಂತ್ರಿಗಳಾದ ನರೇಂದ್ರಮೋದಿಯವರಿಂದ ಉದ್ಘಾಟಿಸಲ್ಪಟ್ಟ ವೈಭವೋಪೇತ ಭರ್ಜರಿ ಅಮೃತ ಮಹೋತ್ಸವದ ಕಾರ್ಯಕ್ರಮವನ್ನು ಆಯೋಜಿಸಿದ್ದರು. ಈ ಸಂದರ್ಭದಲ್ಲಿ ಕರ್ನಾಟಕದ ಮೂಲೆ ಮೂಲೆಯಿಂದ ಸಾವಿರಕ್ಕೂ ಹೆಚ್ಚು ಕಲಾವಿದರನ್ನು ದೆಹಲಿಗೆ ಕರೆಸಿ ನಮ್ಮ ದೆಹಲಿ ಕರ್ನಾಟಕ ಸಂಘವನ್ನು ವಿಶ್ವದ ಎಲ್ಲಾ ಸಂಘ ಸಂಸ್ಥೆಗಳಿಗೆ ಮಾದರಿಯನ್ನಾಗಿ ಮಾಡಿದ್ದಾರೆ. ಅಮೃತ ಮಹೋತ್ಸವ ಕಾರ್ಯಕ್ರಮ ಹಾಗೂ ಅದರ ಅಂಗವಾಗಿ ವರ್ಷದುದ್ದಕ್ಕೂ ನಡೆದ ಕಾರ್ಯಕ್ರಮಗಳಿಗೆ ಕೇಂದ್ರ ಸರ್ಕಾರ ಹಾಗೂ ರಾಜ್ಯ ಸರ್ಕಾರ ಮತ್ತು ಇನ್ನಿತರರಿಂದ ಸುಮಾರು ನಾಲ್ಕು ಕೋಟಿ ಹಣವನ್ನು ಸಂಗ್ರಹಿಸಿ ಕಾರ್ಯಕ್ರಮ ಯಶಸ್ವಿಯಾಗಿಸಿದ್ದಾರೆ.

ದೆಹಲಿ ಕರ್ನಾಟಕ ಸಂಘದ ಪ್ರಧಾನ ಕಾರ್ಯದರ್ಶಿಯಾಗಿದ್ದಾಗ ಕರ್ನಾಟಕ ಸರಕಾರದಿಂದ ಒಂದು ಕೋಟಿ ರೂಪಾಯಿ ಧನ ಸಹಾಯ ತಂದು ಕಟ್ಟಡದ ವಿಸ್ತರಣೆ ಮತ್ತು ನವೀಕರಣದ ಕೆಲಸವನ್ನು ಮಾಡಿಸಿದ್ದರು. ಅಲ್ಲದೆ ಸಂಘಕ್ಕೆ ಸರಕಾರದಿಂದ ಸಾಂಸ್ಕೃತಿಕ ಕಾರ್ಯಕ್ರಮಗಳಿಗಾಗಿ ಪ್ರತೀ ವರ್ಷ 25 ಲಕ್ಷದಂತೆ ಅನುದಾನ ಬರುವಲ್ಲಿ ಶ್ರಮವಹಿಸಿ ಕೆಲಸ ಮಾಡಿದ್ದಾರೆ. ದೆಹಲಿ ಕರ್ನಾಟಕ ಸಂಘ ಮತ್ತು ಕೆನರಾ ಬ್ಯಾಂಕ್ ನಡುವೆ ಇದ್ದ ಬಾಡಿಗೆ ವಿವಾದದಲ್ಲಿ ಸಂಘ ಜಯಿಸುವಂತೆ ಮಾಡಿ ಸುಮಾರು ರೂ. 1.27 ಕೋಟಿ ಸಂಘದ ಖಜಾನೆಗೆ ತರುವಲ್ಲಿ ಯಶಸ್ವಿಯಾಗಿದ್ದಾರೆ. ದೆಹಲಿ ಪೋಲೀಸ್ ಕಲ್ಯಾಣ ಸಮಿತಿಯ ಕಾರ್ಯದರ್ಶಿಯಾಗಿ ಹಾಗೂ ದೆಹಲಿ ಒಕ್ಕಲಿಗ ಗೌಡ ಸಂಘದ ಖಜಾಂಚಿಯಾಗಿ ಸೇವೆ ಸಲ್ಲಿಸಿದ್ದಾರೆ. ಗಂಗಾವತಿಯಲ್ಲಿ ಆಯೋಜಿಸಿದ್ದ 2011ರ ಅಖಿಲ ಭಾರತ ಸಾಹಿತ್ಯ ಸಮ್ಮೇಳನದಲ್ಲಿ ಕನ್ನಡ ಸಾಹಿತ್ಯ ಪರಿಷತ್ತು ಯಶಸ್ವಿ ಸಂಘಟಕರಾಗಿರುವ ಇವರ ಸೇವೆಯನ್ನು ಗುರುತಿಸಿ ಗೌರವ ಪುರಸ್ಕಾರ ನೀಡಿದೆ. 2016ರಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಪ್ರತಿಷ್ಠಿತ 'ನಾಡಪ್ರಭು ಕೆಂಪೇಗೌಡ ಪ್ರಶಸ್ತಿ'ಯನ್ನು ಇವರಿಗೆ ನೀಡಿ ಗೌರವಿಸಲಾಗಿತ್ತು. ಕೊರೊನಾ ಮಹಾಮಾರಿಯ ಎರಡನೇ ಅಲೆಯ ಸಂದರ್ಭದಲ್ಲಿ ದೆಹಲಿ ಮತ್ತು ಎನ್.ಸಿ.ಆರ್.ನಲ್ಲಿ ವಾಸವಾಗಿರುವ ಕನ್ನಡಿಗರ ಸಂಕಷ್ಟಕ್ಕೆ ನಿಸ್ವಾರ್ಥ ಸೇವೆಗೈದು ಅವರ ಮನಗೆದ್ದಿದ್ದಾರೆ. ಪ್ರಸ್ತುತ ಕನ್ನಡ ಸಾಹಿತ್ಯ ಪರಿಷತ್ತಿನ ದೆಹಲಿ ಘಟಕದ ಮೊದಲ ಅಧ್ಯಕ್ಷರೂ ಆಗಿದ್ದಾರೆ. 2024–26ರ ಅವಧಿಗೆ ಮತ್ತೊಮ್ಮೆ ಸಂಘದ ಅಧ್ಯಕ್ಷರಾಗಿ ಚುನಾಯಿತರಾಗಿದ್ದಾರೆ.



**ಉಪಾಧ್ಯಕ್ಷರು-ಶ್ರೀ ವಸಂತ ಶೆಟ್ಟಿ ಬೆಳ್ಳಾರೆ :** ಸುಮಾರು ನಾಲ್ಕು ದಶಕಗಳಿಂದ, ದೆಹಲಿಯಲ್ಲಿ ಅತ್ಯುತ್ತಮ ಸಂಘಟಕರೆಂದೇ ಜನಪ್ರಿಯರಾದ ಇವರು, ದೆಹಲಿ ಕರ್ನಾಟಕ ಸಂಘದ ಸಾಂಸ್ಕೃತಿಕ ಸಮಿತಿಯ ಮುಖ್ಯಸ್ಥರಾಗಿ, ಜಂಟಿ ಕಾರ್ಯದರ್ಶಿಯಾಗಿ, ಉಪಾಧ್ಯಕ್ಷರಾಗಿ ಹಾಗೂ ಎರಡು ಅವಧಿಗಳಲ್ಲಿ ಅಧ್ಯಕ್ಷರಾಗಿ ಅವರು ತಮ್ಮ ಸಂಘಟನೆ ಮತ್ತು ದಕ್ಷ ಆಡಳಿತದ ಪರಿಚಯ ಮಾಡಿಕೊಟ್ಟಿದ್ದಾರೆ. ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಯಲ್ಲಿ ಒಂದು ಬಾರಿ ಉಪಾಧ್ಯಕ್ಷರಾಗಿ ನಂತರ ಅಧ್ಯಕ್ಷರಾಗಿಯೂ ಉತ್ತಮ ಆಡಳಿತ ನೀಡಿದ್ದಾರೆ. ಸಾಂಸ್ಕೃತಿಕ ವಲಯದಲ್ಲಿ ಹೊಸ ಪ್ರತಿಭೆಗಳಿಗೆ ಅವಕಾಶ, ವಿನೂತನ ಕಾರ್ಯಕ್ರಮಗಳನ್ನು ಆಯೋಜಿಸುವ ಮೂಲಕ ಕರ್ನಾಟಕದ ಸಾಂಸ್ಕೃತಿಕ ವಲಯದಲ್ಲಿ ಅತ್ಯಂತ ಜನಪ್ರಿಯರಾಗಿದ್ದಾರೆ. ಮೋತೀಬಾಗ್‌ನ ಮೆಟ್ರೋ ಸ್ಟೇಶನ್‌ಗೆ ಸರ್.ಎಂ. ವಿಶ್ವೇಶ್ವರಯ್ಯನವರ ಹೆಸರು, ಜೆ.ಎನ್.ಯು.ವಿನಲ್ಲಿ ಕನ್ನಡ ಅಧ್ಯಯನ ಪೀಠ ಸ್ಥಾಪನೆ, ಪ್ರಥಮ ಸ್ವಾತಂತ್ರ್ಯ ಹೋರಾಟಗಾರ್ತಿ ರಾಣಿ ಅಬ್ಬಕ್ಕನ ಕುರಿತಾದ ರಾಷ್ಟ್ರೀಯ ಉತ್ಸವ, ಬೃಹತ್ ತುಳುಸಿರಿ ಕಾರ್ಯಕ್ರಮ ಇವೆಲ್ಲ ದೂರದೃಷ್ಟಿಯ ಮತ್ತು ನೆನಪಿನಾಳದಲ್ಲಿ ಉಳಿಯುವ ಕಾರ್ಯಕ್ರಮಗಳಿಗೆ ಸಾಕ್ಷಿಯಾಗಿವೆ. ಯಕ್ಷಧ್ರುವ ಪಟ್ಲ ಫೌಂಡೇಶನ್ ದೆಹಲಿ ಘಟಕದ ಅಧ್ಯಕ್ಷರು, ತುಳು ಭಾಷೆಯನ್ನು ಸಂವಿಧಾನದ 8ನೇ ಪರಿಚ್ಛೇದಕ್ಕೆ ಸೇರಿಸುವಂತೆ ನಿರಂತರವಾಗಿ ಹೋರಾಡುತ್ತಲೇ ಬಂದಿದ್ದಾರೆ. ಕರ್ನಾಟಕ ತುಳು ಅಕಾಡೆಮಿಯ ಸದಸ್ಯರಾಗಿಯೂ ದುಡಿದ ಅನುಭವ ಇದೆ. ಪ್ರಸ್ತುತ ದೆಹಲಿ ತುಳು ಸಿರಿಯ ಅಧ್ಯಕ್ಷರಾಗಿ ಹಾಗು ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಯ ಆಡಳಿತ ಮಂಡಳಿಯ ಸದಸ್ಯರಾಗಿ ಸೇವೆ ಸಲ್ಲಿಸುತ್ತಿದ್ದಾರೆ. 2024–26ರ ಅವಧಿಗೆ ಉಪಾಧ್ಯಕ್ಷರಾಗಿ ಚುನಾವಣೆಯಲ್ಲಿ ಆಯ್ಕೆಯಾಗಿದ್ದಾರೆ.



**ಉಪಾಧ್ಯಕ್ಷರು-ಶ್ರೀಮತಿ ಪೂಜಾ ಪಿ. ರಾವ್ :** ಇವರು ಬಿ.ಬಿ.ಎಂ. ಪದವೀಧರೆಯಾಗಿದ್ದು ಕಳೆದ 10 ವರ್ಷಗಳಿಂದ ದೆಹಲಿ ಕರ್ನಾಟಕ ಸಂಘದಲ್ಲಿ ಕಾರ್ಯಕಾರಿ ಸಮಿತಿ ಸದಸ್ಯೆಯಾಗಿ, ಜಂಟಿ ಕಾರ್ಯದರ್ಶಿಯಾಗಿ ಹಾಗೂ ಉಪಾಧ್ಯಕ್ಷೆಯಾಗಿ ಸೇವೆ ಸಲ್ಲಿಸಿರುತ್ತಾರೆ. ಸಂಘದ ಅಮೃತ ಮಹೋತ್ಸವ ಕಾರ್ಯಕಾಲದಲ್ಲಿ ಆಯೋಜಿಸಿದ ಜಿಲ್ಲಾವಾರು ಕಾರ್ಯಕ್ರಮಗಳಲ್ಲಿ ಕರಾವಳಿ ಜಿಲ್ಲಾ ಸಾಂಸ್ಕೃತಿಕ ಉತ್ಸವದ ಸಾಂಸ್ಕೃತಿಕ ಸಮಿತಿಯ ಸಂಚಾಲಕರಾಗಿ ಅಧ್ಯಕ್ಷರ ಪರಿಶ್ರಮದೊಂದಿಗೆ ಸಮರ್ಥವಾಗಿ ನಿಭಾಯಿಸಿ ಯಶಸ್ವಿಯಾಗಿದ್ದಾರೆ. ಸಂಘ ನಡೆಸುವ ಕನ್ನಡ ಕಲಿಕಾ, ನೃತ್ಯ ಮತ್ತು ಸಂಗೀತ ತರಗತಿಗಳ ಶಿಕ್ಷಕರು ಹಾಗೂ ವಿದ್ಯಾರ್ಥಿಗಳೊಂದಿಗೆ ನಿರಂತರ ಸಂಪರ್ಕದಲ್ಲಿದ್ದು ತರಗತಿಗಳನ್ನು ಯಶಸ್ವಿಯಾಗಿ ನಡೆಸುವಲ್ಲಿ ಸಫಲರಾಗಿದ್ದಾರೆ. ಕರ್ನಾಟಕ ಸಂಘ ಸೇರಿದಂತೆ ದೆಹಲಿಯ ಅನೇಕ ಕನ್ನಡ ಹಾಗೂ ಕನ್ನಡೇತರ ಕಾರ್ಯಕ್ರಮಗಳ ನಿರೂಪಣೆಯನ್ನು ಮಾಡಿರುವ ಇವರು ಕನ್ನಡ, ಕೊಂಕಣಿ, ತುಳು, ಹಿಂದಿ ಹಾಗೂ ಇಂಗ್ಲಿಷ್ ಹೀಗೆ ಐದು ಭಾಷೆಗಳಲ್ಲಿ ಕಾರ್ಯಕ್ರಮ ನಿರೂಪಣೆ ಮಾಡಿರುವ ಅನುಭವವನ್ನು ಹೊಂದಿದ್ದು, ತಮ್ಮ ವಿಶಿಷ್ಟ ರೀತಿಯ ನಿರೂಪಣಾ ಶೈಲಿಯಿಂದ ಪ್ರೇಕ್ಷಕರನ್ನು ನಗೆಗಡಲಲ್ಲಿ ತೇಲಿಸುತ್ತಾರೆ ಮತ್ತು ಇವರು ಅನೇಕ ಕನ್ನಡದ ಕಾರ್ಯಕ್ರಮಗಳಲ್ಲಿ ತಮ್ಮ ಪ್ರತಿಭೆಯನ್ನು ಪ್ರದರ್ಶಿಸಿದ್ದಾರೆ. 2024–26ರ ಅವಧಿಗೆ ಮತ್ತೊಮ್ಮೆ ಉಪಾಧ್ಯಕ್ಷರಾಗಿ ಆಯ್ಕೆಯಾಗಿದ್ದಾರೆ.



**ಪ್ರಧಾನ ಕಾರ್ಯದರ್ಶಿ - ಶ್ರೀ ರಾಧಾಕೃಷ್ಣ :** ಕಳೆದ 34 ವರ್ಷಗಳಿಂದ ದೆಹಲಿಯಲ್ಲಿ ನೆಲೆಸಿರುವ ಸದಾ ಹಸನ್ಮುಖಿಯಾದ ಇವರು ಕರ್ನಾಟಕ ಭವನದಲ್ಲಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಮೂಲತಃ ಉಡುಪಿ ಜಿಲ್ಲೆಯ ಪ್ರಖ್ಯಾತ ಕುಂದರಾಜ ವರ್ಮ ಆಳಿದ ಕುಂದಾಪುರ ತಾಲ್ಲೂಕಿನ ಪಂಚಗಂಗಾ ನದಿ ತಟದ ಕೋಡಿ ಗ್ರಾಮದವರಾದ ಇವರು ದೆಹಲಿ/ಎನ್.ಸಿ.ಆರ್.ನ ಕನ್ನಡಿಗರಲ್ಲಿ ಅನ್ನದಾತರೆಂದೇ ಜನಮನ್ನಣೆ ಗಳಿಸಿದ್ದಾರೆ. ದೆಹಲಿ ಕರ್ನಾಟಕ ಸಂಘದಲ್ಲಿ ದಿ. ಕೆ.ಆರ್. ನಾಗರಾಜ ಅವರ ಅಧ್ಯಕ್ಷತೆಯಲ್ಲಿ ಮೊದಲ ಬಾರಿ ಕಾರ್ಯಕಾರಿ ಸಮಿತಿಯ ಸದಸ್ಯರಾಗಿ ಆಯ್ಕೆಯಾದ ಇವರು ನಂತರ ಹಲವು ಬಾರಿ ಕಾರ್ಯಕಾರಿ ಸಮಿತಿಯ ಸದಸ್ಯರಾಗಿ, ಜಂಟಿ ಕಾರ್ಯದರ್ಶಿಯಾಗಿ ಹಾಗು 2021–23ರ ಅವಧಿಯಲ್ಲಿ ಖಜಾಂಚಿಯಾಗಿ ಕಾರ್ಯ ನಿರ್ವಹಿಸಿದ್ದಾರೆ. ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಯಲ್ಲಿ ಈ ಹಿಂದೆ ಕಾರ್ಯ ನಿರ್ವಹಿಸಿದ್ದು ಪ್ರಸ್ತುತ ಆಡಳಿತ ಮಂಡಳಿಯಲ್ಲಿ ಸದಸ್ಯರಾಗಿದ್ದಾರೆ. ಇವರು 2024–26ರ ಅವಧಿಗೆ ದೆಹಲಿ ಕರ್ನಾಟಕ ಸಂಘದ ಪ್ರಧಾನ ಕಾರ್ಯದರ್ಶಿಯಾಗಿ ಚುನಾಯಿತರಾಗಿದ್ದಾರೆ.



**ಜಂಟಿ ಕಾರ್ಯದರ್ಶಿ-ಶ್ರೀ ನಾರಾಯಣ ಬಿ. :** ಕಳೆದ ಎರಡೂವರೆ ದಶಕಗಳಿಂದ ದೆಹಲಿಯ ಕರ್ನಾಟಕ ಭವನದಲ್ಲಿ ಕಾರ್ಯ ನಿರ್ವಹಿಸುತ್ತಿದ್ದು, ಉತ್ತಮ ರಂಗಭೂಮಿ ಕಲಾವಿದರಾಗಿ ದೆಹಲಿ ಕರ್ನಾಟಕ ಸಂಘವು ನಿರ್ಮಿಸಿದ್ದ 'ಸೇವಂತಿ ಪ್ರಸಂಗ' ಮತ್ತು 'ಜೋಗಿಯ ರಾಣಿ' ಎರಡು ನಾಟಕಗಳಲ್ಲಿ ನಟಿಸಿ ದೆಹಲಿ ಕನ್ನಡಿಗರಿಗೆ ಚಿರಪರಿಚಿತರಾಗಿರುತ್ತಾರೆ. ದೆಹಲಿಯ ಹವ್ಯಾಸಿ ರಂಗತಂಡಗಳಾದ ದಿನಕರ ಹಾಗೂ ಗಣೇಶ ಮಿತ್ರ ಮಂಡಳಿಯ ಸಕ್ರಿಯ ಸದಸ್ಯರಾಗಿದ್ದು ಈ ರಂಗತಂಡಗಳಿಂದ ಮೂಡಿ ಬಂದ ಹಲವು ನಾಟಕಗಳಲ್ಲಿ ನಟಿಸಿದ್ದು, ಈ ನಾಟಕಗಳು ರಾಜ್ಯದ ಹಾಗೂ ರಾಷ್ಟ್ರದ ಹಲವಾರು ಭಾಗಗಳಲ್ಲಿ ಪ್ರದರ್ಶನಗೊಂಡಿರುತ್ತವೆ. ನಾನಾ ಕನ್ನಡಪರ ಚಟುವಟಿಕೆಗಳಲ್ಲಿ ಸಕ್ರಿಯರಾಗಿರುವ ಇವರು ಈ ಹಿಂದೆ ದೆಹಲಿ ಒಕ್ಕಲಿಗ ಗೌಡ ಸಂಘದ ಖಜಾಂಚಿಯಾಗಿ, ಎರಡು ಬಾರಿ ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಯ ಆಡಳಿತ ಮಂಡಳಿಯ ಸದಸ್ಯರಾಗಿ ಹಾಗೂ ದೆಹಲಿ ಕರ್ನಾಟಕ ಸಂಘದ ಕಾರ್ಯಕಾರಿ ಸಮಿತಿಯ ಸದಸ್ಯರಾಗಿ ಮತ್ತು 2021–23ರ ಅವಧಿಯಲ್ಲಿ ಸಂಘದ ಜಂಟಿ ಕಾರ್ಯದರ್ಶಿಯಾಗಿ ಉತ್ತಮ ಸೇವೆ ಸಲ್ಲಿಸಿದ್ದಾರೆ. 2024–26ರ ಅವಧಿಗೆ ಜಂಟಿ ಕಾರ್ಯದರ್ಶಿಯಾಗಿ ಎರಡನೆಯ ಬಾರಿ ಆಯ್ಕೆಯಾಗಿದ್ದಾರೆ.



**ಜಂಟಿ ಕಾರ್ಯದರ್ಶಿ-ಶ್ರೀಮತಿ ಅಶ್ವಿನಿ ಬಿ.ಎಸ್. :** ದೆಹಲಿಯಲ್ಲಿ ಕಳೆದ 30 ವರ್ಷಗಳಿಂದ ನೆಲೆಸಿರುವ ಇವರು ನಾಟಕ ಮತ್ತು ಸಂಗೀತದಲ್ಲಿ ಆಸಕ್ತಿ ಹೊಂದಿದ್ದು ದೆಹಲಿಯಲ್ಲಿ ಹಲವಾರು ನಾಟಕಗಳಲ್ಲಿ ಅಭಿನಯಿಸಿ ಕನ್ನಡಿಗರ ಮನಗೆದ್ದಿರುತ್ತಾರೆ. ತಮ್ಮದೇ ಆದ ಹವ್ಯಾಸಿ ರಂಗತಂಡ 'ಡೆಲ್ಲಿ ಫ್ರೆಂಡ್ಸ್' ಎಂಬುದನ್ನು ರಚಿಸಿಕೊಂಡು ಹಲವು ಸಮಾನ ಮನಸ್ಕರೊಡಗೂಡಿ ಅನೇಕ ನಾಟಕ ಪ್ರಯೋಗಗಳನ್ನು ಮಾಡಿರುತ್ತಾರೆ. ಸ್ನೇಹಾ ದೆಹಲಿ ಕನ್ನಡ ಲೇಡೀಸ್ ಅಸೋಸಿಯೇಶನ್‌ನಲ್ಲಿ ಸಕ್ರಿಯರಾಗಿರುವ ಇವರು ಅಲ್ಲಿಯ ಆಡಳಿತ ಮಂಡಳಿಯಲ್ಲಿ ಸದಸ್ಯರಾಗಿ, ಉಪಾಧ್ಯಕ್ಷೆಯಾಗಿ, ಪ್ರಸ್ತುತ ಖಜಾಂಚಿಯಾಗಿ ಸೇವೆ ಸಲ್ಲಿಸುತ್ತಿದ್ದು ದೆಹಲಿ ಕರ್ನಾಟಕ ಸಂಘದ ಕಾರ್ಯಕಾರಿ ಸಮಿತಿಯಲ್ಲಿ 2013–15, 2021–23ರ ಅವಧಿಗೆ ಸದಸ್ಯೆಯಾಗಿ ಕಾರ್ಯ ನಿರ್ವಹಿಸಿದ್ದಾರೆ. 2024–26ರ ಅವಧಿಯ ಕಾರ್ಯಕಾರಿ ಸಮಿತಿಯಲ್ಲಿ ಜಂಟಿ ಕಾರ್ಯದರ್ಶಿ (ಮಹಿಳಾ ಮೀಸಲು)ಯಾಗಿ ಚುನಾಯಿತರಾಗಿದ್ದಾರೆ.



**ಖಜಾಂಚಿ-ಶ್ರೀಮತಿ ಆಶಾಲತಾ ಎಂ. :** ಉದ್ಯೋಗ : ದೆಹಲಿ ಮೆಟ್ರೋದಲ್ಲಿ ಸೀನಿಯರ್ ರೆವೆನ್ಯೂ ಸೂಪರ್‌ವೈಸರ್. ಶಿಕ್ಷಣ : ಸಾಹಿತ್ಯದಲ್ಲಿ ಪದವಿ ಮತ್ತು ಇಲೆಕ್ಟ್ರಿಕಲ್ ಇಂಜಿನಿಯರಿಂಗ್‌ನಲ್ಲಿ ಡಿಪ್ಲೋಮಾ. ಹುಟ್ಟಿದ ಊರು : ಬೆಂಗಳೂರು. ಮೂಲತಃ ಮಂಡ್ಯ ಜಿಲ್ಲೆ. ಸಾಧನೆ : ದೆಹಲಿ ಮೆಟ್ರೋದಲ್ಲಿ ಪೈಲಟ್ ಆಗಿ ಕೆಲಸ ಮಾಡಿದ ಮೊದಲ ಮತ್ತು ಏಕೈಕ ಕನ್ನಡತಿ. ದೆಹಲಿ ಮೆಟ್ರೋ ರೈಲ್ವೇಯ ಅತ್ಯುನ್ನತ ಪ್ರಶಸ್ತಿಯಾದ "ಮ್ಯಾನೇಜಿಂಗ್ ಡೈರೆಕ್ಟರ್" ಅವಾರ್ಡ್ ಅನ್ನು 2019ರ ಸಾಲಿನಲ್ಲಿ ಅಂದಿನ ಮಾನ್ಯ ಉಪ ರಾಷ್ಟ್ರಪತಿ ಶ್ರೀ ವೆಂಕಯ್ಯ ನಾಯ್ಡು ಅವರಿಂದ ಪಡೆದಿರುತ್ತಾರೆ. ದೆಹಲಿ ಕರ್ನಾಟಕ ಸಂಘದ ಕಾರ್ಯಕಾರಿ ಸಮಿತಿಯಲ್ಲಿ 2013 ರಿಂದ 2019ರ ಅವಧಿಯಲ್ಲಿ ಎರಡು ಬಾರಿ ಉಪಾಧ್ಯಕ್ಷೆಯಾಗಿ ಕೆಲಸ ಮಾಡಿದ ಅನುಭವ ಹೊಂದಿದ್ದಾರೆ. 2019ರ ದೆಹಲಿ ಕರ್ನಾಟಕ ಸಂಘದ ಚುನಾವಣೆಯಲ್ಲಿ ಮೊದಲ ಬಾರಿಗೆ ಒಬ್ಬ ಮಹಿಳೆ ಸ್ವತಂತ್ರ ಅಭ್ಯರ್ಥಿಯಾಗಿ ಖಜಾಂಚಿ ಸ್ಥಾನಕ್ಕೆ ಸ್ಪರ್ಧಿಸಿ ಚುನಾಯಿತರಾಗಿದ್ದರು. ಶಾಲೆಯ ದಿನಗಳಲ್ಲಿ ಸ್ಕೌಟ್ಸ್ ಮತ್ತು ಗೈಡ್ಸ್‌ನಲ್ಲಿ ರಾಜ್ಯ ಪ್ರಶಸ್ತಿ ಪಡೆದಿರುತ್ತಾರೆ. ಕ್ರೀಡೆ ಮತ್ತು ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ಅತ್ಯಂತ ಆಸಕ್ತಿಯಿದ್ದು ಸಂಘದ ಏಕಾಂಕ ನಾಟಕ ಸ್ಪರ್ಧೆಯಲ್ಲಿ 'ಅತ್ತೆಗೆ ಲತ್ತೆ' ನಾಟಕದಲ್ಲಿ ಇವರ 'ಬೇಬಿ'ಯ ಪಾತ್ರಕ್ಕೆ ತೀರ್ಪುಗಾರರ ವಿಶೇಷ ಬಹುಮಾನ ಗಳಿಸಿದ್ದಾರೆ. ದೆಹಲಿ ಕರ್ನಾಟಕ ಸಂಘ ಆಯೋಜಿಸಿದ ನೃತ್ಯ ಸಿಂಚನ, ನೃತ್ಯ ವೈಭವ ಮುಂತಾದ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ದೆಹಲಿಯ ಸುಮಾರು 150ಕ್ಕೂ ಹೆಚ್ಚು ಸ್ಥಳೀಯ ಕಲಾವಿದರನ್ನು ಒಟ್ಟುಗೂಡಿಸಿ ಅತ್ಯುತ್ತಮ ಸಾಂಸ್ಕೃತಿಕ ಕಾರ್ಯಕ್ರಮವನ್ನು ಆಯೋಜಿಸಿದ ಅನುಭವ ಹೊಂದಿದ್ದಾರೆ ಹಾಗು ದೆಹಲಿ ಪೋಲಿಸ್ ಕನ್ನಡಿಗರ ಕಲ್ಯಾಣ ಸಮಿತಿ ಆಯೋಜಿಸಿದ ಕಾರ್ಯಕ್ರಮಗಳಲ್ಲಿ ದೆಹಲಿ ಪೋಲಿಸ್‌ನ ಸದಸ್ಯರು ಹಾಗೂ ಮಕ್ಕಳನ್ನು ಒಟ್ಟುಗೂಡಿಸಿ ಉತ್ತಮ ಕಾರ್ಯಕ್ರಮವನ್ನು ಸಂಯೋಜಿಸಿದ್ದಾರೆ. ಸಾಹಿತ್ಯಾಸಕ್ತಿಯಿಂದ ದೆಹಲಿ ಕರ್ನಾಟಕ ಸಂಘದ ನೂತನ ಗ್ರಂಥಾಲಯವನ್ನು ಸುಸಜ್ಜಿತಗೊಳಿಸಲು ಸಹಕರಿಸಿರುತ್ತಾರೆ. ಪ್ರಸ್ತುತ 2024–26ರ ಅವಧಿಗೆ ಮತ್ತೊಮ್ಮೆ ಖಜಾಂಚಿಯಾಗಿ ಚುನಾಯಿತರಾಗಿದ್ದಾರೆ.

## ಸದಸ್ಯರು



**ಡಾ. ವೆಂಕಟಾಚಲ ಜಿ. ಹೆಗಡೆ :** ಸಂಘಕ್ಕೆ ಮೂರು ದಶಕಗಳಿಗೂ ಮೀರಿದ ನಿಸ್ಪ್ರಹ ಸೇವೆ. 'ಅಭಿಮತ' ಪತ್ರಿಕೆಯನ್ನು 1990 ರಲ್ಲಿ ಆಗಿನ ಅಧ್ಯಕ್ಷ ದಿ. ಎನ್.ಪಿ. ಭಟ್ಟರ ಚುಕ್ಕಾಣಿಯಲ್ಲಿ ಪ್ರಾರಂಭಿಸಿ ಅದರ ಸಂಪಾದಕರಾಗಿ ಮುಂದಿನ 14 ವರ್ಷಗಳ ಕಾಲ ನಿರಂತರವಾಗಿ ಕೆಲಸ ಮಾಡಿದವರು. ಎರಡು ಬಾರಿ ಅಧ್ಯಕ್ಷರಾಗಿ, ಒಮ್ಮೆ ಗೌರವ ಕಾರ್ಯದರ್ಶಿಗಳಾಗಿ ಕಾರ್ಯ ನಿರ್ವಹಿಸಿದ್ದಾರೆ. ಅಲ್ಲದೆ ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಯಲ್ಲಿ ಹಲವು ಬಾರಿ ಆಡಳಿತ ಮಂಡಳಿಯಲ್ಲಿ ಸೇವೆ ಸಲ್ಲಿಸಿರುವ ಇವರು ಪ್ರಸ್ತುತ ಶಿಕ್ಷಣ ಸಂಸ್ಥೆಯ ಆಡಳಿತ ಮಂಡಳಿಯ ಸದಸ್ಯರಾಗಿದ್ದಾರೆ. ಇವರು ಸಂಘದ ಹಳೆಯ ಕಟ್ಟಡದ ಜಾಗದಲ್ಲಿ ಈಗಿರುವ ಸಾಂಸ್ಕೃತಿಕ ಸಮುಚ್ಚಯವನ್ನು ರೂಪಿಸುವ ಮೊದಲ ಯೋಜನಾಪತ್ರದ ನೀಲಿ ನಕ್ಷೆಯನ್ನು 1997–98 ರಲ್ಲಿ ತಯಾರಿಸಿ ಅದನ್ನು ಕಾರ್ಯಗತಗೊಳಿಸಲು ದುಡಿದವರು. ಸಂಘದ ಸುವರ್ಣ ಮಹೋತ್ಸವದ ಹಬ್ಬವನ್ನು ಕನ್ನಡದ ಕಣ್ಮಣಿ ಡಾ. ರಾಜಕುಮಾರ್ ಸಂಜೆಯನ್ನು ಕಿಕ್ಕಿರಿದು ತುಂಬಿದ್ದ ದೆಹಲಿಯ ವಿಶಾಲ ಸಿರಿಫೋರ್ಟ್ ಸಭಾಂಗಣದಲ್ಲಿ 1998 ರಲ್ಲಿ ಆಯೋಜಿಸಿದವರು. ಸಂಘದ ಸಮುಚ್ಚಯಕ್ಕೆ 1998 ರಲ್ಲಿ ಒಂದು ಕೋಟಿ ಧನ ಸಹಾಯವನ್ನು ಪಡೆಯಲು ಯಶಸ್ವಿಯಾಗಿ ಕೆಲಸ ಮಾಡಿದವರು. ನಂತರ 2010 ರಲ್ಲಿ ಅಧ್ಯಕ್ಷರಾಗಿ ಮತ್ತೊಂದು ಕೋಟಿ ರೂಪಾಯಿಗಳ ಧನ ಸಹಾಯವನ್ನು ಸಂಘಕ್ಕೆ ತಂದರು. ಸಂಘದ ಸಂವಿಧಾನಕ್ಕೆ 2012 ರಲ್ಲಿ ವಿಸ್ತ್ರತವಾದ ಮತ್ತು ಕ್ರಾಂತಿಕಾರಕ ತಿದ್ದುಪಡಿಗಳನ್ನು ತಂದು ಅದು ಎಂದೆಂದೂ ಅಪ್ಪಟ ದೆಹಲಿ ಕನ್ನಡಿಗರ ಕೈಯಲ್ಲಿರುವಂತೆ ನೋಡಿಕೊಂಡವರು. 2019–21ರ ಕೊರೊನಾ ಕಾಲದ ಅವಧಿಯಲ್ಲಿ ಎರಡನೆಯ ಬಾರಿಗೆ ಸಂಘದ ಅಧ್ಯಕ್ಷರಾಗಿ ಕಾರ್ಯ ನಿರ್ವಹಿಸಿದ್ದಾರೆ. ಕರ್ನಾಟಕ ಸರಕಾರದ ಬೇಂದ್ರೆ, ಬಸವರಾಜ ಕಟ್ಟೀಮನಿ, ಆನಂದಕಂದ, ಧುತ್ತರಗಿ, ಹಲಸಂಗಿ ಗೆಳೆಯರು ಟ್ರಸ್ಟ್‌ಗಳ ಮೂಲಕ ಹಲವಾರು ಅರ್ಥಪೂರ್ಣ ಕಾರ್ಯಕ್ರಮಗಳ ಆಯೋಜನೆ. ಜೆ.ಎನ್.ಯು. ಕನ್ನಡ ಪೀಠದ ಪ್ರಾಧ್ಯಾಪಕರ ಆಯ್ಕೆ ಸಮಿತಿಯ ಸದಸ್ಯರಾಗಿದ್ದವರು. ಭಾರತದ ವಿದೇಶಾಂಗ ಇಲಾಖೆಯಲ್ಲಿ ಕಾನೂನು ಸಲಹೆಗಾರರಾಗಿ ಹಲವಾರು ಗುರುತರ ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಜವಾಬ್ದಾರಿಗಳನ್ನು ನಿಭಾಯಿಸಿ ಪ್ರಸ್ತುತ ಪ್ರತಿಷ್ಠಿತ ಜವಾಹರಲಾಲ ನೆಹರೂ ವಿಶ್ವವಿದ್ಯಾಲಯದ ಅಂತರರಾಷ್ಟ್ರೀಯ ಅಧ್ಯಯನ ಸಂಸ್ಥೆಯಲ್ಲಿ ಪ್ರಾಧ್ಯಾಪಕರು ಮತ್ತು ಅದರ ಅಂತರರಾಷ್ಟ್ರೀಯ ಕಾನೂನು ವಿಭಾಗದ ಮುಖ್ಯಸ್ಥರಾಗಿದ್ದಾರೆ. ಈ ಬಾರಿಯ ಚುನಾವಣೆಯಲ್ಲಿ ಸದಸ್ಯ ಸ್ಥಾನಕ್ಕೆ ಸ್ಪರ್ಧಿಸಿದ ಅಭ್ಯರ್ಥಿಗಳಲ್ಲಿ ಅತೀ ಹೆಚ್ಚು ಮತ ಪಡೆದು ಕಾರ್ಯಕಾರಿ ಸಮಿತಿಗೆ ಆಯ್ಕೆಯಾಗಿದ್ದಾರೆ.



**ಶ್ರೀ ಕೆ.ಎಸ್. ಮೂರ್ತಿ :** ಇವರು ಬೆಂಗಳೂರಿನ ಪ್ರತಿಷ್ಠಿತ ಯುವಿಸಿಇ ಕಾಲೇಜಿನಿಂದ ಸ್ನಾತಕೋತ್ತರ ಇಂಜಿನಿಯರಿಂಗ್ ಪದವಿ ಪಡೆದಿರುವ ಒಬ್ಬ ಪ್ರತಿಭಾವಂತ ಸಿವಿಲ್ ಇಂಜಿನಿಯರ್. ಕಳೆದ ಮೂವತ್ತೊಂದು ವರ್ಷಗಳಿಂದ ದೆಹಲಿಯಲ್ಲಿ ವಾಸವಾಗಿದ್ದಾರೆ. ಮೂಲತಃ ಚಿಕ್ಕಮಗಳೂರು ಜಿಲ್ಲೆಯ ಮಲೆನಾಡು ಪ್ರದೇಶದಿಂದ ಬಂದಿರುವ ಇವರು ಸರಳ ಸಜ್ಜನಿಕೆಯ ವ್ಯಕ್ತಿ. ಪ್ರಸ್ತುತ ಇವರು ದೆಹಲಿ ಒಕ್ಕಲಿಗ ಗೌಡ ಸಂಘ ಹಾಗು ಕರ್ನಾಟಕ ರಾಜ್ಯ ಮಕ್ಕಳ ಸಾಹಿತ್ಯ ಪರಿಷತ್ತಿನ ದೆಹಲಿ ಘಟಕದ ಉಪಾಧ್ಯಕ್ಷರಾಗಿದ್ದಾರೆ. ಈ ಹಿಂದೆ ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತಿನ ದೆಹಲಿ ಪ್ರದೇಶ ಘಟಕದಲ್ಲಿ ಪದಾಧಿಕಾರಿಯಾಗಿ ಕಾರ್ಯ ನಿರ್ವಹಿಸಿದ್ದಾರೆ. ಎಸ್.ಪಿ.ಎಮ್.ಎಲ್., ಸಿಂಪ್ಲೆಕ್ಸ್ ಮತ್ತು ನಾಗಾರ್ಜುನ ಕನ್‌ಸ್ಟ್ರಕ್ಷನ್ಸ್ ಮುಂತಾದ ಪ್ರಖ್ಯಾತ ಕಟ್ಟಡ ನಿರ್ಮಾಣ ಕಂಪೆನಿಗಳಲ್ಲಿ ವಿವಿಧ ಹುದ್ದೆಯಲ್ಲಿ ಕೆಲಸ ಮಾಡಿರುವ ಇವರು ಪ್ರಸ್ತುತ ನೊಯ್ಡಾದ ಪ್ರತಿಷ್ಠಿತ ಇಂಜಿನಿಯರಿಂಗ್ ಅಂಡ್ ಕನ್‌ಸ್ಟ್ರಕ್ಷನ್ ಕಂಪೆನಿಯಾದ ಜೆ.ಪಿ. ಗ್ರೂಪ್‌ನಲ್ಲಿ ಅಡಿಷನಲ್ ಜಿ.ಎಂ. (ನಿಯೋಜನೆ) ಆಗಿ ಕಾರ್ಯ ನಿರ್ವಹಿಸುತ್ತಿದ್ದಾರೆ. ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಯಲ್ಲಿ ಈ ಹಿಂದೆ ನಡೆದ ಸಿವಿಲ್ ಕೆಲಸಗಳಿಗೆ ತಮ್ಮ ತಾಂತ್ರಿಕ ಸಲಹೆ ಹಾಗೂ ಸಹಕಾರ ನೀಡಿದ್ದಾರೆ. ದೆಹಲಿ ಕರ್ನಾಟಕ ಸಂಘದೊಂದಿಗೆ ಸುಮಾರು 30 ವರ್ಷಗಳ ಒಡನಾಟವಿಟ್ಟುಕೊಂಡಿರುವ ಇವರು 2021–23ರ ಸಾಲಿನಲ್ಲಿ ಕಾರ್ಯಕಾರಿ ಸಮಿತಿ ಸದಸ್ಯನಾಗಿ, ಮಲೆನಾಡು ಜಿಲ್ಲೆಗಳ ಸಾಂಸ್ಕೃತಿಕ ಉತ್ಸವದ ಸಂಚಾಲಕನಾಗಿ, ಸಂಘದ ಅಮೃತ ಮಹೋತ್ಸವ ಸ್ಮರಣ ಸಂಚಿಕೆ ಪ್ರಧಾನ ಸಂಪಾದಕನಾಗಿ ಉತ್ತಮ ಕಾರ್ಯ ನಿರ್ವಹಿಸಿದ್ದಾರೆ. ಸಂಘದ ಮುಖವಾಣಿ "ಅಭಿಮತ" ಮಾಸಪತ್ರಿಕೆಯ ಪ್ರಸ್ತುತ ಪ್ರಧಾನ ಸಂಪಾದಕರಾಗಿದ್ದಾರೆ. 2024–26ರ ಅವಧಿಗೆ ಮತ್ತೊಮ್ಮೆ ಸದಸ್ಯರಾಗಿ ಆಯ್ಕೆಯಾಗಿದ್ದಾರೆ.



**ಶ್ರೀ ನವೀನ್ ಕುಮಾರ್ ವಿ. :** ಮೂಲತಃ ಬೆಂಗಳೂರಿನವರಾದ ಇವರು ರೈಲ್ವೇ ಇಲಾಖೆಯ ತಾಂತ್ರಿಕ ವಿಭಾಗದಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದು, ಉತ್ತಮ ಕ್ರೀಡಾಪಟುವಾಗಿದ್ದಾರೆ. ಪ್ರತೀ ವರ್ಷ ದೆಹಲಿ ಕರ್ನಾಟಕ ಸಂಘವು ನಡೆಸುವ ಆಟೋಟ ಸ್ಪರ್ಧೆಗಳಲ್ಲಿ ಬೆಳ್ಳಿಯಪ್ಪ ಗ್ರೂಪ್ ತಂಡವನ್ನು ಪ್ರತಿನಿಧಿಸಿ ಹಲವಾರು ಪ್ರಶಸ್ತಿಗಳನ್ನು ಪಡೆದಿರುವ ಇವರು ಉತ್ತಮ ಸಂಘಟಕರಾಗಿದ್ದು, ಈಗ ಕನ್ನಡ ಗೆಳೆಯರು ಮತ್ತು ಕರ್ನಾಟಕ ಕಮಾಂಡೋಸ್ ಎಂಬ ತಂಡಗಳೊಂದಿಗೆ ಆಟೋಟ ಸ್ಪರ್ಧೆಗಳಲ್ಲಿ ಭಾಗವಹಿಸಿರುತ್ತಾರೆ. 2021–23ರ ಅವಧಿಯಲ್ಲಿ ಕಾರ್ಯಕಾರಿ ಸಮಿತಿ ಸದಸ್ಯನಾಗಿ ಕಾರ್ಯ ನಿರ್ವಹಿಸಿರುವ ಇವರು 2024–26ರ ಅವಧಿಗೆ ಎರಡನೇ ಬಾರಿ ಸದಸ್ಯರಾಗಿ ಆಯ್ಕೆಯಾಗಿದ್ದಾರೆ.



**ಶ್ರೀ ಪ್ರಭಾಕರ ಮಡ್ಡಿತೋಟ್** : ಇವರು ಮೂಲತಃ ಕಲ್ಯಾಣ ಕರ್ನಾಟಕ ಭಾಗದ ಕಲಬುರಗಿಯವರು. ಗುರುಗ್ರಾಮ್‌ನಲ್ಲಿ ಹೀರೊ ಮೋಟೋಕಾರ್ಪ್ (ಹೀರೊ ಹೋಂಡಾ) ಕಂಪನಿಯಲ್ಲಿ ತಾಂತ್ರಿಕ ಪರಿಣಿತರಾಗಿ ಸುಮಾರು 26 ವರ್ಷಗಳಿಂದ ಸೇವೆ ಸಲ್ಲಿಸುತ್ತಿದ್ದಾರೆ. ಇವರು ಗುರುಗಾಂವ್ ಕನ್ನಡ ಸಂಘದಲ್ಲಿ ಸಕ್ರಿಯರಾಗಿದ್ದುಕೊಂಡು ಒಬ್ಬ ಒಳ್ಳೆಯ ಸಂಘಟಕನಾಗಿ, ಕಾರ್ಯಕಾರಿ ಸಮಿತಿಯ ಉಪಾಧ್ಯಕ್ಷ ಸ್ಥಾನವೂ ಸೇರಿದಂತೆ ವಿವಿಧ ಹುದ್ದೆಗಳಲ್ಲಿ ಕ್ರಿಯಾಶೀಲರಾಗಿ ನಿರಂತರವಾಗಿ ಸೇವೆ ಸಲ್ಲಿಸುತ್ತಾ ಬಂದಿದ್ದಾರೆ. ಆರಂಭಿಕ ಘಟ್ಟದಲ್ಲಿ ಗುರುಗಾಂವ್ ಕನ್ನಡ ಸಂಘದಲ್ಲಿ ಕಲಾವಿದರನ್ನು ಕರೆಸಿ ಸಂಭಾವನೆ ನೀಡಿ ಕಾರ್ಯಕ್ರಮ ಮಾಡಿಸುವಷ್ಟು ಆರ್ಥಿಕ ಸ್ಥಿತಿಗತಿ ಉತ್ತಮವಾಗಿಲ್ಲದಿದ್ದ ಸಮಯದಲ್ಲಿ ಸ್ವತಃ ಹಾಸ್ಯ ಕಲಾವಿದನಾಗಿ ಹಾಸ್ಯ ಚಟಾಕಿ, ನಾಟಕ, ನೃತ್ಯ ಇತ್ಯಾದಿ ಎಲ್ಲದರಲ್ಲೂ ತಮ್ಮದೇ ಆದ ಛಾಪು ಮೂಡಿಸುತ್ತಿದ್ದ ಅನನ್ಯ ಪ್ರತಿಭೆ ಇವರದು. ಈ ಹಿಂದೆ ಇವರು ಸಮಾನ ಮನಸ್ಕ ಗೆಳೆಯರೊಂದಿಗೆ ಸಾಮಾಜಿಕ ಸೇವೆಯ 'ನಾವಿರುವೆವು ನಿಮಗಾಗಿ' (We are with you) ಎಂಬ ವೇದಿಕೆಯಡಿ ಬಡಮಕ್ಕಳ ವಿದ್ಯಾಭ್ಯಾಸಕ್ಕೆ ಸಹಾಯ ಮತ್ತು ಅಗತ್ಯ ಸೌಲಭ್ಯಗಳನ್ನು ಕಲ್ಪಿಸುವಲ್ಲಿ ನಿರಂತರವಾಗಿ ಶ್ರಮಿಸಿದ್ದಾರೆ. ಸಂಘದ ಅಮೃತ ಮಹೋತ್ಸವದ ಕೆಲಸಗಳಿಗೆ ಬೇರು ಮಟ್ಟದ ಸ್ವಯಂ ಸೇವಕನಂತೆ ಹಗಲಿರುಳು ನಿಸ್ವಾರ್ಥವಾಗಿ ದುಡಿದಿದ್ದಾರೆ. ಕಾರ್ಯಕಾರಿ ಸಮಿತಿಯಲ್ಲಿ 2021–23ರ ಅವಧಿಯಲ್ಲಿ ಸದಸ್ಯನಾಗಿ ಕಾರ್ಯ ನಿರ್ವಹಿಸಿ ಕಲ್ಯಾಣ ಕರ್ನಾಟಕದ ಜಿಲ್ಲಾ ಸಾಂಸ್ಕೃತಿಕ ಉತ್ಸವವನ್ನು ಅಧ್ಯಕ್ಷರ ಶ್ರಮದೊಂದಿಗೆ ಯಶಸ್ವಿಯಾಗಿ ಮಾಡಿದ್ದಾರೆ. 2024–26ರ ಅವಧಿಗೆ 'ಸದಸ್ಯ'ರಾಗಿ ಮತ್ತೊಮ್ಮೆ ಆಯ್ಕೆಯಾಗಿದ್ದಾರೆ.



**ಶ್ರೀ ಅರುಣ್ ಸಿ.ಎಸ್.** : ಮೂಲತಃ ಹಾಸನ ಜಿಲ್ಲೆಯ ಚನ್ನರಾಯ ಪಟ್ಟಣದವರಾದ ಇವರು ದೆಹಲಿಗೆ ಬರುವುದಕ್ಕಿಂತ ಮುಂಚೆ ಹುಟ್ಟೂರಿನಲ್ಲಿ ನೂರಾರು ವಿದ್ಯಾರ್ಥಿಗಳಿಗೆ ನೃತ್ಯ ತರಬೇತಿ ನೀಡಿ ಕಾರ್ಯಕ್ರಮ ಆಯೋಜಿಸಿ ಜನಮನ್ನಣೆ ಗಳಿಸಿರುತ್ತಾರೆ. ಕಳೆದ ಎಂಟು ವರ್ಷಗಳಿಂದ ದೆಹಲಿಯಲ್ಲಿ ವಾಸವಾಗಿರುವ ಇವರು ತಮ್ಮ ವೃತ್ತಿ ಜೀವನದ ಪ್ರಾರಂಭದಲ್ಲಿ ಕರ್ನಾಟಕ ಭವನದ ಶಿಷ್ಟಾಚಾರ ವಿಭಾಗದಲ್ಲಿ ಕಾರ್ಯನಿರ್ವಹಿಸಿ, ಪ್ರಸ್ತುತ ಹಿರಿಯ ರಾಜ್ಯಸಭಾ ಸಂಸದರಾದ ಡಾ. ಎಲ್. ಹನುಮಂತಯ್ಯನವರ ಆಪ್ತ ಕಾರ್ಯದರ್ಶಿಯಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ. ತಮ್ಮ ಕಾರ್ಯ ಕೆಲಸಗಳ ಜವಾಬ್ದಾರಿಗಳೊಂದಿಗೆ ಕನ್ನಡ ಮಕ್ಕಳು ಮತ್ತು ಸಾಂಸ್ಕೃತಿಕ ಲೋಕಕ್ಕೆ ಸದಾ ಮಿಡಿಯುತ್ತಾರೆ. ಇವರು ಕರ್ನಾಟಕ ಭವನ ಸೇರಿದಂತೆ ಸ್ಥಳೀಯ ಕನ್ನಡಪರ ಸಂಘ–ಸಂಸ್ಥೆಗಳು ಹಾಗೂ ಕರ್ನಾಟಕ ಸಂಘದ ಅನೇಕ ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ದೆಹಲಿಯ ಕನ್ನಡ ಮಕ್ಕಳು, ಯುವಕರು ಮತ್ತು ಮಹಿಳೆಯರಿಗೆ ವೈಶಿಷ್ಟ್ಯಪೂರ್ಣವಾದ ನೃತ್ಯ, ನಾಟಕ ಸಂಯೋಜನೆ ಮಾಡಿ, ಸ್ವತಃ ನೃತ್ಯ ಪ್ರದರ್ಶನದೊಂದಿಗೆ ದೆಹಲಿ ಕನ್ನಡಿಗರ ಮನರಂಜಿಸಿ, ಮಕ್ಕಳ ಅಭಿಮಾನ, ಪ್ರೀತಿ ಗಳಿಸಿರುತ್ತಾರೆ. ಮಕ್ಕಳ ಸಾಂಸ್ಕೃತಿಕ, ಸಾಹಿತ್ಯಿಕ ಮತ್ತು ಸರ್ವತೋಮುಖ ಬೆಳವಣಿಗೆಗಾಗಿ ಕಟ್ಟಿದ ಕರ್ನಾಟಕ ರಾಜ್ಯ ಮಕ್ಕಳ ಸಾಹಿತ್ಯ ಪರಿಷತ್ತಿನ ರಾಜ್ಯ ಸಂಘಟನಾ ಕಾರ್ಯದರ್ಶಿಯಾಗಿ ಕಳೆದ ಹತ್ತು ವರ್ಷಗಳಿಂದ ಸಂಘಟಿಸುತ್ತಾ ಹೊರನಾಡು ದೆಹಲಿಯಲ್ಲಿ ಪರಿಷತ್ತಿನ ದೆಹಲಿ ಘಟಕವನ್ನು ಸ್ಥಾಪಿಸಿ ಅದರ ಬೆಳವಣಿಗೆಗೆ ಶ್ರಮಿಸಿದ್ದಾರೆ. ಇತ್ತೀಚೆಗೆ ಪ್ರಥಮ ರಾಷ್ಟ್ರೀಯ ಹೊರನಾಡು ಮಕ್ಕಳ ಕನ್ನಡ ಸಾಹಿತ್ಯ ಸಮ್ಮೇಳನವನ್ನು ದೆಹಲಿಯಲ್ಲಿ ಯಶಸ್ವಿಯಾಗಿ ಆಯೋಜಿಸಿದ ಹೆಗ್ಗಳಿಕೆಗೆ ಪಾತ್ರರಾಗಿರುತ್ತಾರೆ. ಕನ್ನಡ ಭಾಷೆ, ಸಾಹಿತ್ಯ ಮತ್ತು ಸಾಂಸ್ಕೃತಿಕ ಲೋಕಕ್ಕೆ ತಮ್ಮನ್ನು ತಾವು ನಿರಂತರವಾಗಿ ತೊಡಗಿಸಿಕೊಂಡಿರುವ ಇವರ ಕಾರ್ಯಸೇವೆಯನ್ನು ಪರಿಗಣಿಸಿ ಮಕ್ಕಳ ಸಾಹಿತ್ಯ ಪರಿಷತ್ತು ಇವರಿಗೆ 'ಮಕ್ಕಳ ಸಾಹಿತ್ಯ ಸಿರಿ' ಪ್ರಶಸ್ತಿಯನ್ನು ನೀಡಿ ಗೌರವಿಸಿದೆ. ಕನ್ನಡ ನಾಡು, ನುಡಿ, ಕಲೆ, ಸಾಹಿತ್ಯ, ಸಂಸ್ಕೃತಿಗೆ ದುಡಿಯುವ ಮತ್ತು ಮಕ್ಕಳಿಗಾಗಿ ಸದಾ ಮಿಡಿಯುವ ವ್ಯಕ್ತಿತ್ವ ಇವರದ್ದು. 2024–26ರ ಅವಧಿಯ ಕಾರ್ಯಕಾರಿ ಸಮಿತಿಗೆ ಮೊದಲನೆಯ ಬಾರಿ ಸದಸ್ಯರಾಗಿ ಚುನಾಯಿತರಾಗಿದ್ದಾರೆ.



**ಶ್ರೀಮತಿ ಜಯಶ್ರೀ ಬಸವರಾಜು ಬಿ ಕೆ** : ಇವರು ಮೂಲತಃ ಧಾರವಾಡದವರು ಬಿ.ಎಸ್ಸಿ ಪದವೀಧರೆಯಾಗಿದ್ದು ಪ್ರಸ್ತುತ ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಯ ಅಧ್ಯಕ್ಷರಾಗಿರುವ ಶ್ರೀ ಬಿ.ಕೆ. ಬಸವರಾಜು ಅವರ ಧರ್ಮಪತ್ನಿ, ಇವರು ದೆಹಲಿಯ ಅನೇಕ ಕನ್ನಡ ಸಂಘ ಸಂಸ್ಥೆಗಳಲ್ಲಿ ಸಕ್ರಿಯರಾಗಿದ್ದು ಜನಕಪುರಿ ಕನ್ನಡ ಕೂಟ, ಜನಕಪುರಿ ಮಹಿಳಾ ಮಂಡಳಿಯಲ್ಲಿ ಸದಸ್ಯೆ, ಖಜಾಂಚಿ, ಪ್ರಧಾನ ಕಾರ್ಯದರ್ಶಿ ಹಾಗೂ ಮೂರು ಬಾರಿ ಅಧ್ಯಕ್ಷೆಯಾಗಿ, ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಯಲ್ಲಿ ಆಡಳಿತ ಮಂಡಳಿಯ ಸದಸ್ಯೆಯಾಗಿ ಹಾಗು ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತಿನ ಕದಳಿ ಮಹಿಳಾ ವೇದಿಕೆಯ ಅಧ್ಯಕ್ಷರಾಗಿಯೂ ಸೇವೆ ಸಲ್ಲಿಸಿದ್ದಾರೆ, ಸಂಗೀತ, ಸಾಹಿತ್ಯ, ನಾಟಕರಂಗಗಳಲ್ಲಿ ಆಸಕ್ತಿ ಹೊಂದಿರುವ ಇವರು ದೆಹಲಿಯ ಎಲ್ಲಾ ಸಾಂಸ್ಕೃತಿಕ ಸಂಘ ಸಂಸ್ಥೆಗಳಲ್ಲಿ ಸಕ್ರಿಯರಾಗಿದ್ದಾರೆ. ಸಂಘದ ಕಾರ್ಯಕಾರಿ ಸಮಿತಿಗೆ 2024–26ರ ಅವಧಿಗೆ ಮೊದಲ ಬಾರಿ ಸದಸ್ಯರಾಗಿ ಆಯ್ಕೆಯಾಗಿದ್ದಾರೆ.



**ಶ್ರೀಮತಿ ಶುಭಾ ದೇವಿಪ್ರಸಾದ್** : ಮೂಲತಃ ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲ್ಲೂಕಿನವರಾದ ಇವರು ಬಿ.ಎ. ಪದವೀಧರೆಯಾಗಿದ್ದು, ಕರ್ನಾಟಕ ಶಾಸ್ತ್ರೀಯ ಸಂಗೀತ, ಪಿಟೀಲು ವಾದನ ಹಾಗೂ ಹಾಡುಗಾರಿಕೆಯಲ್ಲಿ ಸಾಧನೆ ಮಾಡಿದ್ದಾರೆ ಹಾಗು ಸಂಗೀತ ಶಿಕ್ಷಕಿಯಾಗಿಯೂ ಸಹ ಸೇವೆ ಸಲ್ಲಿಸಿರುತ್ತಾರೆ. ಇವರು ದೆಹಲಿ ಪೇಜಾವರ ಮಠದ ವ್ಯವಸ್ಥಾಪಕರಾಗಿದ್ದ ಶ್ರೀ ದೇವಿಪ್ರಸಾದ್ ಅವರ ಧರ್ಮಪತ್ನಿ. ಪ್ರಸ್ತುತ ಶ್ರೀಮಠದ ಶಾಖೆಯಲ್ಲಿ ಶಾಸ್ತ್ರೀಯ ಸಂಗೀತ ಶಿಕ್ಷಕಿಯಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಇವರು ದೆಹಲಿಯ ಹಲವಾರು ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಭಾಗವಹಿಸಿ ತಮ್ಮ ಕಲಾವಂತಿಕೆಯನ್ನು ಮೆರೆದಿದ್ದಾರೆ. ಸಂಘದ 2024–26ರ ಅವಧಿಯ ಕಾರ್ಯಕಾರಿ ಸಮಿತಿಗೆ ಪ್ರಥಮ ಬಾರಿ ಸದಸ್ಯರಾಗಿ (ಮಹಿಳಾ ಮೀಸಲು) ಚುನಾಯಿತರಾಗಿದ್ದಾರೆ.



**ಶ್ರೀಮತಿ ಮಾಲಿನಿ ಪ್ರಹ್ಲಾದ** : 1985ರಿಂದ ದೆಹಲಿಯಲ್ಲಿ ವಾಸವಾಗಿರುವ ಇವರು ಬಿ.ಕಾಂ. ಪದವೀಧರೆ. ಹಿಂದ್ ರೆಕ್ಟಿಫೈಯರ್ಸ್ ಲಿಮಿಟೆಡ್‌ನಲ್ಲಿ ಅಫೀಸ್ ಅಸಿಸ್ಟೆಂಟ್ ಆಗಿ ಕೆಲಸ ಮಾಡಿದ ಇವರಿಗೆ ದೆಹಲಿ ತುಳುಸಿರಿಯ ಉಪಾಧ್ಯಕ್ಷೆ ಮತ್ತು ಜನಕಪುರಿ ಮಹಿಳಾ ಮಂಡಳಿಯಲ್ಲಿ ಅಧ್ಯಕ್ಷೆಯಾಗಿ ಸೇವೆ ಸಲ್ಲಿಸುತ್ತಿರುವ ಅನುಭವ ಇದೆ. ಜೊತೆಗೆ ಇವರು ಪ್ರಸ್ತುತ ಕರ್ನಾಟಕ ರಾಜ್ಯ ಮಕ್ಕಳ ಸಾಹಿತ್ಯ ಪರಿಷತ್ತಿನ, ದೆಹಲಿ ಘಟಕದ ಉಪಾಧ್ಯಕ್ಷೆಯಾಗಿದ್ದಾರೆ. ಈ ಹಿಂದೆ ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಯ ಆಡಳಿತ ಮಂಡಳಿ ಸದಸ್ಯೆಯಾಗಿಯೂ ಕಾರ್ಯ ನಿರ್ವಹಿಸಿದ್ದಾರೆ. ದೆಹಲಿ ಕರ್ನಾಟಕ ಸಂಘ ಆಯೋಜಿಸಿದ ಸಮೂಹ ನೃತ್ಯ ಕಾರ್ಯಕ್ರಮಗಳಲ್ಲಿ ಸಕ್ರಿಯವಾಗಿ ಪಾಲ್ಗೊಂಡಿದ್ದಾರೆ. ಇತ್ತೀಚೆಗೆ ಬಿಡುಗಡೆಗೊಂಡ 'ಜೀವನ ರೇಖೆ' ಕಿರುಚಿತ್ರದಲ್ಲಿ ಅಭಿನಯಿಸಿ ಜನಮೆಚ್ಚುಗೆ ಪಡೆದಿದ್ದಾರೆ. ಅಮೃತ ಮಹೋತ್ಸವದ ಕರಾವಳಿ ಜಿಲ್ಲಾ ಸಾಂಸ್ಕೃತಿಕ ಉತ್ಸವ ಕಾರ್ಯಕ್ರಮದಲ್ಲಿ ಉಪಾಧ್ಯಕ್ಷರ ಜೊತೆ ಕೆಲಸ ಮಾಡಿ ಯಶಸ್ವಿಯಾಗುವಲ್ಲಿ ಭಾಗಿಯಾಗಿದ್ದಾರೆ. 2021–23ರ ಅವಧಿಯಲ್ಲಿ ಕಾರ್ಯಕಾರಿ ಸಮಿತಿ ಸದಸ್ಯರಾಗಿದ್ದ ಇವರು 2024–26ರ ಅವಧಿಗೆ ಮತ್ತೊಮ್ಮೆ ಸದಸ್ಯರಾಗಿ (ಮಹಿಳಾ ಮೀಸಲು) ಆಯ್ಕೆಯಾಗಿದ್ದಾರೆ.

## ಅಧ್ಯಕ್ಷರಿಂದ ನಾಮಾಂಕಿತಗೊಂಡ ಸದಸ್ಯರು



**ಶ್ರೀ ಎನ್.ಆರ್. ಶ್ರೀನಾಥ** : ಮೂಲತಃ ಮೈಸೂರಿನವರಾದ ಇವರು ದೆಹಲಿ ಪೋಲಿಸ್ ಇಲಾಖೆಯಲ್ಲಿ ಕಳೆದ ಮೂರು ದಶಕಗಳಿಂದ ಸೇವೆ ಸಲ್ಲಿಸುತ್ತಿದ್ದಾರೆ. ಕನ್ನಡ ನಾಡು–ನುಡಿಯ ಬಗ್ಗೆ ಅಪಾರ ಆಸಕ್ತಿಯುಳ್ಳ ಇವರು ರಾಷ್ಟ್ರ ರಾಜಧಾನಿಯಲ್ಲಿನ ಅನೇಕ ಕನ್ನಡಪರ ಸಂಘ ಸಂಸ್ಥೆಗಳಲ್ಲಿ ಸಕ್ರಿಯರಾಗಿದ್ದು, ಪ್ರಸ್ತುತ ಜನಕಪುರಿ ಕನ್ನಡ ಕೂಟದ ಅಧ್ಯಕ್ಷರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ದೆಹಲಿ ಕರ್ನಾಟಕ ಸಂಘದಲ್ಲಿ ಎರಡು ಬಾರಿ ಜಂಟಿ ಕಾರ್ಯದರ್ಶಿಯಾಗಿಯೂ, ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಯಲ್ಲಿ ಆಡಳಿತ ಮಂಡಳಿಯ ಸದಸ್ಯರಾಗಿಯೂ ಈ ಹಿಂದೆ ಉತ್ತಮ ಸೇವೆ ಸಲ್ಲಿಸಿದ್ದಾರೆ. ದೆಹಲಿ ಮುಖ್ಯಮಂತ್ರಿಗಳಾಗಿದ್ದ ದಿ. ಸಾಹೀಬ್‌ಸಿಂಗ್ ವರ್ಮಾ, ಸರ್ವೋಚ್ಚ ನ್ಯಾಯಾಲಯದ ಮುಖ್ಯ ನ್ಯಾಯಾಧೀಶರಾಗಿದ್ದ ಎ.ಎಂ. ಅಹ್ಮದಿ ಮತ್ತು ಎ.ಎಸ್. ಆನಂದ್‌ರವರುಗಳೊಂದಿಗೆ ಆಪ್ತ ಸಿಬ್ಬಂದಿಯಾಗಿ ಹಾಗೂ ಸಂಸತ್ ಭವನದ ಸುರಕ್ಷಾ ವಿಭಾಗದಲ್ಲಿ ಸೇವೆ ಸಲ್ಲಿಸಿದ್ದಾರೆ. ಕೊರೊನಾ ಸಮಯದಲ್ಲಿ ಸಲ್ಲಿಸಿದ ಸೇವೆಯನ್ನು ಗುರುತಿಸಿ ದೆಹಲಿ ಸರ್ಕಾರದ ವಾಣಿಜ್ಯ ತೆರಿಗೆ ಇಲಾಖೆ ಇವರನ್ನು ಸನ್ಮಾನಿಸಿದೆ. ಜನಕಪುರಿ ಕನ್ನಡ ಕೂಟದ ಹಲವಾರು ನಾಟಕ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಹಾಗೂ ಸಮಾಜ ಸೇವಾ ಚಟುವಟಿಕೆಗಳಲ್ಲಿ ಇವರು ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ಸಂಘದ ಹಲವಾರು ಕಾರ್ಯಕ್ರಮಗಳಿಗೆ ನಿರೂಪಕರಾಗಿ ಜನಮೆಚ್ಚಿಗೆ ಪಡೆದಿದ್ದಾರೆ. ದೆಹಲಿ ಕರ್ನಾಟಕ ಸಂಘದ ಕಾರ್ಯಕಾರಿ ಸಮಿತಿಯಲ್ಲಿಲ್ಲದಿದ್ದರೂ ಸ್ವಯಂ ಕಾರ್ಯಕರ್ತನಾಗಿ ಅಮೃತ ಮಹೋತ್ಸವದ ಸಮಾರಂಭಗಳಲ್ಲಿ ಹಗಲಿರುಳು ಶ್ರಮ ವಹಿಸಿ ಕೆಲಸ ಮಾಡಿದ್ದಾರೆ. 2024–26ರ ಅವಧಿಗೆ ನೂತನ ಕಾರ್ಯಕಾರಿ ಸಮಿತಿಯಲ್ಲಿ ಇವರು ಸದಸ್ಯರಾಗಿ ನೇಮಕಗೊಂಡಿದ್ದಾರೆ.



**ಶ್ರೀ ಶಶಿಕಾಂತ್ ಪಿ. ಪಾಟೀಲ್** : ನಮ್ಮ ದೇಶದ ಸಂಸತ್ ಭವನದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಇವರು ಮೂಲತಃ ಬೀದರ ಜಿಲ್ಲೆಯ ಬಸವಕಲ್ಯಾಣ ತಾಲೂಕಿನ ಮುಚಳಂಬ ಗ್ರಾಮದವರಾಗಿದ್ದಾರೆ. ವೃತ್ತಿ ಅರಸುತ್ತಾ 1988ರಲ್ಲಿ ದೆಹಲಿಗೆ ಬಂದ ಇವರು ಮೊದಲೆರಡು ವರ್ಷ ಖಾಸಗಿ ಕಂಪನಿಯಲ್ಲಿ ಮೇಲ್ವಿಚಾರಕರಾಗಿ ಸೇವೆ ಸಲ್ಲಿಸಿದ್ದಾರೆ. ನಂತರ 1993ರಲ್ಲಿ ಲೋಕಸಭೆಯ ಉಪಸಭಾಪತಿಗಳಾದ ಶ್ರೀ ಎಸ್. ಮಲ್ಲಿಕಾರ್ಜುನಯ್ಯ ಅವರ ಆಪ್ತ ಸಹಾಯಕ (ಪರ್ಸನಲ್ ಅಸಿಸ್ಟೆಂಟ್)ನಾಗಿ ಸೇವೆ ಸಲ್ಲಿಸುವ ಅವಕಾಶ ಇವರಿಗೆ ದೊರೆಯಿತು. ನಂತರ ಲೋಕಸಭೆಯ ಉಪಸಭಾಪತಿಗಳಾದ ಶ್ರೀ ಸೂರಜ್ ಭಾನ್, ಶ್ರೀ ಪಿ.ಎಂ. ಸಯೀದ್, ಶ್ರೀ ಸರ್ದಾರ್ ಚರಣ್‌ಜಿತ್ ಸಿಂಗ್ ಅಟ್ವಾಲ್ ಮತ್ತು ಶ್ರೀ ಕರಿಯಮುಂಡಾ ಅವರ ಜೊತೆಯಲ್ಲಿ ಕೆಲಸ ಮಾಡಿದ ಅನುಭವ ಇವರದಾಯಿತು. ನವದೆಹಲಿಯ ಬಸವ ಇಂಟರ್‌ನ್ಯಾಷನಲ್ ಸೆಂಟರಿನ ಹಿರಿಯ ಸದಸ್ಯನಾಗಿ, ಗಣೇಶ ಮಿತ್ರ ಮಂಡಳಿಯ ಕಾರ್ಯದರ್ಶಿಯಾಗಿ ಕೆಲಸ ಮಾಡುತ್ತಿದ್ದಾರೆ. ದೆಹಲಿ ಕರ್ನಾಟಕ ಸಂಘದ ಕಾರ್ಯಕಾರಿ ಸಮಿತಿಯಲ್ಲಿ ಈ ಹಿಂದೆ ಸದಸ್ಯನಾಗಿ ಕಾರ್ಯ ನಿರ್ವಹಿಸಿರುವ ಇವರು 2024–26ರ ಅವಧಿಗೆ ನೂತನ ಕಾರ್ಯಕಾರಿ ಸಮಿತಿಯಲ್ಲಿ ಸದಸ್ಯರಾಗಿ ನೇಮಕಗೊಂಡಿದ್ದಾರೆ.

# ಕನ್ನಡ ನಾಡಿನ ಗಣ್ಯ ಸಾಧಕರಿಗೆ ದೆಹಲಿ ಕರ್ನಾಟಕ ಸಂಘದಿಂದ ವಿವಿಧ ಪ್ರಶಸ್ತಿಗಳ ಪ್ರದಾನ ಸಮಾರಂಭ



ಕನ್ನಡ ಸಾಹಿತ್ಯ, ಶಿಕ್ಷಣ, ವಿಜ್ಞಾನ, ಪರಿಸರ, ಸಿನೆಮಾ, ನಾಟಕ ಮತ್ತು ರಂಗಭೂಮಿ ಮುಂತಾದ ಕ್ಷೇತ್ರಗಳಲ್ಲಿ ಅಪಾರ ಸಾಧನೆ ಮಾಡಿರುವ ಗಣ್ಯರಿಗೆ ದೆಹಲಿ ಕರ್ನಾಟಕ ಸಂಘವು ವಿವಿಧ ಪ್ರಶಸ್ತಿಗಳನ್ನು ಹಲವಾರು ವರ್ಷಗಳಿಂದ ಪ್ರದಾನ ಮಾಡುತ್ತಾ ಬಂದಿದೆ. ಇವುಗಳಲ್ಲಿ ಮುಖ್ಯವಾಗಿ ಶಿಕ್ಷಣ, ಸಾಹಿತ್ಯ, ವಿಜ್ಞಾನ ಮತ್ತು ಪರಿಸರ ಕ್ಷೇತ್ರದ ಸಾಧಕರಿಗೆ ಡಾ. ಶಿವರಾಮ ಕಾರಂತ ಪ್ರಶಸ್ತಿ, ಸಾಹಿತ್ಯ ಕ್ಷೇತ್ರದಲ್ಲಿ ಸಾಧನೆ ಮಾಡಿದವರಿಗೆ ಡಾ. ಸರೋಜಿನಿ ಮಹಿಷಿ ಪ್ರಶಸ್ತಿ, ರಂಗಭೂಮಿ ಕ್ಷೇತ್ರದಲ್ಲಿ ದುಡಿದವರಿಗೆ 'ದೆಹಲಿ ಕರ್ನಾಟಕ ಸಂಘದ ಕನ್ನಡ ಭಾರತೀ ರಂಗ ಪ್ರಶಸ್ತಿ'ಯನ್ನು ನೀಡಲಾಗುತ್ತಿದೆ. ಸಂಘದ ಅಮೃತ ಮಹೋತ್ಸವ ಕಾರ್ಯಕಾಲದಲ್ಲಿ, ಜ್ಞಾನಪೀಠ ಪುರಸ್ಕೃತ ರಾಷ್ಟ್ರಕವಿ ಕುವೆಂಪು ಪ್ರಶಸ್ತಿಯನ್ನು ಈ ವರ್ಷ ಸ್ಥಾಪಿಸಲಾಗಿದೆ.

ಈ ಎಲ್ಲಾ ಪ್ರಶಸ್ತಿಗಳಿಗೆ ಸೂಕ್ತ ವ್ಯಕ್ತಿಗಳನ್ನು ಗುರುತಿಸಿ ಆಯ್ಕೆ ಮಾಡಲು ನಾಡಿನ ಹಿರಿಯ ಸಾಹಿತಿ ಗಣ್ಯರಾದ ಡಾ. ಹಂಪ ನಾಗರಾಜಯ್ಯ, ಡಾ. ತಲಕಾಡು ರಾಮೇಗೌಡ ಮತ್ತು ಡಾ. ಎಚ್. ಎಸ್. ಶಿವಪ್ರಕಾಶ್ ಅವರನ್ನೊಳಗೊಂಡ ಆಯ್ಕೆ ಸಮಿತಿಯನ್ನು ರಚಿಸಲಾಗಿತ್ತು. ಆ ಸಮಿತಿಯು ಆಯ್ಕೆ ಮಾಡಿ ಶಿಫಾರಸ್ಸು ಮಾಡಿದ ನಾಲ್ಕು ಸಾಧಕರಿಗೆ ಈ ವರ್ಷದ ಪ್ರಶಸ್ತಿಗಳನ್ನು ಪ್ರದಾನ ಮಾಡುವ ಕಾರ್ಯಕ್ರಮವನ್ನು ದಿ. 24.12.2023 ರಂದು ದೆಹಲಿ ಕರ್ನಾಟಕ ಸಂಘದ ಸಭಾಂಗಣದಲ್ಲಿ ಆಯೋಜಿಸಲಾಗಿತ್ತು.

ಡಾ. ಸರೋಜಿನಿ ಮಹಿಷಿ ಪ್ರಶಸ್ತಿಗೆ ಖ್ಯಾತ ಕವಿ, ಹಿರಿಯ ಸಾಹಿತಿ ಡಾ. ದೊಡ್ಡರಂಗೇಗೌಡ, ಡಾ. ಶಿವರಾಮ ಕಾರಂತ ಪ್ರಶಸ್ತಿಗೆ ಹಿರಿಯರಾದ ನಾಡೋಜ ಗೊ.ರು. ಚನ್ನಬಸಪ್ಪ, ದೆಹಲಿ ಕರ್ನಾಟಕ ಸಂಘದ ಕನ್ನಡ ಭಾರತೀ ರಂಗ ಪ್ರಶಸ್ತಿಗೆ ಹಿರಿಯ ರಂಗಭೂಮಿ ಕಲಾವಿದ ಹಾಗು ಪ್ರಖ್ಯಾತ ಚಲನಚಿತ್ರ ನಟ ಶ್ರೀ ದೊಡ್ಡಣ್ಣ ಮತ್ತು ಜ್ಞಾನಪೀಠ ಪ್ರಶಸ್ತಿ ಪುರಸ್ಕೃತ ರಾಷ್ಟ್ರಕವಿ ಕುವೆಂಪು ಪ್ರಶಸ್ತಿಗೆ ಪ್ರಸಿದ್ಧ ಲೇಖಕರು, ಚಿಂತಕರೂ ಮತ್ತು ನಾಟಕಕಾರರಾದ ಶ್ರೀ ಕೆ.ವೈ. ನಾರಾಯಣ ಸ್ವಾಮಿ ಅವರನ್ನು ಸಮಿತಿ ಆಯ್ಕೆ ಮಾಡಿದ್ದು ಅವರೆಲ್ಲರೂ ಪ್ರಶಸ್ತಿ ಪ್ರದಾನ ಕಾರ್ಯಕ್ರಮಕ್ಕೆ ಆಗಮಿಸಿದ್ದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ನ್ಯಾಷನಲ್ ಮೆಡಿಕಲ್ ಕಮಿಷನ್‌ನ ಚೇರ್ಮನ್ ಆಗಿರುವ ಪದ್ಮಶ್ರೀ ಪುರಸ್ಕೃತ ಡಾ. ಬಿ.ಎನ್. ಗಂಗಾಧರ್ ಅವರು ವಹಿಸಿದ್ದರು. ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷರಾದ ಶ್ರೀ ಸಿ.ಎಂ. ನಾಗರಾಜ, ಪ್ರಧಾನ ಕಾರ್ಯದರ್ಶಿ ಶ್ರೀ ಆರ್. ರೇಣುಕುಮಾರ್ ಮತ್ತು ವಿಶಿಷ್ಟ ಕನ್ನಡಿಗ ಪುರಸ್ಕೃತ ಹಿರಿಯ ಕನ್ನಡಿಗರಾದ ಶ್ರೀ ವಿ.ವಿ. ಬಿರಾದಾರ ಅವರು ವೇದಿಕೆಯಲ್ಲಿದ್ದರು.

ಸಂಸ್ಕೃತ ಶ್ಲೋಕವನ್ನು ಉಲ್ಲೇಖಿಸಿ ಇಂದಿನ ಕಾರ್ಯಕ್ರಮದಲ್ಲಿ ವೇದಿಕೆ ಮೇಲೆ ಆಸೀನರಾಗಿರುವ ಕನ್ನಡ ನಾಡಿನ ಸಾಧಕರು ಮತ್ತು ಮುಖ್ಯ ಅತಿಥಿಗಳು ಅವರಲ್ಲಿ ಜ್ಞಾನದ ಭಂಡಾರ ತುಂಬಿ ತುಳುಕುತ್ತಾ ಇದ್ದರೂ ಸಹಾ ಅಂತಹ ಮಹನೀಯರು ನಮ್ಮ ಸಂಘದ ಕಾರ್ಯಕ್ರಮದಲ್ಲಿ ಭಾಗವಹಿಸುತ್ತಿರುವುದು ನಮ್ಮ ಸೌಭಾಗ್ಯ, ಅವರಿಗೆ ಧನ್ಯವಾದಗಳು ಎಂದು ನಿರೂಪಣೆ ಮಾಡಿದ ಸಂಘದ ಉಪಾಧ್ಯಕ್ಷೆ ಶ್ರೀಮತಿ ಪೂಜಾ ರಾವ್ ಅವರು ಹೇಳಿದರು.

ಪ್ರಾರಂಭದಲ್ಲಿ, ಸ್ಥಳೀಯ ಪುಟಾಣಿ ಮಕ್ಕಳು ಮತ್ತು ಮಹಿಳೆಯರು ನಾಡಗೀತೆಗೆ ಧ್ವನಿಯಾದರು. ಆಗಮಿಸಿದ್ದ ಅತಿಥಿ ಗಣ್ಯರನ್ನು ಹಾಗು ಸಭಾಂಗಣದಲ್ಲಿ ಉಪಸ್ಥಿತರಿದ್ದ ಎಲ್ಲರನ್ನು ಆತ್ಮೀಯವಾಗಿ ಸ್ವಾಗತಿಸಿದ ಸಂಘದ ಅಧ್ಯಕ್ಷ ಶ್ರೀ ಸಿ.ಎಂ. ನಾಗರಾಜ ಅವರು ಪ್ರಾಸ್ತಾವಿಕವಾಗಿ ಮಾತನಾಡಿದರು. ನಮ್ಮ ಸಂಘವು ನೀಡುವ ಈ ನಾಲ್ಕು ಪ್ರಶಸ್ತಿಗಳು ವಿಶಿಷ್ಟ ಪ್ರಶಸ್ತಿಗಳಾಗಿದ್ದು ಅತ್ಯಂತ ಅರ್ಹರಾದವರನ್ನು ನಾವು ಘಟಿಸಿದ ಆಯ್ಕೆ ಸಮಿತಿಯು ನಮಗೆ ಸೂಚಿಸಿದ್ದು ನಮ್ಮ ಸಂಘವು ಈ ಬಾರಿ ನೀಡುತ್ತಿರುವ ಪ್ರಶಸ್ತಿಗಳನ್ನು ಸ್ವೀಕರಿಸಲು ಈ ವರ್ಷದ ಕೊನೆಯದಾದ ಇಂದಿನ ಕಾರ್ಯಕ್ರಮದಲ್ಲಿ ಆ ನಾಲ್ಕೂ ಹಿರಿಯ ಸಾಧಕರು ನಮ್ಮೊಂದಿಗಿದ್ದಾರೆ, ಅವರೆಲ್ಲರಿಗೂ ಧನ್ಯವಾದಗಳನ್ನು ತಿಳಿಸುತ್ತೇನೆ ಎಂದರು.

ಜೊತೆಗೆ, ಸಂಘದ ಅಮೃತ ಮಹೋತ್ಸವ ಕಾರ್ಯಕ್ರಮಕ್ಕೆ ದೇಶದ ಪ್ರಧಾನ ಮಂತ್ರಿಗಳು ಭಾಗವಹಿಸಿದ್ದನ್ನು ಅಧ್ಯಕ್ಷರು ನೆನಪಿಸಿಕೊಂಡು ಪ್ರಧಾನಿಗಳು ಸಂಘವು ಮುಂದಿನ 25 ವರ್ಷಗಳಲ್ಲಿ ಮಾಡಬಹುದಾದ ಕೆಲಸಗಳನ್ನು ನಮಗೆ ತಿಳಿಸಿದ್ದಾರೆ. ಆ ನಿಟ್ಟಿನಲ್ಲಿ ನಾವು ಮುಂದುವರಿಯುತ್ತಿದ್ದೇವೆ. ಸಂಘದ ಅಮೃತ ಕಾರ್ಯಕಾಲದಲ್ಲಿ ಸ್ಥಳೀಯರಿಗೆ ಅನುಕೂಲವಾಗುವಂತಹ ಆರೋಗ್ಯ ಮೇಳ, ಉದ್ಯೋಗ ಮೇಳ ಹಾಗೂ ಆಹಾರ ಮೇಳಗಳಂತಹ ಹಾಗೂ ಸ್ಥಳೀಯ ಕಲಾವಿದರಿಂದ 'ಹೆಸರಾಯಿತು ಕರ್ನಾಟಕ, ಉಸಿರಾಗಲಿ ಕನ್ನಡ', ದಸರಾ ಸಂಭ್ರಮ ಹಾಗು ಜಾನಪದ ಕಲಾ ಪ್ರಕಾರಗಳ ವೈವಿಧ್ಯಮಯ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಆಯೋಜಿಸಿದ್ದೇವೆ. ಸಂಘದ ವತಿಯಿಂದ ನಡೆಸಲಾಗುತ್ತಿರುವ ಕನ್ನಡ ಕಲಿಕಾ ಕೇಂದ್ರಗಳಲ್ಲಿ ಸುಮಾರು 80 ಕನ್ನಡಿಗರ ಮಕ್ಕಳಿಗೆ ಕನ್ನಡ ಕಲಿಸಲಾಗುತ್ತಿದೆ. ನಾಗರೀಕ ಸೇವೆ ಹಾಗೂ ಇನ್ನಿತರ ಸ್ಪರ್ಧಾತ್ಮಕ ಪರೀಕ್ಷೆಗಳಿಗಾಗಿ ದೆಹಲಿಗೆ ಬರುವ ಕನ್ನಡಿಗರ ಮಕ್ಕಳಿಗೆ ದಾಸೋಹ ಹಾಗೂ ವಸತಿ ನಿಲಯ ನಿರ್ಮಾಣ ಕೆಲಸಗಳಿಗೆ ಹಾಗು ಮತ್ತೊಂದು ಕನ್ನಡ ಶಾಲೆಗಾಗಿ ಸಂಘಕ್ಕೆ ಇನ್ನೊಂದು ಜಾಗ ಹುಡುಕುವಲ್ಲಿ ನಾವು ಕಾರ್ಯನಿರತರಾಗಿದ್ದೇವೆ. ಇವೆಲ್ಲವೂ ದೆಹಲಿ ಕನ್ನಡಿಗರ ಸಹಕಾರದಿಂದ ಸಾಕಾರವಾಗಲಿವೆ,ಮುಂಬರುವ ಕಾರ್ಯಕಾರಿ ಸಮಿತಿಯು ನಮ್ಮ ಕಾರ್ಯ ಯೋಜನೆಗಳನ್ನು ಮುಂದುವರಿಸಿ ಕನ್ನಡವನ್ನು ಉಳಿಸಿ ಬೆಳೆಸಲಿ ಎಂದು ಆಶಿಸಿದರು.

ವೇದಿಕೆಯ ಮೇಲೆ ಉಪಸ್ಥಿತರಿದ್ದ ಅತಿಥಿ ಗಣ್ಯರಿಂದ ದೀಪ ಪ್ರಜ್ವಲನೆ ಮಾಡುವ ಮೂಲಕ ಕಾರ್ಯಕ್ರಮಕ್ಕೆ ವಿದ್ಯುಕ್ತ ಚಾಲನೆ ನೀಡಲಾಯಿತು. ಸಂಘದಿಂದ ನೀಡುವ ಡಾ. ಶಿವರಾಮ ಕಾರಂತ ಪ್ರಶಸ್ತಿಯನ್ನು ಹಿರಿಯರಾದ ನಾಡೋಜ ಡಾ. ಗೊ.ರು. ಚನ್ನಬಸಪ್ಪ ಅವರಿಗೆ, ಡಾ. ಸರೋಜಿನಿ ಮಹಿಷಿ ಪ್ರಶಸ್ತಿಯನ್ನು ಪದ್ಮಶ್ರೀ ಪುರಸ್ಕೃತ ಡಾ. ದೊಡ್ಡರಂಗೇಗೌಡ ಅವರಿಗೆ, ದೆಹಲಿ ಕರ್ನಾಟಕ ಸಂಘದ ಕನ್ನಡ ಭಾರತೀ ರಂಗ ಪ್ರಶಸ್ತಿಯನ್ನು ಶ್ರೀ ದೊಡ್ಡಣ್ಣ ಅವರಿಗೆ, ಹಾಗು ಮೊದಲ ಬಾರಿಗೆ ನೀಡುತ್ತಿರುವ ರಾಷ್ಟ್ರಕವಿ ಕುವೆಂಪು ಪ್ರಶಸ್ತಿಯನ್ನು ಶ್ರೀ ಕೆ.ವೈ. ನಾರಾಯಣ ಸ್ವಾಮಿ ಅವರಿಗೆ ಪ್ರದಾನ ಮಾಡಿ ಅಭಿನಂದಿಸಲಾಯಿತು. ಪ್ರಶಸ್ತಿ ಪುರಸ್ಕೃತರ ಪರಿಚಯವನ್ನು ಕ್ರಮವಾಗಿ ಕಾರ್ಯಕಾರಿ ಸಮಿತಿ ಸದಸ್ಯ ಶ್ರೀ ಪ್ರಭಾಕರ ಮಡ್ಡಿತೋಟ್, ಜಂಟಿ ಕಾರ್ಯದರ್ಶಿ ಶ್ರೀ ನಾರಾಯಣ ಬಿ., ಸದಸ್ಯ ಶ್ರೀ ಸಂತೋಷ ಜೆ. ಹಾಗೂ ಉಪಾಧ್ಯಕ್ಷ ಡಾ. ಎಂ.ಎಸ್. ಶಶಿಕುಮಾರ್ ಮಾಡಿಕೊಟ್ಟರು.

ಡಾ. ಶಿವರಾಮ ಕಾರಂತ ಪ್ರಶಸ್ತಿಗೆ ಭಾಜನರಾದ ನಾಡೋಜ ಗೊ.ರು. ಚನ್ನಬಸಪ್ಪ ಅವರು ಮಾತನಾಡಿ ನಾಡಿನ ಪ್ರಸಿದ್ಧ ಹಾಸ್ಯ ಸಾಹಿತಿ ದಿ. ಬಳ್ಳಾರಿ ಬೀಚಿಯವರ ಸುಧಾ ವಾರಪತ್ರಿಕೆಯ 'ನೀವು ಕೇಳಿದಿರಿ' ಅಂಕಣದ ಬಗ್ಗೆ ಉಲ್ಲೇಖಿಸುತ್ತಾ ಒಬ್ಬ ಓದುಗ ಕೇಳಿದ ಭಾರತದಲ್ಲಿ ಅತ್ಯಂತ ಅದ್ಭುತ ಆಶ್ಚರ್ಯಗಳು ಯಾವುವು ಎಂಬ ಪ್ರಶ್ನೆಗೆ ಬೀಚಿಯವರು ಕೊಟ್ಟಿದ್ದು 9 ಉತ್ತರಗಳು: ಹಣ ಮಾಡದ ರಾಜಕಾರಣಿ, ಅಹಂಕಾರವಿಲ್ಲದ ವಿದ್ವಾಂಸ, ಶೀಲಾ ಚಾರಿತ್ರ್ಯ ಉಳ್ಳಂತಹ ಮಠಾಧಿಪತಿ, ಲೈಟ್ ಕಂಬಕ್ಕೆ ಕಲ್ಲು ಹೊಡೆಯದ ವಿದ್ಯಾರ್ಥಿ, ಸಜ್ಜಾಗಿ ಹೋಗಿ ಪಾಠ ಹೇಳುವಂತಹ ಉಪನ್ಯಾಸಕ, ಹೆಂಡತಿಗೆ ಹೆದರದ ಅಧಿಕಾರಿ, ಗಂಡನ ಮೇಲೆ ಸಂಶಯವಿಲ್ಲದ ಹೆಂಡತಿ, ಸೊಸೆಯನ್ನು ಮಗಳಂತೆ ಕಾಣುವ ಅತ್ತೆ. ಸುಂದರ ಹೆಣ್ಣು ಹಾದು ಹೋಗುವಾಗ ಹಿಂತಿರುಗಿ ನೋಡದ ಮುದುಕ. ಇವುಗಳ ಜೊತೆಗೆ ಇಲ್ಲಿನ ಸಂಘದ ಅಧ್ಯಕ್ಷರಾದ ಶ್ರೀ ಸಿ.ಎಂ. ನಾಗರಾಜ ಅವರು ಹತ್ತನೇ ಆಶ್ಚರ್ಯವನ್ನು ಕೇಳುತ್ತಿದ್ದಾರೆ. ಅದೇನೆಂದರೆ ಸ್ಮರಣಶಕ್ತಿ ಶ್ರವಣಶಕ್ತಿ, ಪ್ರಾಣಶಕ್ತಿ, ಜೀರ್ಣ ಶಕಿ ಮತ್ತು ದೃಷ್ಟಿ ಶಕ್ತಿ ಇವೆಲ್ಲವೂ ಹೋಗಿರುವಂತಹ ನನ್ನಂತವನಿಗೆ ಪ್ರಶಸ್ತಿ ನೀಡಿರುವುದು. ಅವರ ಕರೆಗೆ ನಾನು ಬಂದಿರುವುದೂ ಒಂದು ಸೋಜಿಗವೇ ಎಂದರು. 12ನೇ ಶತಮಾನದ ಆತ್ಮಜ್ಞಾನಿ ಅಲ್ಲಮಪ್ರಭುವಿನ ಎತ್ತಣ ಮಾಮರ, ಎತ್ತಣ ಕೋಗಿಲೆ, ಸಮುದ್ರದ ಉಪ್ಪು ಹಾಗು ಬೆಟ್ಟದ ನೆಲ್ಲಿಕಾಯಿಗಳಿಗೆ ಎಂಥಾ ಸಂಬಂಧವಯ್ಯಾ ಎನ್ನುವ ಮಾತು ವಿಶ್ವಪ್ರಜ್ಞೆಯ ಜ್ಞಾನ ಭಂಡಾರವಾಗಿದ್ದ ಡಾ. ಶಿವರಾಮ ಕಾರಂತರು ಎಂತ, ಜಾನಪದ ಅಂಗಳದಲ್ಲಿ

ಅಡ್ಡಾಡಿದ ನಾನೆಂತ? ಆದರೂ ಅಭಿಮಾನದಿಂದ ದೆಹಲಿಯ ನೀವೆಲ್ಲಾ ಬಂಧುಗಳು ನನಗೆ ಪ್ರಶಸ್ತಿ ನೀಡಿದ್ದೀರಿ, ಅಂತಹ ಜ್ಞಾನಸ್ವರೂಪರ ಹೆಸರಿನಲ್ಲೆ ಕೊಡುತ್ತಿರುವ ಈ ಪ್ರಶಸ್ತಿಯನ್ನು ಬೇಡ ಅನ್ನುವುದು ಸೌಜನ್ಯವಲ್ಲವೆಂದು ಸ್ವೀಕರಿಸಲು ಬಂದಿದ್ದೇನೆ, ಈ ಪ್ರಶಸ್ತಿಗೆ ತಮ್ಮ ಹೆಸರು ಸೂಚಿಸಿದಾಗ, ಯಾರಾದರೂ ಬೇರೆ ಕ್ರಿಯಾಶೀಲ ವ್ಯಕ್ತಿಗೆ ಕೊಡಿ ಎಂದಿದ್ದೆ. ಆದರೆ ಅಧ್ಯಕ್ಷರಾದ ನಾಗರಾಜರು ಒಪ್ಪಿರಲಿಲ್ಲ, ಹಾಗಾಗಿ ನಾನು ನಿರಾಕರಿಸಲಿಲ್ಲ. ಕರ್ನಾಟಕದ ರಾಯಭಾರಿಯಾಗಿ ದೆಹಲಿಯಲ್ಲಿ ಕನ್ನಡದ ಸೇವೆ ಸಲ್ಲಿಸುತ್ತಿರುವ ಅಭಿಮಾನದ ಈ ಸಂಘದ ಪ್ರಶಸ್ತಿಯನ್ನು ಪಡೆದು ಸಂಘದ ಘನತೆ ಹೆಚ್ಚಿಸುವುದಕ್ಕಿಂತ ತಮ್ಮ ಘನತೆ ಹೆಚ್ಚಾಗಿದೆ ಎಂದರು.

ಮುಂದುವರಿದು ಡಾ. ಕಾರಂತರು ಜಾನಪದ ಕ್ಷೇತ್ರದಲ್ಲಿ ಯಕ್ಷಗಾನವನ್ನು ಇಡೀ ವಿಶ್ವಕ್ಕೆ ಪರಿಚಯ ಮಾಡಿಕೊಟ್ಟವರು. ಜನಪದ ಕಲೆಯ ಸೌಂದರ್ಯವನ್ನು ಅದರ ಬೆಡಗು ಬಿನ್ನಾಣವನ್ನು ನೋಡಿ ಬೆರಗಾದ ವ್ಯಕ್ತಿ ಅವರು. ಹಾಗೇನೇ ತಾವೂ ಕೂಡ ಬೆರಗಾಗಿ ಸುಮಾರು 150 ಕ್ಕೂ ಹೆಚ್ಚು ಜಾನಪದ ಕಲೆಗಳನ್ನು ನಾಡಿನಾದ್ಯಂತ ಪರಿಚಯ ಮಾಡಿಸಿದ ಸಮಾಧಾನ ತಮಗಿದೆ. ಡಾ. ಕಾರಂತರ ಸಹೃದಯ ಸಮೀಪ ಅನುಭವಿಸಿದವರಲ್ಲಿ ನಾನೂ ಒಬ್ಬ ಎಂದು ಅಭಿಮಾನ ಪಡುತ್ತೇನೆ. ಕಾರಂತರು ತಮ್ಮ ಜೀವನದಲ್ಲಿ ಎಷ್ಟೇ ಪ್ರಶಸ್ತಿ ಪುರಸ್ಕಾರಗಳು ಲಭಿಸಿದರೂ ಅವರು ನಿರ್ಲಿಪ್ತರಾಗಿದ್ದರು. ಅಂತಹ ಶ್ರೇಷ್ಠ ವಿಚಾರವಾದಿಯ ಹೆಸರಿನ ಪ್ರಶಸ್ತಿ ಒಂದು ಪ್ರತಿಷ್ಠಿತ ಪ್ರಶಸ್ತಿ ಎಂದು ನಾನು ಭಾವಿಸುತ್ತೇನೆ. ಈಗ ಪ್ರಶಸ್ತಿಗಳ ಪ್ರಾಂಗಣ ಹೆಚ್ಚುತ್ತಿದೆ, ಕೆಲವು ಬಾಗಿಲಿಗೆ ಪುಲ್ ಅಂಡ್ ಪುಶ್ ಎಂದು ಬರೆದಿರುವಂತೆ, ಕೆಲವು ಪ್ರಶಸ್ತಿಗಳು ಪುಲ್ ಆದರೆ ಕೆಲವು ಪುಶ್ ಆಗಿವೆ, ಆದರೆ ಇಂದು ನೀಡುತ್ತಿರುವ ನಾಲ್ಕೂ ಪ್ರಶಸ್ತಿಗಳು ಅದರ ಪುರಸ್ಕೃತರಿಗೆ ತೆರೆದ ಬಾಗಿಲಿನಿಂದ ಕರೆಸಿಕೊಂಡು ನೀಡಿದಂತಹವು. ಸಹೃದಯ ತೋರಿ ನಮ್ಮ ಮೇಲೆ ಇಟ್ಟ ಅಭಿಮಾನಕ್ಕೆ ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷರು ಹಾಗು ಪದಾಧಿಕಾರಿಗಳಿಗೆ ಹಾಗು ನಿಮಗೆಲ್ಲರಿಗೂ ನಾನು ಕೃತಜ್ಞನಾಗಿದ್ದೇನೆ, ಶರಣು ಶರಣಾರ್ಥಿ ಎಂದು ಹೇಳಿದರು.

ಡಾ. ಸರೋಜಿನಿ ಮಹಿಷಿ ಪ್ರಶಸ್ತಿ ಪುರಸ್ಕೃತರಾದ ಪದ್ಮಶ್ರೀ ಡಾ. ದೊಡ್ಡರಂಗೇಗೌಡ ಅವರು ಶರಣೆಂಬೆ ಗುರುವಿಗೆ, ಶರಣೆಂಬೆ ಅರಿವಿಗೆ, ಶರಣೆಂಬೆ ಸಂಗೀತ ಸಾಹಿತ್ಯ ಸರಸ್ವತಿಗೆ, ಶರಣೆಂಬೆ ನಿಮ್ಮೆಲ್ಲರಿಗೆ ಎಂದು ಹೇಳುತ್ತಾ ತಮ್ಮ ಮಾತುಗಳನ್ನು ಆರಂಭಿಸಿದರು. ಮೊದಲಿಗೆ ಭಾರತದ ಹೆಮ್ಮೆಯ ರಾಜಧಾನಿ ದೆಹಲಿಯಲ್ಲಿ ಕನ್ನಡದ ಧ್ವಜವನ್ನು ಮೇಲೆತ್ತಿ ನಿಲ್ಲಿಸಿ ರಾಷ್ಟ್ರದ, ವಿಶ್ವದ ಗಮನವನ್ನು ಸೆಳೆದಂತಹ ದೆಹಲಿ ಕರ್ನಾಟಕ ಸಂಘದ ಒಳ್ಳೆಯ ಕಾರ್ಯಕ್ರಮಗಳಿಗೆ ನಾನು ಸದಾ ಸ್ಪಂದಿಸುತ್ತಾ ಬಂದಿದ್ದೇನೆ, ಸಂಘದ ಎಲ್ಲಾ ಸದಸ್ಯರಿಗೆ ಅಭಿನಂದನೆಗಳು. ಪಾದರಸದಂತೆ ಚುರುಕಿನ ದೆಹಲಿ ಕರ್ನಾಟಕ ಸಂಘದ ಸಿ.ಎಂ. ನಾಗರಾಜ ಅವರು ಕೆಲವು ಅಭೂತಪೂರ್ವ ಸಂಘಟನೆಗಳನ್ನು ಮಾಡಿದ್ದಾರೆ, ಅವರ ಸಮಾವೇಶಗಳಲ್ಲಿ ಪಾಲ್ಗೊಳ್ಳುವುದು ಎಂದರೆ ಬೃಹತ್ ಸಂಖ್ಯೆಯ ಕಾರ್ಯಕ್ರಮಗಳಲ್ಲಿ ಪಾಲ್ಗೊಂಡಂತೆ. ಏಳು ಕೋಟಿ ಕನ್ನಡ ಜನರ ಪ್ರತಿನಿಧಿಯಾಗಿ ಕೆಲಸ ಮಾಡುತ್ತಿರುವ ಅವರಿಗೆ ಒಂದು ಭದ್ರವಾದ ಕ್ರಿಯಾಶೀಲ ಕನ್ನಡದ ತಂಡ ಇರುವುದು ವಿಶೇಷ. ದೆಹಲಿ ಕರ್ನಾಟಕ ಸಂಘಕ್ಕೆ ನಾನು ಬರುವ ಮುಂಚೆ ನನ್ನ ಮಗನಿಗೆ ಹೇಳಿದ್ದು 'ಅದು ನಮ್ಮ ಕನ್ನಡದ ಮನೆ' ಅಲ್ಲಿ ಪ್ರೀತಿ, ಆದರ, ವಿಶ್ವಾಸ, ನಲ್ಮೆ, ಮಾನವೀಯತೆ, ಒಳ್ಳೆಯ ಉಪಚಾರ, ಕನ್ನಡವನ್ನು ಪಸರಿಸುವ ಒಳ್ಳೆಯ ಬಗೆ ಇದೆ, ನಮ್ಮನ್ನು ಪ್ರೀತಿಯಿಂದ ಬರಮಾಡಿಕೊಳ್ಳುತ್ತಾರೆ ಎಂದು. ಕೆಲವು ಅಭಿಜಾತ ಕವಿಗಳು ಹೇಳಿದಂತೆ ಪ್ರಪಂಚದಲ್ಲಿ ಯಾವುದೂ ಶಾಶ್ವತವಲ್ಲ ಒಂದು ಒಳ್ಳೆಯ ಹೆಸರನ್ನು ಬಿಟ್ಟು ಹೋಗುವುದು ಶಾಶ್ವತ. ಕನ್ನಡ ತಾಯಿ ಭುವನೇಶ್ವರಿಗೆ ನಾವು ಕೊಡಬಹುದಾದ ಕಾಣಿಕೆ ಎಂದರೆ ಕನ್ನಡದ ಉತ್ತಮ ಕಾರ್ಯಗಳನ್ನು ಮಾಡುವುದರ ಮುಖಾಂತರ, ಆಕೆಯ ಗುಣಗಾನ ಮಾಡಿಕೊಂಡು, ಕನ್ನಡಿಗರ ಸೇವೆಯಲ್ಲಿ ನಿರತರಾಗಿ ಕೀರ್ತಿಗೆ ನಾವು ಸೇರಿಕೊಳ್ಳಬೇಕು ಎಂದರು.

ಕನ್ನಡ ನಾಡಿನಲ್ಲಿ ಅದರಲ್ಲೂ ಬೆಂಗಳೂರಿನಲ್ಲಿ ಅನೇಕ ಸಮಸ್ಯೆಗಳಿವೆ. ಕನ್ನಡವನ್ನೇ ಮೂಲೆ ಗುಂಪು ಮಾಡುವಂತಹ ಹುನ್ನಾರಗಳು ನಡೆದಿವೆ. ಕೆಲವು ಶಕ್ತಿಗಳು, ವಿಷಕಂಠಗಳು ಕನ್ನಡದ ವಿರುದ್ಧ ಕೆಲಸ ಮಾಡುತ್ತಿವೆ. ಬಿ.ಎಂ.ಶ್ರೀ ಅವರು 1920ರಿಂದ ಹೇಳುತ್ತಿದ್ದ ಕನ್ನಡ ದನಿ ಎತ್ತುವ ಬಗೆ ಹೇಗೆ ಎಂದು ನಾವು ಯೋಚಿಸಬೇಕು. ಕನ್ನಡದ ಕೀರ್ತಿಯನ್ನು ಬೆಳೆಸಬೇಕಾದ ನಾವುಗಳೇ ಕನ್ನಡನಾಡಿನಲ್ಲಿ ಕನ್ನಡಿಗರಲ್ಲೇ ತಾರತಮ್ಯ ಮಾಡ್ತಾ ಇದ್ದೇವೆ. ಎಷ್ಟೋ ಕಾರ್ಯಾಲಯಗಳಲ್ಲಿ ಕನ್ನಡದ ಅಸ್ತಿತ್ವದ ಕುರುಹುಗಳೇ ಇಲ್ಲ, ಫಲಕಗಳಿಲ್ಲ, ಈ ಹಿಂದೆ ಪರಿಶೀಲನಾ ಸಮಿತಿಯ ಸದಸ್ಯನಾಗಿ ವೀಕ್ಷಣೆಗೆ ಹೋದಾಗ ಎಂ.ಜಿ. ರೋಡಿನ ವರ್ತಕರೊಬ್ಬರಲ್ಲಿ ಕನ್ನಡದಲ್ಲಿ ಫಲಕಗಳೇಕೆ ಹಾಕಬೇಕೆಂಬುವ ಉದ್ಧಟತನ ಧೋರಣೆ ಇರುವುದು ಕಂಡು ಬಂದಿದ್ದು ದುರದೃಷ್ಟಕರ. ಹಾಗೇನೇ, 20 ವರ್ಷಗಳಿಂದ ಇರುವ ಮಂಗಳೂರು ಪೆಟ್ರೋಕೆಮಿಕಲ್‌ನಂತಹ ದೊಡ್ಡ ಸಂಸ್ಥೆಗೆ ಪರಿಶೀಲನಾ ತಂಡದ ಸದಸ್ಯನಾಗಿ ಭೇಟಿ ಕೊಟ್ಟ ಇನ್ನೊಂದು ಉದಾಹರಣೆ ನೀಡುತ್ತಾ ಅಲ್ಲಿ ಒಬ್ಬ ಕನ್ನಡಿಗನೂ ಉದ್ಯೋಗದಲ್ಲಿಲ್ಲದಿರುವುದು ಕಂಡು ಬಂದಿದ್ದು ಶೋಚನೀಯ ಸ್ಥಿತಿ ಎಂದರು.

ಶ್ರೀ ರಾಮಕೃಷ್ಣ ಹೆಗಡೆಯವರು ಮುಖ್ಯಮಂತ್ರಿಗಳಾಗಿದ್ದ ಕಾರ್ಯಕಾಲದಲ್ಲಿ ಡಾ. ಸರೋಜಿನಿ ಮಹಿಷಿ ವರದಿ ಬಗ್ಗೆ ವಿಶ್ಲೇಷಿಸುತ್ತಾ ಅದರಲ್ಲಿ ಸುಮಾರು 50 ಕನ್ನಡದ ಸಮಸ್ಯೆಗಳನ್ನು ಪಟ್ಟಿ ಮಾಡಲಾಗಿದ್ದು, ಅವುಗಳಲ್ಲಿ 7 ಇನ್ನೂ ಈಡೇರಿಲ್ಲ. ಕರ್ನಾಟಕದಲ್ಲಿ ಕನ್ನಡಿಗರಿಗೆ ಉದ್ಯೋಗ ನೀಡದಂತಹ ವಿಷಮ ಸನ್ನಿವೇಶವಿದೆ. ಕನ್ನಡಿಗರಿಗೆ ಅನ್ಯಾಯವಾಗುತ್ತಿರುವುದು ದುರಂತ. ಇದರ ವಿರುದ್ಧ ನಾವೆಲ್ಲಾ ಒಕ್ಕೊರಲಲ್ಲಿ ಎದ್ದು ನಿಲ್ಲಬೇಕು. ಡಾ. ಮಹಿಷಿ ಅವರು ವಿದ್ವತ್ಪೂರ್ಣವಾದ ಮಹಿಳೆ. ಧಾರವಾಡದಲ್ಲಿ ಎಂ.ಎ. ಪೂನದಲ್ಲಿ ಕಾನೂನು ಪರೀಕ್ಷೆಯಲ್ಲಿ ಪದವಿ ಪಡೆದವರು. ಅವರು ಕನ್ನಡಿಗರ ಹಿತದೃಷ್ಟಿಯಲ್ಲಿ ವರದಿಯನ್ನು ಮಾಡಿದ್ದರು. ಇಂದು ದೆಹಲಿ ಕರ್ನಾಟಕ ಸಂಘದ ವೇದಿಕೆಯಿಂದ ನಾನು ಹಕ್ಕೊತ್ತಾಯವೊಂದನ್ನು ಮಾಡುತ್ತೇನೆ. ಅದೇನೆಂದರೆ ಕನ್ನಡನಾಡಿನಲ್ಲಿ ಕನ್ನಡಿಗರಿಗೆ ಕೆಲಸ ಕೊಡಬೇಕು, ಇಲ್ಲವಾದರೆ ಅಂತಹ ಕಂಪನಿಗಳನ್ನು ಮುಟ್ಟುಗೋಲು ಹಾಕಬೇಕು, ಉಲ್ಬಣವಾಗಿರುವ ಕನ್ನಡದ ಸಮಸ್ಯೆಗಳನ್ನು ಕಾಯಕಲ್ಪ ನೀಡಿರುವ ಡಾ. ಸರೋಜಿನಿ ಮಹಿಷಿ ಅವರ ಹೆಸರಿನ ಪ್ರಶಸ್ತಿಯನ್ನು ದೆಹಲಿ ಕರ್ನಾಟಕ ಸಂಘವು ತಮಗೆ ನೀಡಿರುವುದಕ್ಕೆ ಧನ್ಯವಾದಗಳು, ನಾನು ಜೀವಿತವಿರುವವರೆಗೂ ನನ್ನ ಪರಿಧಿಯಲ್ಲಿ ಎಂದೂ ಕನ್ನಡಕ್ಕೆ ಅನ್ಯಾಯವಾಗದಂತೆ ನೋಡಿಕೊಳ್ಳುತ್ತೇನೆ ಎಂದು ತಿಳಿಸಿದರು.

ದೆಹಲಿ ಕರ್ನಾಟಕ ಸಂಘದ ಕನ್ನಡ ಭಾರತೀ ರಂಗ ಪ್ರಶಸ್ತಿಯನ್ನು ಸ್ವೀಕರಿಸಿ ಮಾತನಾಡಿದ ಹಿರಿಯ ನಟ ಶ್ರೀ ದೊಡ್ಡಣ್ಣ ಅವರು ಗೊರುಚ ಅವರ ಬಗ್ಗೆ ಹೇಳುತ್ತಾ ಶರಣ ಸಾಹಿತ್ಯದಲ್ಲಿ ಅವರು ರಾಷ್ಟ್ರೀಯ ಹೆಜ್ಜೆಯನ್ನು ಇಟ್ಟಿರುವುದು ಶ್ಲಾಘನೀಯ, ಅವರು ಶತಾಯುಷಿಯಾಗಲಿ, ಭಗವಂತ ಸಿದ್ಧಗಂಗಾ ಶ್ರೀಗಳಂತೆ ನೂರಾ ಹನ್ನೊಂದು ವರ್ಷ ಅವರಿಗೆ ಕೊಡಲಿ ಎಂದು ಪ್ರಾರ್ಥನೆ ಮಾಡುತ್ತೇನೆ ಎಂದರು. ಚಲನಚಿತ್ರರಂಗದಲ್ಲಿ ಅತ್ಯುತ್ತಮ ಸಾಹಿತ್ಯ ನೀಡಿರುವ ಶ್ರೇಷ್ಠರಲ್ಲಿ ಡಾ. ದೊಡ್ಡರಂಗೇಗೌಡರು ಹಾಗೂ ಹಿನ್ನೆಲೆ ಗಾಯನ ನೀಡಿದ ಶ್ರೀ ಎಸ್.ಪಿ. ಬಾಲಸುಬ್ರಮಣ್ಯಂ ಅವರು ನನಗೆ ಅತ್ಯಂತ ಪ್ರಿಯರಾದವರು. ಡಾ. ದೊಡ್ಡರಂಗೇಗೌಡರ ಜೊತೆ ನಾನು ಒಟ್ಟಿಗೆ ವೇದಿಕೆ ಹಂಚಿಕೊಂಡಿದ್ದು ಇದೇ ಮೊದಲು ಅದಕ್ಕಾಗಿ ದೆಹಲಿ ಕರ್ನಾಟಕ ಸಂಘಕ್ಕೆ ನಾನು ಕೃತಜ್ಞನಾಗಿದ್ದೇನೆ, ಈ ವರ್ಷ ಮೂರನೇ ಬಾರಿ ಈ ಸಂಘಕ್ಕೆ ನಾನು ಬಂದಿದ್ದೇನೆ, ಮುಂದೆಯೂ ಬರುವ ಯೋಗ ಸಿಗಲಿ ಎಂದರು.

ಮುಂದುವರಿದು, ನಮ್ಮ ಕನ್ನಡ, ವಿಶ್ವದ ಮೂರು ಶ್ರೀಮಂತ ಭಾಷೆಗಳಲ್ಲಿ ಒಂದಾಗಿದ್ದು. ಜಗತ್ತಿನಲ್ಲೇ ಅತ್ಯಂತ ಶ್ರೀಮಂತವಾದ, ಸುಲಲಿತ ಭಾಷೆ, ಬೆಂಗಳೂರಿನಲ್ಲಿರುವ ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ರಾಘವಾಂಕನ ಹರಿಶ್ಚಂದ್ರ ಕಾವ್ಯ, ಸಿದ್ಧರಾಮನ ಚರಿತ್ರೆಯ ಪುಸ್ತಕ ಪ್ರಿಂಟ್ ಮಾಡಲು ತಾವು ಪರಿಷತ್ತಿಗೆ ತಿಳಿಸಿದ್ದನ್ನೂ ಹಾಗು ಪುಸ್ತಕಗಳಲ್ಲಿನ ಕೆಲವು ನಿದರ್ಶನಗಳನ್ನು ಪ್ರಸ್ತಾಪಿಸಿದರು. ಕವಿರತ್ನ ರನ್ನನ ಕಾವ್ಯವೊಂದನ್ನು ವಿಶ್ಲೇಷಿಸುತ್ತಾ ದುರ್ಯೋಧನನು ತನ್ನ ಸಹೋದರ ದುಶ್ಯಾಷನ ತನಗಿಂತ ಮೊದಲು ಮೃತನಾಗಿದ್ದನ್ನು ಪರಿತಪಿಸಿ ದುಃಖಪಡುವ ಬಗೆಯನ್ನು ಎಷ್ಟೊಂದು ಸುಂದರವಾಗಿ ಕನ್ನಡದಲ್ಲಿ ಬರೆದಿದ್ದಾನೆ ಎಂದರು. ಕನ್ನಡದ ಮಕ್ಕಳು ನಾಡಗೀತೆ ಹಾಡಿದ್ದನ್ನು ಪ್ರಶಂಶಿಸುತ್ತಾ, ಪೋಷಕರು ತಮ್ಮ ಮಕ್ಕಳೊಂದಿಗೆ ಮನೆಯಲ್ಲಿ ಕನ್ನಡದಲ್ಲೇ ಮಾತನಾಡಬೇಕು, ದೆಹಲಿ ಕನ್ನಡಿಗರೆಲ್ಲರೂ ತಮ್ಮ ಮಕ್ಕಳಿಗೆ ಕಡ್ಡಾಯವಾಗಿ ಕನ್ನಡ ಕಲಿಸಿ ಎಂದು ಕಿವಿ ಮಾತನ್ನು ಹೇಳುತ್ತಾ ತಮಗೆ ಇಷ್ಟವಾದ ಕೆಲವು 25–30 ಪುಸ್ತಕಗಳನ್ನು ಸಂಘದ ಗ್ರಂಥಾಲಯಕ್ಕೆ ನೀಡುತ್ತಿದ್ದೇನೆ, ಇದರ ಪ್ರಯೋಜನ ಕನ್ನಡ ಮಕ್ಕಳಿಗಾಗಲಿ, ಹಾಗೇನೇ ಬಸವಣ್ಣನವರ ತತ್ವಗಳನ್ನು ಪಾಲಿಸುತ್ತಾ ಜಾತಿ ಮತಗಳಿಂದ ಮೇಲೆದ್ದು ಎಲ್ಲಾ ಕನ್ನಡಿಗರು ನಿಲ್ಲಬೇಕು, ಪ್ರಶಸ್ತಿ ನೀಡಿದ್ದಕ್ಕೆ ಕೃತಜ್ಞತೆಗಳು, ಕನ್ನಡವೇ ಸತ್ಯ ಕನ್ನಡವೇ ನಿತ್ಯ, ಸಿರಿಗನ್ನಡಂ ಗೆಲ್ಗೆ, ಸಿರಿಗನ್ನಡಂ ಬಾಳ್ಗೆ ಎಂದು ಹೇಳುತ್ತಾ ಶ್ರೀ ದೊಡ್ಡಣ್ಣ ತಮ್ಮ ಮಾತನ್ನು ಮುಕ್ತಾಯಗೊಳಿಸಿದರು.

ಈ ವರ್ಷದಿಂದ ಸಂಘವು ನೀಡುತ್ತಿರುವ ರಾಷ್ಟ್ರಕವಿ ಕುವೆಂಪು ಪ್ರಶಸ್ತಿಗೆ ಮೊದಲ ಬಾರಿ ಪುರಸ್ಕೃತರಾದ ಶ್ರೀ ಕೆ.ವೈ. ನಾರಾಯಣ ಸ್ವಾಮಿ ಅವರು ಸಭೆಯನ್ನುದ್ದೇಶಿಸಿ ಮಾತನಾಡಿ, ಕರಾವಳಿಯಲ್ಲಿ ಡಾ. ಶಿವರಾಮ ಕಾರಂತರು, ಮೈಸೂರಿನಲ್ಲಿ ಕುವೆಂಪು ಅವರು 20ನೇ ಶತಮಾನದಲ್ಲಿ ವೈಚಾರಿಕತೆಯನ್ನು ಬೆಳೆಸಿದವರು, ಕನ್ನಡದ ಮೂರ್ತಿಯನ್ನು ಕೆತ್ತಿದವರು, ಎಲ್ಲರನ್ನೂ ಮನುಷ್ಯರನ್ನಾಗಿಸಿದ ಮಹಾನ್ ಶಿಲ್ಪಿಗಳು ಈ ಇಬ್ಬರು. ಡಾ. ಶಿವರಾಮ ಕಾರಂತ ಅವರ ಪ್ರಶಸ್ತಿಯನ್ನು ಶ್ರೀ ಗೊರುಚ ಅವರಿಗೆ ಸಂಘವು ನೀಡಿದ್ದು, ಹಾಗೇನೇ ಒಬ್ಬ ಕವಿಯಾಗಿ, ಸಾಹಿತಿಯಾಗಿ ಕನ್ನಡದ ತೇರನ್ನು



ಎಳೆದುಕೊಂಡು ಬಂದಿರುವ ಡಾ. ದೊಡ್ಡರಂಗೇಗೌಡ ಅವರಿಗೆ ಡಾ. ಸರೋಜಿನಿ ಮಹಿಷಿ ಪ್ರಶಸ್ತಿ ಕೊಟ್ಟಿರುವುದು ಅತ್ಯಂತ ಸಹಜವೂ, ಸಮರ್ಥವೂ ಆಗಿದೆ. ಇವರಿಬ್ಬರಿಗೂ ನನ್ನ ಗೌರವ ನಮನಗಳು. ಹಿರಿಯ ನಟ ಶ್ರೀ ದೊಡ್ಡಣ್ಣನವರನ್ನು ನೋಡಿದರೆ ಯಾವ ಕನ್ನಡ ಪಂಡಿತರಿಗೂ ಕಡಿಮೆ ಎನಿಸುವುದಿಲ್ಲ. ಅವರು ಹರಿಶ್ಚಂದ್ರ ಕಾವ್ಯ, ರನ್ನನ ಹಳಗನ್ನಡಗಳನ್ನು ಅರೆದು ಕುಡಿದಿರುವುದನ್ನು ಕೇಳಿ ಹಾಗು ಅವರಿಗೆ ಕನ್ನಡ ಭಾರತೀ ರಂಗ ಪ್ರಶಸ್ತಿ ನೀಡಿರುವುದು ಬಹಳ ಸಂತೋಷವಾಗಿದೆ. ಕನ್ನಡ ಭಾಷೆಯ ಸೊಗಡನ್ನು ಹೊರಹೊಮ್ಮಿಸಿರುವ ಕನ್ನಡಿಗರಾದ ಆದಿಕವಿ ಪಂಪನಿಂದ ಹಿಡಿದು ಕುವೆಂಪುರವರವರೆಗೆ ಕನ್ನಡದ ನದಿಯು ಹರಿಸಿಕೊಂಡು ಬಂದಿದೆ, ಕುವೆಂಪು ಅವರ ಹೆಸರಿನಲ್ಲಿ ಪ್ರಶಸ್ತಿಯನ್ನು ದೆಹಲಿ ಕರ್ನಾಟಕ ಸಂಘವು ತನ್ನ ಅಮೃತ ಮಹೋತ್ಸವ ಹಾಗೂ ರಾಜ್ಯಕ್ಕೆ ಕರ್ನಾಟಕ ಹೆಸರಾಗಿ ಸುವರ್ಣ ಮಹೋತ್ಸವದ ಸಂದರ್ಭದಲ್ಲಿ ಸ್ಥಾಪಿಸಿರುವುದು ಒಂದು ಅತ್ಯಂತ ಸಾಂಕೇತಿಕ ಹಾಗೂ ಸೂಕ್ತ ನಡೆಯಾದ್ದು, ಆ ಪ್ರಶಸ್ತಿಯನ್ನು ತಮಗೆ ಮೊದಲ ಬಾರಿಗೆ ನೀಡಿ ಗೌರವಿಸಿರುವುದಕ್ಕೆ ಸಂಘದ ಅಧ್ಯಕ್ಷರೂ ಹಾಗೂ ಪದಾಧಿಕಾರಿಗಳಿಗೆ ಧನ್ಯವಾದಗಳನ್ನು ಅರ್ಪಿಸುತ್ತೇನೆ ಎಂದರು.

ಕುವೆಂಪು ಅವರು ಹೇಳಿದಂತೆ ನಡೆ ಮುಂದೆ ನಡೆ ಮುಂದೆ ನುಗ್ಗಿ ನಡೆ ಮುಂದೆ ಅನ್ನುವಂತೆ ಅಧ್ಯಕ್ಷ ಶ್ರೀ ಸಿ.ಎಂ. ನಾಗರಾಜ ಅವರು ರಾಷ್ಟ್ರಕವಿಗಳ ಮಾತುಗಳನ್ನು ಸರಿಯಾಗಿ ಅರ್ಥಮಾಡಿಕೊಂಡು ಮುನ್ನಡೆಯುವ ಸಾಮರ್ಥ್ಯ ಇರುವ ಕ್ರಿಯಾಶೀಲ ವ್ಯಕ್ತಿ. ಹಾಗೇನೇ ಅವರೊಂದಿಗೆ ಡಾ. ಎಂ.ಎಸ್. ಶಶಿಕುಮಾರ್ ಹಾಗೂ ಶ್ರೀ ಆರ್. ರೇಣುಕುಮಾರ್ ಅವರುಗಳು ತಾವು ದೆಹಲಿಗೆ ಬಂದ ಮೇಲೆ ಸಂಘದಲ್ಲಿ ಸಿಕ್ಕ ಗೆಳೆಯರು. ಈ ಹಿಂದೆ 2009ರಲ್ಲಿ ಕುವೆಂಪು ಪ್ರತಿಷ್ಠಾನದ ಕಾರ್ಯಕ್ರಮದಲ್ಲಿ ಕುವೆಂಪು ಅವರ ಬಗ್ಗೆ ಮಾತನಾಡಲು ಸಂಘಕ್ಕೆ ತಾವು ಬಂದಿದ್ದನ್ನು ನೆನಪಿಸಿಕೊಂಡು, ಹರಿಶ್ಚಂದ್ರ ಕಾವ್ಯದಲ್ಲಿ 'ನಿಂದ ನೆಲದ ಗುಣವೋ, ಸಂದ ಕಾಲದ ಗುಣವೋ' ಎಂಬಂತೆ ಈ ಸಂಘಕ್ಕೆ, ಇಲ್ಲಿನ ಕಟ್ಟಡಕ್ಕೆ ಒಂದು ಆಯಸ್ಕಾಂತೀಯ ಗುಣವಿದೆ. ಇದು ಇನ್ನೂ ಎತ್ತರಕ್ಕೆ ಬೆಳೆಯಲಿ ಎಂದು ಹಾರೈಸಿದರು. ತಾವು ಈ ಹಿಂದೆ ಕುವೆಂಪು ಅವರ ಮಲೆಗಳಲ್ಲಿ ಮದುಮಗಳು ಕಾದಂಬರಿಯನ್ನು ರಂಗಕ್ಕೆ ಅಳವಡಿಸುವಂತಹ ದುಸ್ಸಾಹಸವನ್ನು ಮಾಡಿದ್ದನ್ನು ಪ್ರಸ್ತಾಪಿಸುತ್ತಾ, ಮೈಸೂರು ರಂಗಾಯಣದಿಂದ ಈ ನಾಟಕವನ್ನು ಮಾಡಲು ಹೊರಟಿದ್ದಾಗ 780 ಪುಟಗಳ ಕಾದಂಬರಿಯನ್ನು 78 ದೃಶ್ಯಗಳಿರುವ ನಾಟಕವಾಗಿ ಪ್ರದರ್ಶನವನ್ನು ಇಡೀ ರಾತ್ರಿ ಮೊದಲು ಮೈಸೂರಿನಲ್ಲಿ 2010 ರಲ್ಲಿ 15 ಷೋಗಳನ್ನು ಮಾಡಿದ್ದೆವು. ಅದು ಬಹಳ ಪ್ರಸಿದ್ಧಿಯಾಗಿ ಅನಂತರ ಬೆಂಗಳೂರಿನ ಕಲಾಗ್ರಾಮದ, ಬಯಲಿನಲ್ಲಿ 111 ಪ್ರದರ್ಶನಗಳನ್ನು ಕಂಡಿದ್ದು, ಇಲ್ಲಿಯವರೆಗೆ ಸುಮಾರು 76000 ಜನ ಆ ನಾಟಕವನ್ನು ನೋಡಿದ್ದಾರೆ. ಈ ನಾಟಕದ ತುಣುಕುಗಳು ಈಗ ಡಿಜಿಟಲ್ ಮಾಧ್ಯಮದಲ್ಲಿಯೂ ಲಭ್ಯವಿದೆ, ಕುವೆಂಪುರವರ ಕಾದಂಬರಿಯನ್ನು ರಂಗದ ಮೇಲೆ ತಂದ ಪವಿತ್ರ ಕಾರ್ಯ ಮಾಡಿದ್ದು ತಮಗೆ ತೃಪ್ತಿ ತಂದಿದೆ ಎಂದರು.

ಅನಂತರ ಕುವೆಂಪು ಅವರ ಶೂದ್ರ ತಪಸ್ವಿ ನಾಟಕವನ್ನು ತೆಲುಗಿಗೆ ಅನುವಾದ ಮಾಡಲು ಪ್ರಯತ್ನ ಮಾಡಿದ್ದೆ. ತೆಲುಗಿಗೆ ಅನುವಾದಗೊಂಡ ಆ ನಾಟಕ ಆಂಧ್ರ ಹಾಗೂ ಈಗಿನ ತೆಲಂಗಾಣದಾದ್ಯಂತ 50–60 ಯಶಸ್ವಿ ಪ್ರದರ್ಶನ ಕಂಡಿತು. ತೆಲುಗಿನ ಭಾಷಿಕರಿಗೆ ಕುವೆಂಪು ಅವರನ್ನು ಪರಿಚಯಿಸುವ ಒಂದು ಪುಣ್ಯದ ಕೆಲಸವನ್ನೂ ನಾನು ಮಾಡಿದ್ದೆ ಮತ್ತು ಕರ್ನಾಟಕ ಸರ್ಕಾರ ಆರಂಭಿಸಿದ 'ಕುವೆಂಪು ಓದು' ಎಂದು ಹೊಸ ಯೋಜನೆ ಅಡಿಯಲ್ಲಿ ಎಲ್ಲಾ ಶಾಲಾ ಕಾಲೇಜುಗಳಿಗೆ ಭೇಟಿ ನೀಡಿ ಕುವೆಂಪುರವರನ್ನು ಪರಿಚಯಿಸುವ ಪ್ರಯತ್ನವನ್ನು ಮಾಡಿದ್ದೇನೆ. ಬಸವಣ್ಣನವರನ್ನು ಜಗದ್ಗುರು, ದಾರ್ಶನಿಕವೆಂದು ಮೊಟ್ಟಮೊದಲು ಹೇಳಿದವರು ವಿಶ್ವಮಾನವ ತತ್ವವನ್ನು ಪ್ರಪಂಚಕ್ಕೆ ತೋರಿಸಿದ ಶ್ರೇಷ್ಠ ಕವಿ ಕುವೆಂಪು ಅವರು. ನಾನು ಬರೆದ ಸುಮಾರು ನಾಟಕಗಳಲ್ಲಿ 'ಅನಭಿಜ್ಞಾ ಶಾಕುಂತಲ', 'ಮಲ್ಲಿಗೆ' ಹಾಗೂ ಇತ್ತೀಚೆಗೆ ಮಾಯಾಬೇಟೆ ನಾಟಕಗಳು ಈ ಸಂಘದ ವೇದಿಕೆಯಲ್ಲಿ ಪ್ರದರ್ಶನವಾಗಿರುವುದಕ್ಕೆ ನಾನು ಆಭಾರಿ ಎಂದರು. ಕೈವಾರ ನಾರಾಯಣಪ್ಪ ಅವರು ಹೇಳಿದ್ದಂತೆ ಕರ್ನಾಟಕವೆಂಬುವುದು ಒಂದು ಬೆರಕೆ ಸೊಪ್ಪಿನ ಕಂತೆ ಇದ್ದ ಹಾಗೆ, ಆ ಬೆರಕೆ ಸೊಪ್ಪಿನ ಕಟ್ಟಿನಿಂದ ಮಾಡಿದ ಸಾರು ಎಷ್ಟು ರುಚಿಕರವಾಗಿರುತ್ತೋ, ಕರ್ನಾಟಕದ ಸಂಸ್ಕೃತಿಯು ಅಷ್ಟೇ ರುಚಿಯಾಗಿರುತ್ತದೆ. ಅಂತಹ ಕರ್ನಾಟಕದ ಪ್ರತಿನಿಧಿಯಾಗಿ ಕರ್ನಾಟಕದಲ್ಲಿರುವ ಯಾವ ಸಂಘ ಸಂಸ್ಥೆಗಳೂ ಮಾಡಲಾರದಂತಹ ಹಲವಾರು ಗುಣಾತ್ಮಕ ಕಾರ್ಯಕ್ರಮಗಳನ್ನು, ಕೆಲಸಗಳನ್ನು ಇಲ್ಲಿನ ಕರ್ನಾಟಕ ಸಂಘ ಮಾಡುತ್ತಿದೆ. ಈ ಅಮೃತಕಾಲದಲ್ಲಿ ಈವರೆಗೆ ಏರಿದ ಎತ್ತರವನ್ನು ಕಾಪಾಡಿಕೊಂಡು ಇನ್ನಷ್ಟು ಎತ್ತರಕ್ಕೆ ಈ ಸಂಘ ಏರಲಿ ಎಂದು ಆಶಿಸುತ್ತಾ, ಕುವೆಂಪು ಅವರ ಹೆಸರಿನಲ್ಲಿ ಮೊದಲ ಪ್ರಶಸ್ತಿ ನೀಡಿದ್ದಕ್ಕೆ ಕೃತಜ್ಞನಾಗಿದ್ದೇನೆ, ಎಲ್ಲರಿಗೂ ಅಭಿನಂದನೆಗಳು ಎಂದರು.

ದೆಹಲಿ ಕರ್ನಾಟಕ ಸಂಘದ 2023ರ ಸಾಲಿನ 'ವಿಶಿಷ್ಟ ಕನ್ನಡಿಗ' ಪ್ರಶಸ್ತಿ ಪುರಸ್ಕೃತರಾದ ಹಿರಿಯ ದೆಹಲಿ ಕನ್ನಡಿಗರೂ ಮತ್ತು ಕಲ್ಯಾಣ ಕರ್ನಾಟಕ ಸಾಂಸ್ಕೃತಿಕ ಸಂಘದ ಅಧ್ಯಕ್ಷರೂ ಆದ ಶ್ರೀ ವಿ.ವಿ. ಬಿರಾದಾರ ಅವರು ಮಾತನಾಡಿ, ಇಂದು ವಿವಿಧ ಪ್ರಶಸ್ತಿ ಪುರಸ್ಕೃತರಾದ ಹಿರಿಯರೂ ಮತ್ತು ಗಣ್ಯ ವ್ಯಕ್ತಿಗಳ ಜೊತೆ ವೇದಿಕೆ ಹಂಚಿಕೊಂಡಿದ್ದು ತಮ್ಮ ಸೌಭಾಗ್ಯ ಹಾಗೂ ಪೂರ್ವ ಜನ್ಮದ ಪುಣ್ಯವಾಗಿದೆ, ಇಂತಹ ದಿಗ್ಗಜರನ್ನು ಸಂಘಕ್ಕೆ ಕರೆಸಿರುವುದೂ ಸಹ ದೆಹಲಿ ಕನ್ನಡಿಗರ ಪಾಲಿಗೆ ಸುಯೋಗವೂ ಕೂಡ. ನನ್ನ ತಂದೆ ತಾಯಿಯವರನ್ನು ಕಳೆದುಕೊಂಡ ನಂತರ ಬಡತನವಿದ್ದ ಆ ಕಾಲದಲ್ಲಿ ಎಲ್ಲರ ಸಹಾಯದಿಂದ ನಾನು ಬಿ.ಎ. ಪದವಿ ಪಡೆದ ನಂತರ 1970ರಲ್ಲಿ ಅಂದಿನ ಉಪರಾಷ್ಟ್ರಪತಿಯವರಾದ ಶ್ರೀ ಬಿ.ಡಿ. ಜತ್ತಿಯವರ ಜೊತೆ ಕೆಲಸ ಮಾಡಲು ದೆಹಲಿಗೆ ಬಂದಿದ್ದೆ. ಕನ್ನಡಿಗರ ಪ್ರೀತಿ ನನ್ನನ್ನು ಇಲ್ಲಿಯವರೆಗೆ ಕರೆದುಕೊಂಡು ಬಂದಿತು. ಅನಂತರ, ಶ್ರೀ ರೆಹಮಾನ್ ಖಾನ್ ಮತ್ತು ಹಲವು ಕೇಂದ್ರ ಮಂತ್ರಿಗಳು, ಸಂಸದರೊಂದಿಗೆ ಕಾರ್ಯ ನಿರ್ವಹಿಸಿ, ಪ್ರಸ್ತುತ ಸಂಸದರಾದ ಶ್ರೀ ಗದ್ದೀಗೌಡರ್ ಅವರ ಜೊತೆ ಕೆಲಸ ಮಾಡುತ್ತಿದ್ದೇನೆ. ಇಲ್ಲಿನ ಜನರ ಪ್ರೀತಿ ಮತ್ತು ಪ್ರೋತ್ಸಾಹದಿಂದ ಮಕ್ಕಳು, ಮೊಮ್ಮಕ್ಕಳು ವಿದ್ಯಾವಂತರಾಗಿದ್ದಾರೆ, ನನ್ನ ಸುಮಾರು 50 ವರ್ಷಗಳ ದೆಹಲಿ ಜೀವನದಲ್ಲಿ ಇಲ್ಲಿನ ಕನ್ನಡಿಗರ ಸೇವೆ ಹಾಗೂ ಸಾಮಾಜಿಕ ಕ್ಷೇತ್ರದ ಕೆಲಸಗಳನ್ನು ಗುರುತಿಸಿ 'ವಿಶಿಷ್ಟ ಕನ್ನಡಿಗ' ಪ್ರಶಸ್ತಿಯನ್ನು ತಮಗೆ ಸಂಘ ನೀಡಿ ಗೌರವಿಸಿರುವುದು ಬಹಳ ಸಂತೋಷ ತಂದಿದೆ ಎಂದು ದೆಹಲಿ ಕರ್ನಾಟಕ ಸಂಘದ ಬಗ್ಗೆ ಹೆಮ್ಮೆ ಪಟ್ಟು ಹೇಳುತ್ತಾ 'ಓ ಯಾತ್ರಿಕನೇ ಇದು ಕನ್ನಡಮ್ಮನ ಮಂಟಪ,... ಯಾತ್ರಿಕನೆ ತಲೆಬಾಗಿ ಕೈಮುಗಿದು ಒಳಗೆ ಬಾ ಇದು ದೇವ ಮಂದಿರ' ಎಂಬ ಸ್ವರಚಿತ ಕವನವನ್ನು ವಾಚಿಸಿದರು. ಸಂಘದ ಅಧ್ಯಕ್ಷ ಶ್ರೀ ಸಿ.ಎಂ. ನಾಗರಾಜ ಅವರ ಬಗ್ಗೆ ಮಾತನಾಡುತ್ತಾ ಅಮೃತ ಮಹೋತ್ಸವ ಕಾರ್ಯಕ್ರಮಕ್ಕೆ ಪ್ರಧಾನ ಮಂತ್ರಿಗಳನ್ನು ಕರೆಯಿಸಿ ಅವರ ಸಮ್ಮುಖದಲ್ಲಿ ಕರ್ನಾಟಕದಿಂದ ಬಂದ ಸಾವಿರಾರು ಕಲಾವಿದರಿಂದ ಪ್ರದರ್ಶನ ಮಾಡಿಸಿದ್ದಾರೆ. ಸಂಘಕ್ಕೆ ಇನ್ನೊಂದು ಜಾಗ ತೆಗೆದುಕೊಳ್ಳಬೇಕೆಂದು ಪ್ರಯತ್ನ ಮಾಡ್ತಾ ಇದ್ದಾರೆ. ಕನ್ನಡ ನಾಡು, ನುಡಿ, ಭಾಷೆ ಮತ್ತು ಸಂಸ್ಕೃತಿಯನ್ನು ಪಸರಿಸುವ ಮತ್ತು ದೆಹಲಿ ಕನ್ನಡಿಗರ ಸೇವೆಯಲ್ಲಿ ಸದಾ ತಮ್ಮನ್ನು ತೊಡಗಿಸಿಕೊಂಡಿರುವ ಅವರಿಗೆ ನಾವು ಚಿರಋಣಿಯಾಗಿರಬೇಕು ಎಂದು ಹೇಳಿದರು.

ಪ್ರಶಸ್ತಿ ಪ್ರದಾನ ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ನಿಮ್ಹಾನ್ಸ್‌ನ ಪೂರ್ವ ನಿರ್ದೇಶಕರೂ ಹಾಗೂ ಪ್ರಸ್ತುತ ಭಾರತೀಯ ಮೆಡಿಕಲ್ ಕಮಿಷನ್‌ನ ಚೇರ್ಮನ್ ಆಗಿರುವ ಪದ್ಮಶ್ರೀ ಡಾ. ಬಿ.ಎನ್. ಗಂಗಾಧರ ಅವರು ಮಾತನಾಡಿ ಹೂವಿನ ಜೊತೆ ನಾರು ಎನ್ನುವ ಹಾಗೆ ನಾನು ವೇದಿಕೆಯಲ್ಲಿದ್ದೇನೆ, ನಾವು ಯಾವುದೇ ರೀತಿ ಕನ್ನಡ ಸಾಹಿತ್ಯಕ್ಕೆ ಸೇವೆ ಮಾಡಿದವನಲ್ಲ, ಕನ್ನಡಿಗ ಅನ್ನುವುದು ಒಂದೇ ನನ್ನ ಅರ್ಹತೆ, ಹಿರಿಯರೂ, ವಯೋವೃದ್ಧರು ಹಾಗೂ ಸಾಹಿತ್ಯ ಕ್ಷೇತ್ರದಲ್ಲಿ ಅತ್ಯಂತ ಸಾಧನೆ ಮಾಡಿರುವವರ ಜೊತೆ ಕೆಲವು ಗಂಟೆಗಳು ಕಾಲ ಕಳೆದದ್ದೇ ನನ್ನ ಸೌಭಾಗ್ಯ. ಅದಕ್ಕೆ ಅನುವು ಮಾಡಿಕೊಟ್ಟ ದೆಹಲಿ ಕರ್ನಾಟಕ ಸಂಘ ಮತ್ತು ಅದರ ಪರಿವಾರಕ್ಕೆ ಧನ್ಯವಾದಗಳು, ಪ್ರಶಸ್ತಿಗಳಿಗೆ ಸಾರ್ಥಕತೆ ಬರಬೇಕಾದರೆ ಅದನ್ನು ಪಡೆಯುವಂತಹವರು ಯಾರು ಅನ್ನೋದರ ಮೇಲೆ ನಿರ್ಭರವಾಗುತ್ತದೆ, ಇವತ್ತಿನ ಈ ಶ್ರೇಷ್ಠ ವಿದ್ವಾಂಸರನ್ನು ಆಯ್ಕೆ ಮಾಡಿರುವುದು ಈ ಪ್ರಶಸ್ತಿಗಳಿಗೆ ಮೆರುಗು ತಂದಿದೆ ಎಂದರು. ನಾನು 65 ವರ್ಷ ಬೆಂಗಳೂರಿನಲ್ಲಿ ಜೀವನ ಮಾಡಿದ ನಂತರ ಕಳೆದ ಮೂರು ವರ್ಷಗಳಿಂದ ದೆಹಲಿಯಲ್ಲಿದ್ದೇನೆ, ಆದರೆ ಈ ಮೂರು ವರ್ಷಗಳಲ್ಲಿಯೂ ಕೇಳದಷ್ಟು ಕನ್ನಡ ಮಾತುಗಳನ್ನು ಇಂದು ಈ ಮೂರು ಗಂಟೆಗಳಲ್ಲಿ ಕೇಳಿದ್ದೇನೆ. ಅತ್ಯಂತ ಸರಳವಾದ ವಿದ್ವತ್ಪೂರ್ಣ ಕನ್ನಡವನ್ನು ಕೇಳಲು ನನಗೆ ಈ ಅವಕಾಶ ಮಾಡಿಕೊಟ್ಟ ಸಂಘದ ಅಧ್ಯಕ್ಷರಿಗೆ ಹಾಗು ಕಾರ್ಯದರ್ಶಿಗಳಿಗೆ ಧನ್ಯವಾದಗಳು ಎಂದು ಹೇಳಿದರು.

ಅವರಿಗೆ ಸಂಘದ ಪರವಾಗಿ ಗೌರವ ಸಮರ್ಪಣೆ ನೀಡಲಾಯಿತು. ಅನಂತರ ಕಳೆದ ಡಿಸೆಂಬರ್ ತಿಂಗಳಿನಲ್ಲಿ ಆಯೋಜನೆಗೊಂಡ ಕೈರುಚಿ ಆಹಾರ ಮೇಳದಲ್ಲಿ ಆಹಾರ ಮಳಿಗೆಗಳೊಂದಿಗೆ ಭಾಗವಹಿಸಿ ಯಶಸ್ಸಿನಲ್ಲಿ ಪಾಲುದಾರರಾದ ದೆಹಲಿ ಕನ್ನಡಿಗ ಮಹಿಳೆಯರಿಗೆ ಬಹುಮಾನ ಹಾಗು ಸಹಾಯಧನವನ್ನು ಶ್ರೀ ದೊಡ್ಡಣ್ಣನವರಿಂದ ವಿತರಿಸಲಾಯಿತು. ಅಮೃತ ಮಹೋತ್ಸವ ಕಾರ್ಯಕಾಲದಲ್ಲಿ ಸಂಘದಿಂದ ಆಯೋಜನೆಗೊಂಡ ವಿವಿಧ ಕಾರ್ಯಕ್ರಮಗಳ ಬಗ್ಗೆ ಸಂಕ್ಷಿಪ್ತ ಮಾಹಿತಿಯನ್ನು ನೀಡುತ್ತಾ, ಸಂಘದ ಕಾರ್ಯಕಾರಿ ಸಮಿತಿ ಸದಸ್ಯರಾದ ಶ್ರೀ ಸಂತೋಷ ಜೆ. ಅವರು ಬಹುಮಾನ ವಿತರಣೆ ಕಾರ್ಯಕ್ರಮವನ್ನು ನಿರ್ವಹಿಸಿಕೊಟ್ಟರು.

ಸಭೆಯ ಕೊನೆಯಲ್ಲಿ ಸಂಘದ ಪ್ರಧಾನ ಕಾರ್ಯದರ್ಶಿ ಶ್ರೀ ಆರ್. ರೇಣುಕುಮಾರ್ ಅವರು ಆಗಮಿಸಿದ್ದ ಮುಖ್ಯ ಅತಿಥಿಗಳಿಗೆ, ಪ್ರಶಸ್ತಿ ಪುರಸ್ಕೃತರಿಗೆ ವಿವಿಧ ಕ್ಷೇತ್ರಗಳಲ್ಲಿನ ಅವರ ಸಾಧನೆ, ಅವರ ಪಾಂಡಿತ್ಯ ವಿದ್ವತ್ತು, ಕನ್ನಡ ನಾಡಿಗೆ ನೀಡಿರುವ ಕೊಡುಗೆಗಳನ್ನು ಪ್ರಶಂಸಿಸುತ್ತಾ, ಇವತ್ತು ಕನ್ನಡಮ್ಮನ ಮಡಿಲಲ್ಲಿ ಹುಟ್ಟಿದಂತಹ ಐದು ಕುಸುಮಗಳು, ದೊಡ್ಡ ದೊಡ್ಡ ವಿಶ್ವವಿದ್ಯಾಲಯಗಳಾಗಿ ಹೆಮ್ಮರವಾಗಿ ಬೆಳೆದು ನಿಮ್ಮ ಮುಂದಿದ್ದಾರೆ, ಈ ದಿಗ್ಗಜರನ್ನು ಒಂದೇ ವೇದಿಕೆಯಲ್ಲಿ ನೋಡುವ ಸೌಭಾಗ್ಯ ನಮ್ಮದಾಗಿದೆ. ಇವರಿಂದ ಕನ್ನಡಮ್ಮನ ದರ್ಶನ ನಮಗಾಗಿದೆ, ಸಮಸ್ತ ದೆಹಲಿ ಕನ್ನಡಿಗರ ಹಾಗು ಕಾರ್ಯಕಾರಿ ಸಮಿತಿ ಪರವಾಗಿ ಅಭಿನಂದನೆಗಳನ್ನು ಅನಂತಾನಂತ ಧನ್ಯವಾದಗಳನ್ನು ಅರ್ಪಿಸುತ್ತೇನೆ ಎಂದು ಹೇಳಿ ಸಭಾಂಗಣದಲ್ಲಿ ಉಪಸ್ಥಿತರಿದ್ದ ಎಲ್ಲರಿಗೂ ವಂದನೆಗಳನ್ನು ಅರ್ಪಿಸಿದರು.

ಅನಂತರ, ನೃತ್ಯ ಪ್ರದರ್ಶನ ಮಾಡಿದ ಕನ್ನಡದ ಪುಟಾಣಿ ನೃತ್ಯಗಾರ್ತಿಯರಿಗೆ, ನೃತ್ಯ ಸಂಯೋಜಿಸಿದ ಕು. ಅನನ್ಯ ನಾಗರಾಜ್, ನೃತ್ಯ ತರಬೇತಿ ಮತ್ತು ಸಂಯೋಜನೆಯಲ್ಲಿ ಸಹಯೋಗ ನೀಡಿದ ಕು. ಪ್ರೇರಣಾ ರಾವ್ ಅವರನ್ನು ಅಭಿನಂದಿಸಲಾಯಿತು. ಸ್ಥಳೀಯ ಮಕ್ಕಳಿಂದ ಮೂಡಿಬಂದ ನೃತ್ಯ ಪ್ರದರ್ಶನ ಸಭಿಕರ ಮನಸೂರೆಗೊಂಡಿತು. ದೆಹಲಿಯ ಕಲಾವಿದರಿಂದ, ಮಹಿಳೆಯರಿಂದ ಸುಶ್ರಾವ್ಯ ಗೀತೆಗಳ ಗಾಯನ ಎಲ್ಲರ ಮೆಚ್ಚುಗೆ ಪಡೆದವು. ಒಟ್ಟಾರೆ ಕಾರ್ಯಕ್ರಮವನ್ನು ಉಪಾಧ್ಯಕ್ಷೆ ಶ್ರೀಮತಿ ಪೂಜಾ ರಾವ್, ಕಾರ್ಯಕಾರಿ ಸಮಿತಿ ಸದಸ್ಯೆ ಶ್ರೀಮತಿ ಮಾಲಿನಿ ಪ್ರಹ್ಲಾದ ಹಾಗೂ ಸದಸ್ಯ ಸಂತೋಷ ಜೆ. ಅವರು ಅಚ್ಚುಕಟ್ಟಾಗಿ ನಿರ್ವಹಿಸಿ ಕೊಟ್ಟು ಯಶಸ್ವಿಯಾಗಲು ಸಹಕರಿಸಿದರು. ನಂತರ ರುಚಿಕರ ಭೋಜನವನ್ನು ಎಲ್ಲರೂ ಸವಿದರು.

***ಅಭಿಮತ ವರದಿ***

# ದೆಹಲಿ ಕರ್ನಾಟಕ ಸಂಘದಿಂದ ಪ್ರದಾನ ಮಾಡಿದ ವಿವಿಧ ಪ್ರಶಸ್ತಿ ಪುರಸ್ಕೃತರು



**ಶ್ರೀ ಡಾ. ಗೊ.ರು. ಚನ್ನಬಸಪ್ಪ :** ಗೊಂಡೇದಹಳ್ಳಿ ರುದ್ರಪ್ಪ ಚನ್ನಬಸಪ್ಪ ಇವರು 94ರ ಹರೆಯದ ಹಿರಿಯ ಚೇತನ, ಓರ್ವ ಸ್ವಾತಂತ್ರ್ಯ ಹೋರಾಟಗಾರ–ಅತ್ಯುತ್ತಮ ಅಧಿಕಾರಿ, ಶ್ರೇಷ್ಠ ಬರಹಗಾರ, ಸಂಘಟಕ ಹಾಗೂ ಅತ್ಯಂತ ಸಫಲ ಆಡಳಿತಗಾರ ಹಾಗೂ ಬಹುಮುಖಿ ವ್ಯಕ್ತಿತ್ವದ ಸಮಾಜ ಸೇವಕ. 1930ರಲ್ಲಿ ಶ್ರೀ ರುದ್ರಪ್ಪ ಗಿರಿಗೌಡರ ಹಾಗೂ ಶ್ರೀಮತಿ ಅಕ್ಕಮ್ಮ ದಂಪತಿಗಳ ಪುತ್ರರಾಗಿ ಚಿಕ್ಕಮಗಳೂರು ಜಿಲ್ಲೆ, ತರೀಕೆರೆ ತಾಲೂಕಿನ ಗೊಂಡೇದಹಳ್ಳಿಯಲ್ಲಿ ಜನಿಸಿದ ಇವರು ತಮ್ಮ ಶಾಲಾ ದಿನಗಳಲ್ಲಿಯೇ, ಅಂದರೆ 1944–48ರ ನಡುವೆ, ಸ್ವಾತಂತ್ರ್ಯ ಹೋರಾಟದಲ್ಲಿ ಪಾಲ್ಗೊಂಡವರು. ತಮ್ಮ 18ನೇ ವಯಸ್ಸಿನಲ್ಲೇ ಉಪಾಧ್ಯಾಯ ವೃತ್ತಿ ಆರಂಭಿಸಿದ ಇವರು ನಂತರ ಸರ್ಕಾರದ ವಿವಿಧ ಹುದ್ದೆಗಳನ್ನು ಅಲಂಕರಿಸಿದರು. ತಮ್ಮ ಸರ್ಕಾರಿ ಸೇವಾವಧಿಯಲ್ಲಿ ಉತ್ತಮ ಜನ ಸಂಪರ್ಕ ಸಾಧಿಸುವುದರೊಂದಿಗೆ ಹಲವಾರು ರಾಷ್ಟ್ರೀಯ ಹಾಗೂ ಅಂತರರಾಷ್ಟ್ರೀಯ ಮಟ್ಟದಲ್ಲಿ ರಾಜ್ಯ ಸರ್ಕಾರವನ್ನು ಪ್ರತಿನಿಧಿಸಿದ್ದಾರೆ.

ವಿಕಾಸವಾಣಿ, ಪಂಚಾಯತಿ ರಾಜ್ಯ, ಜನಪದ, ಕುಟುಂಬ, ಕನ್ನಡ ಸಾಹಿತ್ಯ ಪರಿಷತ್ಪತ್ರಿಕೆ, ಜನಪದ ಜಗತ್ತು, ಮಹಾಮನೆ ಹಾಗೂ ಸ್ಕೌಟ್ ಮತ್ತು ಗೈಡ್ ನಿಯತ ಕಾಲಿಕೆಗಳ ಸಂಪಾದಕತ್ವ ನಡೆಸಿದ ಇವರು ಬಾಗೂರು ನಾಗಮ್ಮ ಜೋಗದ ಝೋಕ, ಮೈದುನ ರಾಮಣ್ಣದಂತಹ ಜನಪದ ರಚನೆಗಳು, ಹತ್ತು ಹಲವು ಅನುವಾದಿತ ಕೃತಿಗಳು ಹಾಗೂ ಸಾಕ್ಷಿಕಲ್ಲು, ಬೆಳ್ಳಕ್ಕಿ ಹಿಂಡು ಬೆದರ್‍ಯಾವು, ಅಯ್ಯನಕೆರೆ, ಚಿತ್ರಜಂಗಮ, ಕಂತೆಭಿಕ್ಷ, ಹಾರೈಕೆ, ಹತ್ತು ವಚನಗಳ ಸುತ್ತದಂತ ಕೃತಿಗಳ ಕರ್ತೃವೂ ಆಗಿದ್ದಾರೆ. ಕರ್ನಾಟಕ ಸರ್ಕಾರದ ರಾಜಭಾಷಾ ಆಯೋಗದೊಂದಿಗೆ, ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತು ಸೇರಿದಂತೆ ಇತರೆ ಹತ್ತಾರು ಸಾರ್ವಜನಿಕ ಸಂಸ್ಥೆಗಳ ಅಧ್ಯಕ್ಷರಾಗಿ ಕಾರ್ಯ ನಿರ್ವಹಿಸಿರುವ ಇವರು ಗಾನಯೋಗಿ ಪಂಚಾಕ್ಷರ ಗವಾಯಿ ಸಂಗೀತೋತ್ಸವ ಸಮಿತಿ, ಕರ್ನಾಟಕ ಜನಪದ ಪರಿಷತ್ತು, ಡಾ. ಶಿವರಾಮ ಕಾರಂತ ಅಭಿನಂದನಾ ಸಮಿತಿಯಂತಹ ಹಲವಾರು ಪ್ರತಿಷ್ಠಿತ ಸಮಿತಿಗಳ ಕಾರ್ಯದರ್ಶಿಯಾಗಿ ಶ್ಲಾಘನೀಯ ಸೇವೆ ಸಲ್ಲಿಸಿದ್ದಾರೆ.




ಅಖಿಲ ಭಾರತ ಜಾನಪದ ಸಮ್ಮೇಳನ, ದಾಂಡೇಲಿ, ವಚನ ಸಾಹಿತ್ಯ ಸಮ್ಮೇಳನ ಬೆಂಗಳೂರು ರಾಷ್ಟ್ರಮಟ್ಟದ ಅನುಭಾವ ಸಾಹಿತ್ಯ ಸಮ್ಮೇಳನ ಮುರಬಯಿ ಮತ್ತು ಅಖಿಲ ಭಾರತ ಕನ್ನಡ ಸಂಸ್ಕೃತಿ ಸಮ್ಮೇಳನ, ಕಣ್ಮಂಡು ಮತ್ತು ದುಬೈನಲ್ಲಿ ನಡೆದ ಕನ್ನಡ ಸಂಸ್ಕೃತಿ ಮೇಳದ ಅಧ್ಯಕ್ಷರಾಗಿದ್ದರು. ಇವರ ಬಹುಮುಖಿ ಸಾಧನೆಯ ಪ್ರತೀಕವಾಗಿ ಹತ್ತಾರು ಪ್ರಶಸ್ತಿಗಳು ಇವರ ಮಡಿಲಿಗೇರಿವೆ. ಇವುಗಳಲ್ಲಿ ಪ್ರಮುಖವಾದವೆಂದರೆ : 1999 ರ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ, 2013ರ ಕೇಂದ್ರ ಸಂಗೀತ ನಾಟಕ ಅಕಾಡೆಮಿ ಪ್ರಶಸ್ತಿ, 2015 ರ ಕರ್ನಾಟಕ ಜಾನಪದ ವಿಶ್ವವಿದ್ಯಾಲಯದ ಗೌರವ ಡಾಕ್ಟರೇಟ್ ಪ್ರಶಸ್ತಿ, 2016ರ ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್‌ನ–ಸಿಲ್ವರ್ ಎಲಿಫೆಂಟ್ ಪ್ರಶಸ್ತಿ, 2018ರ ಕನ್ನಡ ಸಾಹಿತ್ಯ ಪರಿಷತ್ತು ಶತಮಾನೋತ್ಸವ ದತ್ತಿ ಪ್ರಶಸ್ತಿ, 2022ರ ನಾಡೋಜ ಪ್ರಸಸ್ತಿ, 2015 ರ ಕರ್ನಾಟಕ ಸರ್ಕಾರದ ಬಸವ ರಾಷ್ಟ್ರೀಯ ಪುರಸ್ಕಾರ ಹಾಗು 2016ರ ಬಸವ ವಿಭೂಷಣ ಮುಂತಾದ ಪ್ರಶಸ್ತಿಗಳು ಲಭಿಸಿವೆ.

ಶ್ರೀ ನಾಡೋಜ (ಡಾ)ಗೊ.ರು. ಚನ್ನಬಸಪ್ಪ ಅವರು ಸಾಹಿತ್ಯ ಮತ್ತು ಸಾರ್ವಜನಿಕ ಜೀವನಕ್ಕೆ ನೀಡಿದ ಸೇವೆಗಳನ್ನು ಸ್ಮರಿಸಿ ದೆಹಲಿ ಕರ್ನಾಟಕ ಸಂಘದ 2023ನೇ ಸಾಲಿನ ಡಾ. ಶಿವರಾಮ ಕಾರಂತ ಪ್ರಶಸ್ತಿಯನ್ನು ನೀಡಿ ಗೌರವಿಸಲಾಗಿದೆ.



**ಡಾ. ದೊಡ್ಡರಂಗೇ ಗೌಡ :** ಹಿರಿಯ ಸಾಹಿತಿ, ಪ್ರಖ್ಯಾತ ಕವಿ ಡಾ. ದೊಡ್ಡರಂಗೇ ಗೌಡ ಅವರನ್ನರಿಯದ ಕನ್ನಡಿಗರಿಲ್ಲ ಇವರು ರಚಿಸಿದ ಕನ್ನಡ ಹಾಡುಗಳನ್ನು ಕೇಳದ ಕಿವಿಗಳಿಲ್ಲ, ಸವಿಯದ ಮನಸುಗಳಿಲ್ಲ. ಡಾ. ದೊಡ್ಡರಂಗೇ ಗೌಡ ಅವರು 1946ರಲ್ಲಿ ತುಮಕೂರು ಜಿಲ್ಲೆಯ ಮಧುಗಿರಿ ತಾಲೂಕಿನ ಕುರುಬರಹಳ್ಳಿಯಲ್ಲಿ ಶ್ರೀ ಕೆ. ರಂಗೇಗೌಡರು ಮತ್ತು ಶ್ರೀಮತಿ ಅಕ್ಕಮ್ಮ ದಂಪತಿಗಳ ಸುಪುತ್ರನಾಗಿ ಜನಿಸಿದರು. ತನ್ನ ಹುಟ್ಟೂರಿನಲ್ಲಿ ಪ್ರಾಥಮಿಕ ಹಂತದ ಶಿಕ್ಷಣ ಪಡೆದ ಶ್ರೀ ದೊಡ್ಡರಂಗೇಗೌಡರು ನಂತರ ಬೆಂಗಳೂರಿನ ವಿಶ್ವ ವಿದ್ಯಾಲಯದಿಂದ ಪದವಿ ಹಾಗೂ ಮದ್ರಾಸ್ ವಿಶ್ವವಿದ್ಯಾಲಯದಿಂದ ಸ್ನಾತಕೋತ್ತರ ಪದವಿ ಪಡೆದಿರುತ್ತಾರೆ.

ಶ್ರೀಯುತರ "ಕನ್ನಡ ನವೋದಯ ಕಾವ್ಯ–ಒಂದು ಪುನರ್ ಮೌಲ್ಯಮಾಪನ" ಎಂಬ ವಿಷಯದ ಮೇಲಿನ ಸಂಶೋಧನಾ ಪ್ರಬಂಧಕ್ಕೆ ಬೆಂಗಳೂರು ವಿಶ್ವವಿದ್ಯಾಲಯದಿಂದ "ಡಾಕ್ಟರೇಟ್" ಪದವಿ ದೊರಕಿದೆ. ವಿದ್ಯಾಭ್ಯಾಸದ ನಂತರ ಉಪನ್ಯಾಸಕ ವೃತ್ತಿ ಆರಂಭಿಸಿದ ಶ್ರೀ ದೊಡ್ಡರಂಗೇಗೌಡರು ಬೆಂಗಳೂರಿನ ಅಂದಿನ ಪ್ರತಿಷ್ಠಿತ ಎಸ್‌ಎಲ್‌ಎನ್ ಮತ್ತು ಶೇಷಾದ್ರಿಪುರಂ ಕಾಲೇಜುಗಳಲ್ಲಿ ಕಾರ್ಯ ನಿರ್ವಹಿಸಿದ್ದು, ನಂತರ ಪ್ರಾಧ್ಯಾಪಕರಾಗಿ ಮತ್ತು ಪ್ರಾಚಾರ್ಯರಾಗಿಯೂ ಸೇವೆ ಸಲ್ಲಿಸಿದ್ದಾರೆ. ಅವರ ಅಂದಿನ ಶಿಷ್ಯ ವೃಂದ ಇಂದಿಗೂ ಇವರ ಬೋಧನೆ ಶೈಲಿಯನ್ನು ನಿರಂತರವಾಗಿ ನೆನಪಿಸಿಕೊಳ್ಳುತ್ತಾರೆ. ಆಧುನಿಕ ಸಾಹಿತ್ಯದ ಎಲ್ಲಾ ಮಜಲುಗಳಲ್ಲಿ ತಮ್ಮನ್ನು ತೊಡಗಿಸಿಕೊಂಡ ಶ್ರೀ ದೊಡ್ಡರಂಗೇ ಗೌಡರ ಸಾಧನೆ ಅಸಾಧಾರಣ. ಇವರ ಪ್ರಗಾಥ ಕೃತಿಗಳು, ಕವನ ಸಂಕಲನಗಳು, ಭಾವಗೀತೆಗಳು, ಮುಕ್ತಕಗಳು, ಗದ್ಯ ಕೃತಿಗಳು, ಪ್ರವಾಸ ಸಾಹಿತ್ಯ ಎಲ್ಲವೂ ವಿಶೇಷ. ಅದರಲ್ಲಿಯೂ ಚಿತ್ರರಂಗದಲ್ಲಿ, ಚಲನಚಿತ್ರ ಗೀತ ಸಾಹಿತ್ಯ ಇವರನ್ನು ನಾಡಿನ ಪ್ರತೀ ಮನೆಗೂ ಪರಿಚಯಿಸುವಲ್ಲಿ ಯಶಸ್ವಿಯಾಗಿದ್ದು, ಇವರ ಖ್ಯಾತಿಗೆ ಪ್ರೇರಣಾ ಶಕ್ತಿಯಾಗಿಯೂ ಇದೆ. ಇವರ ಈ ಎಲ್ಲಾ ಸಾಧನೆಗಳನ್ನು ಗುರುತಿಸಿದ ರಾಜ್ಯ ಸರ್ಕಾರ ಇವರಿಗೆ 1982 ರಲ್ಲಿ ಬೆಳ್ಳಿ ಪದಕ ನೀಡಿ ಸನ್ಮಾನಿಸಿರುವುದರೊಂದಿಗೆ 4 ಬಾರಿ ಗೀತ ರಚನೆಗಾಗಿ ರಾಜ್ಯ ಪ್ರಶಸ್ತಿ ನೀಡಿದೆ. 1999 ರ ರಾಜ್ಯೋತ್ಸವ ಪ್ರಶಸ್ತಿ, 1992ರ ಕನ್ನಡ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಮತ್ತು 1990 ಕನ್ನಡ ಸಾಹಿತ್ಯ ಪರಿಷತ್ತಿನ ರತ್ನಾಕರ ವರ್ಣಿ, ಮುದ್ದಣ ಕಾವ್ಯ ಪ್ರಶಸ್ತಿಗೆ ಶ್ರೀಯುತರು ಭಾಜನರಾಗಿದ್ದಾರೆ.



2021 ರ 86 ನೇ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆ ಗೌರವ ಒಂದೆಡೆಯಾದರೆ, 2008 ರಿಂದ 14ರ ವರೆಗೆ ವಿಧಾನ ಪರಿಷತ್ ಸದಸ್ಯತ್ವ ಹಾಗೂ 2018ರ ದೇಶದ ಉನ್ನತ ನಾಗರೀಕ ಪ್ರಶಸ್ತಿಗಳಲ್ಲೊಂದಾದ ಪದ್ಮಶ್ರೀ ಪ್ರಶಸ್ತಿಗಳು ಇವರ ಸಾಧನೆಯ ಶಿಖರಕ್ಕೆ ಕಳಶಪ್ರಾಯವಾಗಿ ಕಂಗೊಳಿಸುತ್ತಿವೆ.

ಇವರ ಸಾಹಿತ್ಯ, ಸಂಗೀತ ಮತ್ತು ಸಮಾಜ ಸೇವೆಯ ಕ್ಷೇತ್ರಗಳಲ್ಲಿ ಸಲ್ಲಿಸಿದ ಅನುಪಮ ಕೊಡುಗೆಗಳನ್ನು ಗುರುತಿಸಿ ದೆಹಲಿ ಕರ್ನಾಟಕ ಸಂಘದ 2023ನೇ ಸಾಲಿನ ಡಾ. ಸರೋಜಿನಿ ಮಹಿಷಿ ಪ್ರಶಸ್ತಿಯನ್ನು ನೀಡಿ ಗೌರವಿಸಲಾಗಿದೆ.



**ಶ್ರೀ ದೊಡ್ಡಣ್ಣ :** ಕನ್ನಡಿಗರ ಜನಮಾನಸದಲ್ಲಿ ಚಿರಪರಿಚಿತ ಹೆಸರು ದೊಡ್ಡಣ್ಣ ಅವರದು. ದೊಡ್ಡಣ್ಣ 1949 ರಲ್ಲಿ ಹಾಸನ ಜಿಲ್ಲೆಯ ಅರಸೀಕೆರೆಯಲ್ಲಿ ಜನಿಸಿದ ಶ್ರೀ ದೊಡ್ಡಣ್ಣ ಅವರು ಬಾಲ್ಯದಿಂದಲೂ ಸಂಗೀತ, ನಾಟಕ ಚಟುವಟಿಕೆಗಳಲ್ಲಿ ಆಸಕ್ತರಾಗಿದ್ದವರು. ಜೀವನೋಪಾಯಕ್ಕಾಗಿ ಭದ್ರಾವತಿಯ ವಿಶ್ವೇಶ್ವರಾಯ ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆಯಲ್ಲಿ ಕೆಲಸ ಮಾಡುತ್ತಿದ್ದ ಸಂದರ್ಭದಲ್ಲಿ ಇವರ ಬಾಲ್ಯದ ಕನಸನ್ನು ನನಸಾಗಿಸುವ ನಿಟ್ಟಿನಲ್ಲಿ ತನ್ನ ಜೊತೆಗಾರರನ್ನು ಹುರಿದುಂಬಿಸಿ, ಒಗ್ಗೂಡಿಸಿ, ವಿಶ್ವೇಶ್ವರ ಕಲಾ ಸಂಘವನ್ನು ಸ್ಥಾಪಿಸಿದರು. ಈ ಕಲಾ ಸಂಘ ಹಾಗೂ ಸಂಘದ ಚಟುವಟಿಕೆಗಳು ಶ್ರೀ ದೊಡ್ಡಣ್ಣನವರ ರಂಗ ಪ್ರವೇಶಕ್ಕೆ ನಾಂದಿ ಹಾಡುವುದರೊಂದಿಗೆ ಅವರ ಜೀವನದ ದಿಕ್ಕನ್ನು ಬದಲಿಸಿತು. ನಂತರ ಗಂಧರ್ವ ರಂಗ ಎಂಬ ರಂಗಭೂಮಿ ತಂಡದ ಪರವಾಗಿ ಇವರ ಅಭಿನಯ ಹಾಗೂ ಸಾಧನೆ ಇವರನ್ನು ಚಿತ್ರರಂಗಕ್ಕೆ ಪರಿಚಯಿಸಿತು. ಅಂದಿನಿಂದ ಇಂದಿನವರೆಗೆ ಶ್ರೀ ದೊಡ್ಡಣ್ಣನವರು ಚಿತ್ರರಂಗದ ಅವಿಭಾಜ್ಯ ಅಂಗವಾಗಿ, ಓರ್ವ ಮೇರು ನಟನಾಗಿ ಬೆಳೆದಿದ್ದಾರೆ.



500ಕ್ಕೂ ಹೆಚ್ಚು ಕನ್ನಡ ಚಲನಚಿತ್ರಗಳಲ್ಲಿ ನಟಿಸಿರುವ ಶ್ರೀ ದೊಡ್ಡಣ್ಣ ಅವರು ನಟಿಸದ ಪಾತ್ರವಿಲ್ಲ. ಖಳ ನಾಯಕನಾಗಿ, ಹಾಸ್ಯ ನಟನಾಗಿ, ಪ್ರಬುದ್ಧ ಪೋಷಕ ನಟನಾಗಿ ಎಲ್ಲಾ ವೈವಿಧ್ಯಮಯ ಪಾತ್ರಗಳಲ್ಲಿ ಸೈ ಎನಿಸಿಕೊಂಡಿರುವ ಇವರು ಅತ್ಯಂತ ಜನಪ್ರಿಯ ನಟರಾಗಿದ್ದಾರೆ. ಹೆಸರಿಗೆ ತಕ್ಕಂತೆ, ಹೃದಯ ವೈಶಾಲ್ಯತೆಯನ್ನು ಹೊಂದಿರುವ ದೊಡ್ಡಣ್ಣ ಅತ್ಯಂತ ಜ್ಞಾನದ ಭಂಡಾರ. ಕನ್ನಡ ಭಾಷೆಯನ್ನು ಅತ್ಯಂತ ಸ್ಪಷ್ಟವಾಗಿ ಕನ್ನಡದ ವಚನಗಳನ್ನು ಅರ್ಥಪೂರ್ಣವಾಗಿ, ಸಾಹಿತ್ಯದ ಪ್ರಕಾರಗಳನ್ನು ಅತ್ಯಂತ ಸರಳವಾಗಿ ಅರ್ಥೈಸುವ ಇವರ ಕ್ಷಮತೆ ನಿಜಕ್ಕೂ ಶ್ಲಾಘನೀಯ.

ಸರಳ, ಸಜ್ಜನಿಕೆ, ಸಾಕಾರ ಮೂರ್ತರೂಪರಾದ ಇವರ ರಂಗ ಚಟುವಟಿಕೆಗಳು ಹಾಗೂ ಚಲನಚಿತ್ರ ಕ್ಷೇತ್ರದ ಸಾಧನೆಗಳನ್ನು ಗುರುತಿಸಿ 2023ನೇ ಸಾಲಿನ ದೆಹಲಿ ಕರ್ನಾಟಕ ಸಂಘದ ಕನ್ನಡ ಭಾರತೀ ರಂಗ ಪ್ರಶಸ್ತಿಯನ್ನು ನೀಡಿ ಗೌರವಿಸಲಾಗಿದೆ.



**ಶ್ರೀ ಕೆ.ವೈ. ನಾರಾಯಣ ಸ್ವಾಮಿ :** 'ಕೆ.ವೈ.ಎನ್' ಎಂದು ಪ್ರಸಿದ್ಧರಾಗಿರುವ ಕುಪ್ಪೂರು ಯಾಲಪ್ಪ ನಾರಾಯಣ ಸ್ವಾಮಿ ಇವರು ಕನ್ನಡದ ಪ್ರಖ್ಯಾತ ನಾಟಕಕಾರರು, ಕವಿಗಳು, ವಿದ್ವಾಂಸರು ಹಾಗೂ ವಿಮರ್ಶಕರೂ ಆಗಿದ್ದಾರೆ. ಶ್ರೀ ಕೆ.ವೈ.ಎನ್. ಅವರು ಸದ್ಯ ಸರ್ಕಾರಿ ಕಲಾ ಕಾಲೇಜು ಬೆಂಗಳೂರಿನಲ್ಲಿ ಕನ್ನಡ ಪ್ರಾಧ್ಯಾಪಕರಾಗಿದ್ದಾರೆ. ಇವರು ಕರ್ನಾಟಕದ, ಕೋಲಾರ ಜಿಲ್ಲೆಯ ಶ್ರೀ ಯಾಲಪ್ಪ ಮತ್ತು ಶ್ರೀಮತಿ ಮುನಿಯಮ್ಮ ದಂಪತಿಗಳ ಸುಪುತ್ರ. 1965ರಲ್ಲಿ ಜನಿಸಿದ ಶ್ರೀಯುತರು ತಮ್ಮ ಶಾಲಾ ಮತ್ತು ಪದವಿ ಪೂರ್ವ ಶಿಕ್ಷಣವನ್ನು ಮಾಸ್ತಿಯಲ್ಲಿ ಮುಗಿಸಿದ ನಂತರ ಬೆಂಗಳೂರಿಗೆ ಬಂದು ಪದವಿ ಶಿಕ್ಷಣ ಪಡೆದು ಕನ್ನಡ ವಿಷಯದಲ್ಲಿ ಸ್ನಾತಕೋತ್ತರ ಪದವಿ ಮತ್ತು ಎಂ.ಫಿಲ್ ಮುಗಿಸಿರುತ್ತಾರೆ. ಇವರ ಪಿ.ಎಚ್.ಡಿ. ಪ್ರಬಂಧವಾದ 'ನೀರ ದೀವಿಗೆ' ಈ ದೇಶದ ಸಂಸ್ಕೃತಿಯನ್ನು 'ಅಗ್ನಿ' ಮತ್ತು 'ಜಲ'ದ ಮೂಲಕ ವ್ಯಾಖ್ಯಾನಿಸಿರುವುದು ಒಂದು ನೂತನ ಪ್ರಯೋಗವಾಗಿದ್ದು, ಸಂಸ್ಕೃತಿಯ ವಿಶ್ಲೇಷಣೆಯಲ್ಲಿ ಒಂದು ಮೈಲಿಗಲ್ಲಾಗಿದೆ.

'ಕಳವು', 'ಅನಭಿಜ್ಞ ಶಾಕುಂತಲ', 'ಚಕ್ರರತ್ನ', 'ಹುಲಿಸೀರೆ' ಮತ್ತು 'ವಿನುರ ವೇಮ', ಇವರ ಕನ್ನಡದ ಪ್ರಸಿದ್ಧ ನಾಟಕಗಳು. ಇವಲ್ಲದೆ 'ಕುವೆಂಪು'ರವರ 'ಶೂದ್ರತಪಸ್ವಿ' ನಾಟಕವನ್ನು ತೆಲುಗು ಭಾಷೆಗೆ ಭಾಷಾಂತರಿಸಿದ್ದು ಮತ್ತು 'ಮಲೆಗಳಲ್ಲಿ ಮದುಮಗಳು' ಬೃಹತ್ ಕಾದಂಬರಿಯನ್ನು ಒಂಬತ್ತು ಗಂಟೆಗಳ 'ರಂಗ ರೂಪ'ಗೊಳಿಸಿದ್ದು ಇದು ಭಾರತಿಯ ರಂಗಭೂಮಿ ಕ್ಷೇತ್ರದಲ್ಲಿ ಹೊಸ ದಾಖಲೆಯನ್ನೇ ಸೃಷ್ಟಿಸಿದೆ. ಶ್ರೀ ಕೆ.ವೈ.ಎನ್ ಅವರು 'ಕಳವು' ಮತ್ತು 'ಸೂರ್ಯಕಾಂತಿ' ಎಂಬ ಕನ್ನಡ ಚಲನಚಿತ್ರಗಳಿಗೆ ಚಿತ್ರಕಥೆ ಬರೆದಿದ್ದಾರೆ. ಕನ್ನಡ ಆಧುನಿಕ ರಂಗಭೂಮಿಯಲ್ಲಿ ಹೊಸ ಛಾಪು ಮೂಡಿಸಿದ ಇವರ 'ಪಂಪ ಭಾರತ' ನಾಟಕಕ್ಕೆ 'ಸಾಹಿತ್ಯ ಅಕಾಡೆಮಿ' ಪ್ರಶಸ್ತಿ ನೀಡಿ ಗೌರವಿಸಲಾಗಿದೆ. ಕನ್ನಡದ ಪ್ರಭಾವಿ ಬರಹಗಾರರು ಮತ್ತು ಚಿಂತಕರಾಗಿರುವ ಇವರ ನಾಟಕಗಳು ಕನ್ನಡ ರಂಗಭೂಮಿಯಲ್ಲಿ ಹಲವು ಪ್ರಯೋಗಗಳೊಂದಿಗೆ ಕರ್ನಾಟಕದಿಂದಾಚೆಗೆ ಪಸರಿಸಿ ತನ್ನದೇ ಆದ ಹೊಸ ಗಡಿಗಳನ್ನು ಶೋಧಿಸುತ್ತಿವೆ.



ಈ ಎಲ್ಲಾ ಚಟುವಟಿಕೆಗಳು ಸಾಹಿತ್ಯದ ವಿವಿಧ ಪ್ರಾಕಾರಗಳಲ್ಲಿ ಇವರ ಸಾಧನೆಗೆ ಸಾಕ್ಷಿಯಾಗಿವೆ. ಇವರ ಸಾಹಿತ್ಯ ಕೃಷಿಯ ಸಾಧನೆಗಾಗಿ ಎರಡು ಬಾರಿ ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಕರ್ನಾಟಕ ಇಂಟರ್ ನ್ಯಾಷನಲ್ ಸಂಗೀತ ಪ್ರಶಸ್ತಿ, ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿಯೊಂದಿಗೆ 2014ರ ರಾಜ್ಯ ಪ್ರಶಸ್ತಿಯನ್ನು ನೀಡಿ ಇವರಿಗೆ ಗೌರವಿಸಲಾಗಿದೆ.

ಇವರ ರಂಗಭೂಮಿ, ಸಾಹಿತ್ಯ ಹಾಗೂ ಶಿಕ್ಷಣ ಕ್ಷೇತ್ರದ ಸೇವೆಗಳನ್ನು ಗುರುತಿಸಿ ದೆಹಲಿ ಕರ್ನಾಟಕ ಸಂಘದ 2023ನೇ ಸಾಲಿನಲ್ಲಿ ಸ್ಥಾಪಿಸಲಾದ ಪ್ರಥಮ ಜ್ಞಾನಪೀಠ ಪ್ರಶಸ್ತಿ ಪುರಸ್ಕೃತ 'ರಾಷ್ಟ್ರಕವಿ ಕುವೆಂಪು ಪ್ರಶಸ್ತಿ'ಯನ್ನು ನೀಡಿ ಗೌರವಿಸಲಾಗಿದೆ.



**ದೆಹಲಿ ಕರ್ನಾಟಕ ಸಂಘದ ಪ್ರಶಸ್ತಿ ಪ್ರದಾನ ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ನ್ಯಾಷನಲ್ ಮೆಡಿಕಲ್ ಕಮಿಷನ್‌ನ ಚೇರ್ಮನ್ ಪದ್ಮಶ್ರೀ ಡಾ. ಬಿ.ಎನ್. ಗಂಗಾಧರ ಅವರನ್ನು ಗೌರವಿಸಿ ಅಭಿನಂದಿಸಿದ ಕ್ಷಣ**

# ಶ್ರೀಮತಿ ಸುಮಿತ್ರಾ ರಾವ್



ಒಡಹುಟ್ಟಿದ ಅಕ್ಕ ತಮ್ಮನಿಗೂ ಇಷ್ಟೊಂದು ಜಗಳ ಆಗಲಾರದು. ಅಷ್ಟೊಂದು ಜಗಳವಾಡಿದ್ದೇನೆ. ದೆಹಲಿ ಕರ್ನಾಟಕ ಸಂಘದ ನನ್ನ ಅತ್ಯಂತ ಆತ್ಮೀಯರಲ್ಲಿ ಒಬ್ಬರು ಶ್ರೀಮತಿ ಸುಮಿತ್ರಾ ರಾವ್. ಮೊದಲ ಬಾರಿಗೆ 1992 ರಲ್ಲಿ ನಾನು ಪ್ರಧಾನ ಕಾರ್ಯದರ್ಶಿಯಾಗಿ ಸಂಘಕ್ಕೆ ಆಯ್ಕೆಯಾಗಿದ್ದೆ. ಆದರೆ ಸಂಘದಲ್ಲಿ ಅದಕ್ಕಿಂತಲೂ ಮೊದಲು ಅನೇಕ ವರ್ಷಗಳಿಂದಲೇ ಸಂಘಕ್ಕೆ ತಮ್ಮ ಸೇವೆ ಸಲ್ಲಿಸುತ್ತಾ ಬಂದಿರುವವರು ಹಿರಿಯರಾದ ಸುಮಿತ್ರಾ ರಾವ್. ಸಂಘ ಕಟ್ಟುವ ಆ ದಿನಗಳಲ್ಲಿನ ಅವರ ಪಾತ್ರ, ಕನ್ನಡಿಗರನ್ನು ಬರಮಾಡಿಕೊಳ್ಳುವ ಹಾಗೂ ಸತ್ಕರಿಸುವ ವಿಧಾನ, ಕರ್ನಾಟಕದಿಂದ ದೂರದ ದೆಹಲಿಗೆ ಬಂದಂತ ನಮ್ಮಂತಹ ಸಂಘದ ಸದಸ್ಯರೆಲ್ಲರನ್ನು ತಮ್ಮ ಮನೆಯ ಕುಟುಂಬದವರಂತೆ ಕಾಣುವ, ಆತ್ಮೀಯತೆಯನ್ನು ಬೆಸೆಯುವ ಅವರ ಸೇವೆಯನ್ನು ನಾನೆಂದಿಗೂ ಮರೆಯಲಾರೆ. ಆಗ ನಾವಿನ್ನೂ ಹೊಸಬರು. ಅವರಿಗೆ ಕೆಲಸಗಳೆಲ್ಲ ಬಹಳ ಅಚ್ಚುಕಟ್ಟಾಗಿ ಆಗಬೇಕು. ಯೋಜನೆಗಳಿಗೆ ಸಂಬಂಧಿಸಿದಂತೆ ಸಹಜವಾಗಿಯೇ ನಮ್ಮಲ್ಲಿ ಚರ್ಚೆಗಳಾಗುತ್ತಿದ್ದವು. ಸಂಘದ ಕಾರ್ಯಕ್ರಮಗಳ ಸಫಲತೆಯಲ್ಲಿ ಅವರ ಪರಿಶ್ರಮ ಉಲ್ಲೇಖನೀಯ. ಸಂಘಕ್ಕಾಗಿ ಒಂದೊಂದು ಬಿಡಿಗಾಸನ್ನು ಉಳಿಸುವಂತಹ ಆ ದಿನಗಳಲ್ಲಿ ಅನೇಕ ಮಂದಿ ಮಹಿಳೆಯರನ್ನು ಒಂದುಗೂಡಿಸಿ ಸಂಘಕ್ಕಾಗಿ ಸಾಮೂಹಿಕ ಕೆಲಸ ಮಾಡುತ್ತಾ ಸಂಘಟನೆಯನ್ನು ಬಲಪಡಿಸಿದ ಅವರ ಶೈಲಿ ಅನುಕರಣೀಯ; ಅನುಸರಣೀಯ.

ಆ ದಿನಗಳಲ್ಲಿ ಸಂಘದಲ್ಲಿ ಒಂದೊಂದು ಕಾರ್ಯಕ್ರಮವನ್ನು ನಡೆಸುವುದು ಎಂದರೆ ಬಹಳ ದೊಡ್ಡ ಕೆಲಸವೇ ಆಗುತ್ತಿತ್ತು. ಹಣಕಾಸಿನ ಕೊರತೆ ಒಂದೆಡೆಯಾದರೆ, ಆಯೋಜನೆಗಾಗಿ ಪರಿಶ್ರಮ ಇನ್ನೊಂದೆಡೆ. ನಮ್ಮದೇ ಆದಂತಹ ಸಭಾಂಗಣ ಇಲ್ಲವಾಗಿತ್ತು. ಕಾರ್ಯಕ್ರಮವನ್ನು ಆಯೋಜನೆ ಮಾಡಬೇಕು ಅಂದರೆ, ಆಮಂತ್ರಣ ಪತ್ರಿಕೆಯ ವಿನ್ಯಾಸ, ಮುದ್ರಣ, ವಿಳಾಸ ಅಂಟಿಸಿ ಅಂಚೆ ಕಚೇರಿಗೆ ಒಯ್ದು ಅದನ್ನು ಪೋಸ್ಟ್ ಮಾಡುವುದು ಎಂದರೆ ಸಾಕು ಸಾಕಾಗಿ ಹೋಗುತ್ತಿತ್ತು. ಇಷ್ಟಾದರೂ, ಕಾರ್ಯಕಾರಿ ಸಮಿತಿಯ ಸದಸ್ಯರು ಜನರಿಗೆ ದೂರವಾಣಿ ಮೂಲಕ ಸಂಪರ್ಕಿಸಿ, ವೈಯಕ್ತಿಕವಾಗಿ ಕರೆ ಮಾಡುವುದು ರೂಢಿಯಾಗಿತ್ತು. ಕಾರ್ಯಕ್ರಮ ನಡೆಸಲು ಟೆಂಟ್ ವ್ಯವಸ್ಥೆ, ರಾಜ್ಯೋತ್ಸವ, ವಾರ್ಷಿಕೋತ್ಸವ, ಪಿಕ್‌ನಿಕ್ ನಂತಹ ಕೆಲವೊಂದು ವಿಶೇಷ ಸಂದರ್ಭಗಳಲ್ಲಿ ಬಂದವರಿಗೆಲ್ಲ ಊಟದ ವ್ಯವಸ್ಥೆ ಮಾಡಿದಾಗ, ಸುಮಿತ್ರಾ ರಾವ್ ಅವರಿಗೆ ಕೆಲಸದ ಹೊರೆ ತುಂಬಾ ಜಾಸ್ತಿಯಾಗುತ್ತಿತ್ತು. ಊಟಕ್ಕೆ ಮೆನುವಿನಿಂದ ಆರಂಭಗೊಂಡು, ಎಷ್ಟು ಊಟ ಖರ್ಚಾಗಿದೆ ಎಂಬಂತಹ ಲೆಕ್ಕಗಳನ್ನು ನೋಡುವುದಾಗಲಿ ಪುಟಾಣಿಗಳಿಗೆ ಏರ್ಪಡಿಸಿದಂತಹ ಸ್ಪರ್ಧೆಗಳಲ್ಲಿ ಬಹುಮಾನ ವಿತರಿಸಲು ಸಂಘಕ್ಕೆ ಹೊರೆಯಾಗದಂತೆ ಹಾಗೂ ಮಕ್ಕಳಿಗೆ ಬೇಕಾದಂತಹ ವಸ್ತುಗಳನ್ನು ತಂದು ಪ್ಯಾಕ್ ಮಾಡುವುದಾಗಲಿ, ತಾವೇ ಸ್ವತಃ ಮಾಡುತ್ತಾ ಇತರ ಮಹಿಳೆಯರನ್ನು ಕೆಲಸದಲ್ಲಿ ತೊಡಗಿಸಿಕೊಳ್ಳುತ್ತಾ ಸಂಘವನ್ನು ಪ್ರೀತಿಯಿಂದ ಬೆಳೆಸಿದ ಸುಮಿತ್ರಾ ರಾವ್, ಕಾರ್ಯಕಾರಿ ಸಮಿತಿಯ ಸದಸ್ಯರಾಗಿ, ಜಂಟಿ ಕಾರ್ಯದರ್ಶಿಯಾಗಿ, ಉಪಾಧ್ಯಕ್ಷರಾಗಿ ದೀರ್ಘಕಾಲ ಸೇವೆ ಸಲ್ಲಿಸಿದ್ದಾರೆ. ಮಾರ್ಗದರ್ಶನ ಮಾಡಿದ್ದಾರೆ. ಸಂಘಟನೆಯನ್ನು ಬಲಪಡಿಸಿದ್ದಾರೆ. ಸಂಘದ ಏಳಿಗೆಗೆ ಬೆನ್ನೆಲುಬಾಗಿ ನಿಂತವರು ಅವರು. ದೆಹಲಿಯಲ್ಲಿ ಸಕ್ರಿಯ ಆಗಿದ್ದ ಲೇಡೀಸ್ ಕ್ಲಬ್ ಸುಮಿತ್ರಾ ರಾವ್ ಅವರ ಚಿಂತನೆಯ ಫಲ ಶ್ರುತಿ.

ಇಷ್ಟಾದರೂ ತಾವು ಕಾಣಿಸಿಕೊಳ್ಳಬೇಕು ಎಂಬ ಹಂಬಲವೇ ಅವರಿಗಿಲ್ಲ. ಏನಿದ್ದರೂ ಕೆಲಸ ಕೆಲಸ. ದೀರ್ಘಕಾಲದ ಸಂಘದ ಜೊತೆಗಿನ ತಮ್ಮ ಒಡನಾಟದಲ್ಲಿ ವೇದಿಕೆ ಮೇಲೆ ಅವರು ಯಾವತ್ತೂ ಕಾಣಿಸಿಕೊಂಡವರಲ್ಲ. ಪ್ರತಿಯೊಬ್ಬರ ಕಷ್ಟ ಸುಖಕ್ಕೂ ಸ್ಪಂದಿಸುವ ಅವರ ಮೃದು ಮನಸ್ಸು, ಸಮಚಿತ್ತ, ತಮ್ಮ ಪಾಡಿಗೆ ದಣಿವರಿಯದೆ ಕೆಲಸ ಮಾಡುವ ರೀತಿ ಅಸದೃಶವಾದುದು. ಅವರು ಸಂಘಕ್ಕಾಗಿ ಸಲ್ಲಿಸುತ್ತಿದ್ದಂತಹ ಸೇವೆಯೇ ಅವರನ್ನು ಪ್ರತಿ ಚುನಾವಣೆಯಲ್ಲೂ ಗೆಲ್ಲಿಸಿರಬೇಕು. ಅವರ ಮಕ್ಕಳಾದ ದೀಪಕ್, ಸಾಧನಾ ವಿದ್ಯಾಭ್ಯಾಸ ಮುಗಿಸಿ ನೌಕರಿಯಲ್ಲಿದ್ದರೂ ಕೆಲವೊಂದು ಕಾರ್ಯಕ್ರಮಗಳಿಗೆ ಬರುತ್ತಿದ್ದರು. ಆಗಿನ್ನೂ ಅವರ ಮನೆಯಲ್ಲಿ ಚಿಕ್ಕ ಮಕ್ಕಳು ಯಾರೂ ಇರದೇ ಇದ್ದರೂ, ಅವರ ವ್ಯಾನಿಟಿ ಬ್ಯಾಗ್‌ಗಳಲ್ಲಿ ಯಾವಾಗಲೂ ಒಂದಷ್ಟು ಚಾಕಲೇಟ್‌ಗಳು ಇರುತ್ತಿದ್ದವು. ಸಂಘಕ್ಕೆ ಬರುವಂತಹ ಪುಟ್ಟ ಮಕ್ಕಳನ್ನು ಮಾತಾಡಿಸಿ, ಅವರಿಗೆ ಚಾಕಲೇಟ್ ಕೊಡುತ್ತಾರೆ ಎಂದು ನನಗೂ ಗೊತ್ತಿತ್ತು. ಹಾಗಾಗಿ ಸುಮಿತ್ರಾ ರಾವ್ ಅವರನ್ನು ಕಂಡ ತಕ್ಷಣ ಮೆಲ್ಲಗೆ ಕೈಯೊಡ್ಡುತ್ತಿದ್ದೆ. 'ಏನಪಾ, ಚಿಕ್ಕ ಮಕ್ಕಳ ಹಾಗೆ ಚಾಕಲೇಟ್ ತಿನ್ನೋದು ಬಿಟ್ಟಿಲ್ಲಲ್ಲಾ' ಎಂದು ಹುಸಿ ಮುನಿಸಿಕೊಂಡೇ ಒಂದು ಚಾಕಲೇಟ್ ಅನ್ನು ಕೊಡುತ್ತಿದ್ದರು. 'ಒಂದು ಎಲ್ಲಿಗೆ ಸಾಕಾಗುತ್ತೆ' ಅಂತ ಮತ್ತೊಂದಕ್ಕೆ ಕೈ ಒಡ್ಡಿ ಇನ್ನೊಂದು ಚಾಕಲೇಟ್ ಗಿಟ್ಟಿಸಿಕೊಳ್ಳುತ್ತಿದ್ದೆ. ಸುಮಿತ್ರಾ ರಾವ್ ಅವರನ್ನು ಕಂಡಾಗಲೆಲ್ಲ ಅವರಿಂದ ಚಾಕಲೇಟ್ ಪಡೆಯಲು ಏನೆಲ್ಲ ಕಾರಣಗಳನ್ನು ಹೇಳಬಹುದು ಎಂಬುದೇ ನನಗೊಂದು ದೊಡ್ಡ ಟಾಸ್ಕ್. 'ನೀವೇನು ಚಿಕ್ಕ ಮಗೂನಾ ಟಾಫಿ ಕೇಳೋದಕ್ಕೆ' ಅಂತ ಅಂದಾಗ, 'ಹೌದು ಮತ್ತೆ ನನ್ನ ಅಮ್ಮನ ಚಿಕ್ಕ ಮಗು ನಾನು' ಎಂದಾಗ, ಮುಗುಳುನಗುತ್ತ, 'ಸರಿ ಒಂದಲ್ಲ ಎರಡು ತಗೊಳ್ಳಿ, ಇನ್ನಿಲ್ಲ' ಅಂತ ಕೊಡ್ತಿದ್ರು. ಹಾಗೆಂದು ಕಾರ್ಯಕಾರಿ ಸಮಿತಿಯಲ್ಲಿ ವಿಷಯಗಳು ಚರ್ಚೆಗೆ ಬಂದಾಗ ಅವರು ಬಹಳ ಸ್ಟ್ರಿಕ್ಟು. ಕೆಲವೊಂದು ಕಾರ್ಯಕ್ರಮಗಳಿಗೆ ಅವರನ್ನು ಒಪ್ಪಿಸುವುದು ಕಷ್ಟದ ಕೆಲಸ. ಸಂಘದ ಹಣ ಖರ್ಚು ಆಗಬಾರದು ಎಂಬ ಅವರ ನಿಲುವಿನ ಹಿಂದಿನ ಕಾಳಜಿ ನಮಗೇನೂ ತಿಳಿಯದ ವಿಷಯವಲ್ಲ.

ಅಂದಿನ ಅಧ್ಯಕ್ಷ ಶ್ರೀ ಕೆ.ಆರ್. ನಾಗರಾಜ ಅವರ ಆತ್ಮೀಯ ಪ್ರಭಾವಲಯದ ಹತ್ತಾರು ಕುಟುಂಬಗಳ ಪೈಕಿ ಸುಮಿತ್ರಾ ರಾವ್ ಅವರ ಕುಟುಂಬವೂ ಒಂದು. ಹೊಳೆನರಸೀಪುರದ ಸುಮಿತ್ರಾ ರಾವ್ ಅವತ್ತು, ಧಾರವಾಡದ ಚೆನ್ನು ಮಠದ, ಕೊಡಗಿನ ಉತ್ತಪ್ಪ, ಉತ್ತರ ಕನ್ನಡದ ಎಸ್.ಜಿ. ಹೆಗಡೆ, ದಕ್ಷಿಣ ಕನ್ನಡದ ನನಗೆ ಮಾತ್ರವಲ್ಲ ಹತ್ತಾರು ಮಂದಿಗೆ ಹಿರಿಯಕ್ಕನಂತೆ ಪ್ರೀತಿ ತೋರಿದವರು. ಸುಮಿತ್ರಾ ರಾವ್ ದೈಹಿಕವಾಗಿ ಈಗ ಸೊರಗಿದ್ದಾರೆ ನಿಜ. ಸಂಘದ ಕಾರ್ಯಕ್ರಮಗಳಲ್ಲಿ ಅವರೀಗ ಕಾಣಿಸಿಕೊಳ್ಳುವುದಿಲ್ಲ. ಆದರೆ, ಶುದ್ಧ ಅಂತಃಕರಣದ ಹಿರಿಯರಾಗಿ, ಸದಾ ನಮ್ಮ ನೆನಪಿನಾಳದಲ್ಲಿ ಉಳಿಯುವಂತಹ ವಿಶಿಷ್ಟ ಕನ್ನಡತಿ–ಶ್ರೀಮತಿ ಸುಮಿತ್ರಾ ರಾವ್. ■



***ಸರವು ಕೃಷ್ಣ ಭಟ್***













# ನಿಮಗೆ ಸಹಾಯ ಮಾಡಲು ನಿಮ್ಮ ವೈದ್ಯರಿಗೆ ಸಹಕರಿಸಿ




ಲೇಖಕರು : ಡಾ. ಉಮಾ ಕೆ.

ಮುಖ್ಯ ವೈದ್ಯಕೀಯ ಅಧಿಕಾರಿ (NFSG)
ದೀನ್ ದಯಾಳ್ ಉಪಾಧ್ಯಾಯ ಆಸ್ಪತ್ರೆ
ನವದೆಹಲಿ

(ಮೊ.) 97189 90224

ಇಮೇಲ್ : vbddduh@gmali.com


ವೈದ್ಯಕೀಯ ಕಾಲೇಜಿನ ಎರಡನೇ ವರ್ಷದಿಂದಲೂ ನಮ್ಮ ತಲೆಯಲ್ಲಿ ಕೊರೆಯಲ್ಪಟ್ಟಿದ್ದು–'A careful history will lead to the diagnosis 80% of the time'–'ಜಾಗರೂಕವಾಗಿ ರೋಗಿಯ ವಿವರಗಳನ್ನು ಆಲಿಸುವ ಮೂಲಕ, 80% ಸಮಯ, ರೋಗ ಏನೆಂದು ಗುರುತಿಸಬಹುದು'. ನಮ್ಮ ಶಿಕ್ಷಕರು ಉತ್ತಮ history taking ಕೌಶಲ್ಯದ ಪ್ರಾಮುಖ್ಯತೆಯನ್ನು ಸಾಕಷ್ಟು ಒತ್ತಿ ಹೇಳಿದರು. ಆದರೆ ಸರ್ಕಾರಿ ಸೇವೆಯಲ್ಲಿರುವ ವೈದ್ಯಳಾದ ನನಗೆ ಇದು ಅತ್ಯಂತ ಪ್ರಯಾಸದಾಯಕ ಕೆಲಸವಾಗಿತ್ತು. ಸಾಮಾನ್ಯವಾಗಿ ರೋಗಿಗಳು ಸಂಬಂಧಿತ ಮಾಹಿತಿಯನ್ನು ಹಂಚಿಕೊಳ್ಳಲು ಹಿಂಜರಿಯುತ್ತಾರೆ.

ಇದಕ್ಕೆ ಕಾರಣಗಳು ಹಲವು–ರೋಗಿಗಳೊಂದಿಗೆ ಬಾಂಧವ್ಯವನ್ನು ಬೆಳೆಸಿಕೊಳ್ಳಲು ವೈದ್ಯರಿಗೆ ಬಹಳ ಕಡಿಮೆ ಸಮಯವನ್ನು ನೀಡುವ ಉದ್ದನೆಯ ಸರತಿ ಸಾಲುಗಳು, ಕಿಕ್ಕಿರಿದ OPD ಕೊಠಡಿಗಳು, ಬಿಡುವಿಲ್ಲದ ಆಸ್ಪತ್ರೆಯಲ್ಲಿನ ಗದ್ದಲ ಇತ್ಯಾದಿ. ಕೆಲವೊಮ್ಮೆ ರೋಗಿಗಳು ಅನೇಕ ವೈದ್ಯರ ಬಳಿಗೆ ಪರಾಮರ್ಶೆಗೆ ಹೋಗಿದ್ದ ಕಾರಣ ಆಯಾಸಗೊಂಡು ಎಲ್ಲವನ್ನೂ ಪುನರಾವರ್ತಿಸಲು ಕಷ್ಟಪಡುತ್ತಾರೆ. ಇನ್ನು ಕೆಲವರು ವೈದ್ಯಕೀಯ ತಪಾಸಣೆಗಳನ್ನು (tests) ಮಾಡಿಕೊಳ್ಳಲು ಮಾತ್ರ ಬರುತ್ತಾರೆ. ಇಂತವರು ಟೆಸ್ಟನ್ನು ಹೆಂಗಾದ್ರು ಬರಿಸ್ಕೊಬೇಕು ಅಂತ ಯೋಚನೆಯಲ್ಲಿ ನಿರತರಾಗಿರುತ್ತಾರೆ. ಕೆಲವರು ನಾಚಿಕೆಪಡುತ್ತಾರೆ, ಮುಜುಗರಕ್ಕೊಳಗಾಗುತ್ತಾರೆ ಅಥವಾ ಇದರಿಂದ ತಮ್ಮ ಬಗ್ಗೆ ಡಾಕ್ಟರ್ ಏನು ಅಂದ್ಕೊಬಹುದು ಅಂತ ಚಿಂತಿಸುತ್ತಾರೆ. ಇನ್ನು ಕೆಲವರು ವೈದ್ಯರು ಇಷ್ಟೆಲ್ಲಾ ಯಾಕ್ ಕೇಳ್ತಿದ್ದಾರೆ? ಈ ಮಾತಿಗೂ ನಮ್ಮ ಚಿಕಿತ್ಸೆಗೂ ಏನು ಸಂಬಂಧ ಅಂತ ಹಿಂಜರಿಯುತ್ತಾರೆ.

ಈ ರೀತಿ ಸರ್ಕಾರಿ ಆಸ್ಪತ್ರೆಗಳಲ್ಲಾದರೆ, ಖಾಸಗಿ ಸೇವೆಯಲ್ಲಿರುವ ವೈದ್ಯರು ವಿಭಿನ್ನ ಸಮಸ್ಯೆಯನ್ನು ಎದುರಿಸುತ್ತಾರೆ. ಅವರನ್ನು ಸಂಪರ್ಕಿಸುವ ಹಲವಾರು ಪೇಷಂಟ್ಸ್ ತಮ್ಮ ಎಲ್ಲಾ ರೋಗಲಕ್ಷಣಗಳನ್ನು ಗೂಗಲ್ ಮಾಡಿ ವಿವಿಧ ರೋಗ ನಿರ್ಣಯ ಮತ್ತು ಚಿಕಿತ್ಸಾ ವಿಧಾನಗಳ ಮಾಹಿತಿ ಪಡೆದವರಾಗಿರುತ್ತಾರೆ. ಗಂಟೆ ಗಟ್ಟಲೆ ಬ್ರೌಸಿಂಗ್‌ನ ನಂತರ ಪಡೆದುಕೊಂಡ ಜ್ಞಾನವನ್ನು ಹೊಂದಿರುವ ಅವರು ಅದನ್ನು ಪ್ರದರ್ಶಿಸುವಂತಹ ಮನೋಭಾವಕ್ಕೆ ಗುರಿಯಾಗುತ್ತಾರೆ. ರೋಗಿಗಳ ಅರ್ಧ ಜ್ಞಾನವು ಅವರಿಗೆ ಅಪಾಯಕಾರಿ ಮತ್ತು ವೈದ್ಯರಿಗೆ ಕಿರಿಕಿರಿ.

ವೈದ್ಯರಾಗಿ, ನಮಗೆ ನಮ್ಮ ಪೇಷಂಟ್ಸನ್ನು ಗುಣಪಡಿಸಲು ಅವರ ಸಹಾಯ ಅಗತ್ಯವಿದೆ. ಹಾಗಾಗಿ ಇಲ್ಲಿ, ನಿಮ್ಮ ವೈದ್ಯರೊಂದಿಗೆ ನಿಮ್ಮ ಸಮಯವನ್ನು ಹೆಚ್ಚು ಉಪಯುಕ್ತವಾಗಿಸಲು, ಕೆಲವು ಸಲಹೆಗಳನ್ನು ಹಂಚಿಕೊಳ್ಳಲು ಬಯಸುತ್ತೇನೆ: ಮೊದಲನೆಯದಾಗಿ, ನೀವು ಅನುಭವಿಸುತ್ತಿರುವ ರೋಗಲಕ್ಷಣಗಳ ಪಟ್ಟಿಯನ್ನು ಅವುಗಳ ಸಮಯಾನುಸಾರ ತಯಾರಿಸಿ. ಪ್ರಮುಖ ರೋಗಲಕ್ಷಣಕ್ಕೆ ಆದ್ಯತೆ ನೀಡಿ.

■ ಸರಿಯಾಗಿ ಯೋಚನೆ ಮಾಡಿ, ನಿಮ್ಮ ಎಲ್ಲಾ ಕಾಳಜಿ ಮತ್ತು ಪ್ರಶ್ನೆಗಳನ್ನು ಬರೆದುಕೊಳ್ಳಿ.

■ ನಿಮ್ಮ ಎಲ್ಲಾ ವೈದ್ಯಕೀಯ ಮಾಹಿತಿಯನ್ನು ತನ್ನಿ–ದಿನಾಂಕಗಳೊಂದಿಗೆ ಸಾರಾಂಶ, ನೀವು ತೆಗೆದುಕೊಳ್ಳುತ್ತಿರುವ ಔಷಧಿಗಳ ಪಟ್ಟಿ, ಇತ್ತೀಚಿನ ಆರೋಗ್ಯ ತನಿಖೆಗಳ/ಪರೀಕ್ಷೆಗಳ ವರದಿ (Test Reports) ಗಳನ್ನು ಇಟ್ಟುಕೊಳ್ಳಿ.

■ ನಿಮ್ಮ ಹಸಿವು, ತೂಕ, ನಿದ್ರೆ ಅಥವಾ ಶಕ್ತಿಯ ಮಟ್ಟದಲ್ಲಿ ನೀವು ಗಮನಿಸಿದ ಯಾವುದೇ ಬದಲಾವಣೆಗಳನ್ನು ನಮೂದಿಸಿ.

■ ನಿಮ್ಮ ಕುಟುಂಬದಲ್ಲಿ ಯಾರಿಗಾದರೂ ಹೃದಯದ ಕಾಯಿಲೆ, ಮಧುಮೇಹ, ಅಧಿಕ ರಕ್ತದೊತ್ತಡ ಇತ್ಯಾದಿ ರೋಗಗಳಿದ್ದರೆ ವೈದ್ಯರಿಗೆ ತಿಳಿಸಿ.

ನಿಮ್ಮ ಮನಸ್ಸಿನಲ್ಲಿ ಏನಿದೆ ಎಂದು ನೀವು ಅವರಿಗೆ ಹೇಳಿದ್ರೆ ಮಾತ್ರ ನಿಮ್ಮ ವೈದ್ಯರಿಗೆ ತಿಳಿಯುತ್ತದೆ. ಆದ್ದರಿಂದ ಅವರೊಂದಿಗೆ ಪ್ರಾಮಾಣಿಕವಾಗಿರಿ. ಒಮ್ಮೆ ಅವರು ನಿಮ್ಮ ಒಟ್ಟಾರೆ ಆರೋಗ್ಯದ ಬಗ್ಗೆ ಸಂಪೂರ್ಣ ವಿವರಗಳನ್ನು ಹೊಂದಿದ್ದರೆ ಅವರು ನಿಮಗೆ ಉತ್ತಮವಾಗಿ ಸಹಾಯ ಮಾಡಬಹುದು. ಉದಾಹರಣೆಗೆ, ಕೆಲವೊಮ್ಮೆ ರೋಗಿಗಳು ಜೀವನೋಪಾಯಕ್ಕಾಗಿ ಏನು ಮಾಡುತ್ತಾರೆ ಎಂಬುದನ್ನು ಹಂಚಿಕೊಳ್ಳಲು ಹಿಂಜರಿಯುತ್ತಾರೆ. ಈ ಮಾಹಿತಿಯು ವ್ಯಕ್ತಿಯ ಕೆಲಸದ ಸ್ವರೂಪ ಮತ್ತು ಅವರ ಅನಾರೋಗ್ಯಕ್ಕೆ ಅದು ಹೊಂದಿರಬಹುದಾದ ಕಾರಣವನ್ನು ನಮಗೆ ಒದಗಿಸುತ್ತದೆ.

# ದೈನಂದಿನ ಬದುಕಿನಲ್ಲಿ ಆಯುರ್ವೇದ : ತುಳಸಿ

**ಇಂಗ್ಲಿಷ್ ಹೆಸರು:** ಹೋಲಿ ಬೇಸಿಲ್ **ಕನ್ನಡ ಹೆಸರು:** ತುಳಸಿ **ಬೊಟಾನಿಕಲ್ ಹೆಸರು:** ಓಸ್ಮಿಮಮ್ ಸಾಂಕ್ಟಮ್

ತುಳಸಿಯು ಭಾರತದಲ್ಲಿ ಧಾರ್ಮಿಕ ಆಚರಣೆಗಳಲ್ಲಿ ಬಳಸುವ ಸಾಮಗ್ರಿಯಾಗಿಯೂ, ಔಷಧೀಯ ಗುಣಗಳುಳ್ಳ ಸಸ್ಯವಾಗಿಯೂ ಜನಪ್ರಿಯವಾಗಿದೆ. ಇದರಲ್ಲಿ ಪ್ರಮುಖವಾಗಿ ಎರಡು ವಿಭಾಗಗಳಿವೆ–ಕಪ್ಪು ಮತ್ತು ಬಿಳುಪು. ಸಾಮಾನ್ಯವಾಗಿ ಒಂದರಿಂದ ಎರಡು ಅಡಿಗಳಷ್ಟು ಎತ್ತರವಾಗಿ ಬೆಳೆಯುವ ತುಳಸಿಯು ತೆಳುವಾದ ಕೂದಲುಗಳನ್ನು ತನ್ನ ಮೇಲ್ಮೈ ಮೇಲೆ ಹೊಂದಿದ್ದು, ಚಿಕ್ಕ ಗಾತ್ರದ ನೇರಳೆ ಬಣ್ಣದ ಹೂವುಗಳನ್ನು ಹೊಂದಿರುವುದಲ್ಲದೆ ಇದರೊಳಗಿರುವ ಪುಟ್ಟ ಬೀಜಗಳು ಹಳದಿ ಮಿಶ್ರಿತ ಕೆಂಪು ಬಣ್ಣದ್ದಾಗಿರುತ್ತವೆ. ತುಳಸಿಯ ಎಲೆ, ಬೀಜ ಮತ್ತು ಬೀಜದ ಎಣ್ಣೆಯನ್ನು ಔಷಧಿಯಾಗಿಯೂ ಬಳಸುವುದುಂಟು. ಇದರ ಸೇವನೆಯು ದೇಹದ ಜೀರ್ಣಕ್ರಿಯೆಗೆ ಹಗುರವಾಗಿದ್ದು ಕೊಂಚ ಉಷ್ಣಕಾರಿಯೂ, ರುಚಿಯಲ್ಲಿ ಒಂದಿಷ್ಟು ಕಹಿಯೂ ಕೊಂಚ ತೀಕ್ಷ್ಣವಾಗಿಯೂ ಇರುತ್ತದೆ. ಆಂಟಿ–ಬ್ಯಾಕ್ಟೀರಿಯಲ್, ಆಂಟಿ–ಫಂಗಲ್ ಅಲ್ಲದೆ ಕೀಟನಾಶಕದ ಗುಣವನ್ನೂ ತುಳಸಿ ಹೊಂದಿದೆ.

ಔಷಧೀಯ ಬಳಕೆಗಳು: 1. ನೆಗಡಿ, ಕಫ, ಅಸ್ತಮಾ ಮತ್ತು ಸೈನಸ್ ಸಂಬಂಧಿ ಸಮಸ್ಯೆಗಳಿಗೆ: 1 ಚಮಚ ತುಳಸಿ ಎಲೆಯ ರಸ + 1/2 ಚಮಚ ಶುಂಠಿ ರಸ + 1/4 ಚಮಚ ಅರಿಶಿನ ಪುಡಿ + 1 ಚಮಚ ಜೇನು–ಮೂರರಿಂದ ಐದು ದಿನಗಳ ಕಾಲ ದಿನಕ್ಕೆರಡು ಬಾರಿ ಸೇವಿಸಬೇಕು.

2. ಅಜೀರ್ಣ ಮತ್ತು ಮಲಬದ್ಧತೆಯ ಸಮಸ್ಯೆಗಳಿಗೆ: 10 ತುಳಸಿ ಎಲೆಗಳು + 1/2 ಚಮಚ ಹುರಿದ ಜೀರಿಗೆ–ಇವೆರಡನ್ನೂ ಅರೆದು ಊಟದ ನಂತರ ನೀರಿನೊಂದಿಗೆ ಮೂರರಿಂದ ಐದು ದಿನಗಳ ಕಾಲ ಸೇವಿಸಬೇಕು.

3. ಮೂತ್ರವಿಸರ್ಜನೆಯಲ್ಲಿ ತೊಂದರೆಯಾದಾಗ: 1/4 ಚಮಚ ತುಳಸಿ ಬೀಜದ ಪುಡಿಯನ್ನು ನೀರಿನಲ್ಲಿ ಬೆರೆಸಿ ದಿನಕ್ಕೊಂದು ಬಾರಿ, ಒಂದು ವಾರದ ಕಾಲ ಸೇವಿಸಬೇಕು.

4. ಮಾನಸಿಕ ಒತ್ತಡ, ಆತಂಕ ಮತ್ತು ನಿದ್ರಾಹೀನತೆಗಳಿಗಾಗಿ: ತುಳಸಿಯ 10 ಎಲೆಗಳು + 5 ಬ್ರಾಹ್ಮಿ (ಒಂದೆಲಗ)– ಇವೆರಡನ್ನು ನುಣ್ಣಗೆ ಅರೆದು ನೀರು ಮತ್ತು ಜೇನಿನೊಂದಿಗೆ ರಾತ್ರಿಯ ಹೊತ್ತು ಸೇವಿಸಬೇಕು.

5. ಚರ್ಮದ ಸಮಸ್ಯೆಗಳು, ತುರಿಕೆ, ಎಗ್ಜಿಮಾ ಅಥವಾ ಅಲರ್ಜಿ ಸಂಬಂಧಿ ಸಮಸ್ಯೆಗಳಿಗೆ: 1 ಚಮಚ ತುಳಸಿ ಎಲೆಯ ರಸವನ್ನು 1 ಚಮಚ ಬೇವಿನ ಎಣ್ಣೆಯೊಂದಿಗೆ ಬೆರೆಸಿ ನಿತ್ಯವೂ ಹಚ್ಚುವುದು.

6. ಶಾಂತ ಮನಸ್ಸು ಮತ್ತು ಸುಧಾರಿತ ದೈಹಿಕ ಶಕ್ತಿಗೆ: 10–20 ತುಳಸಿ ಎಲೆಗಳನ್ನು ನೀರಿನಲ್ಲಿ ಕುದಿಸಿ ಕುಡಿಯಬೇಕು ಅಥವಾ ಮಾರುಕಟ್ಟೆಯಲ್ಲಿ ಲಭ್ಯವಿರುವ ಹೋಲಿ ಬೇಸಿಲ್ ಟೀ ಬ್ಯಾಗುಗಳನ್ನು ಬಳಸಬಹುದು. ■




*ಲೇಖಕರು :*
***ಡಾ. ಭೀಮ ಭಟ್ಟ***
*ಎಂ.ಡಿ. (ಆಯು)*
*ನಿರ್ದೇಶಕರು, ಆಯುರ್‌ವೇದ್*
*ಮೇದಾಂತ ಮೆಡಿಸಿಟಿ, ಗುರುಗ್ರಾಮ ಮತ್ತು*
*ಅಪೋಲೋ ಹಾಸ್ಪಿಟಲ್ಸ್, ನವದೆಹಲಿ*




ಅಂತೆಯೇ, ಕೆಲವು ಸಂಭಾಷಣೆಗಳು ಮುಜುಗರ ಉಂಟು ಮಾಡಬಹುದು. ವಿಶೇಷವಾಗಿ ಮೂತ್ರಕೋಶ ಮತ್ತು ಕರುಳಿನ ಚಲನೆಗಳು, ಲೈಂಗಿಕ ಆರೋಗ್ಯ ಇತ್ಯಾದಿ. ನಿಮ್ಮ ವೈದ್ಯರು ಇದೇ ರೀತಿಯ ವಿಷಯಗಳನ್ನು ಈ ಮೊದಲು ಕೇಳಿರುವವರಾಗಿರುತ್ತಾರೆಂಬುದನ್ನು ಗಮನದಲ್ಲಿಡಿ. ಆದ್ದರಿಂದ ಅವುಗಳನ್ನು ಚರ್ಚಿಸಲು ಮುಜುಗರ ಪಡಬೇಡಿ. ಉದಾಹರಣೆಗೆ, ಜ್ವರದಿಂದ ಬಳಲುತ್ತಿರುವ ಕೆಲವು ರೋಗಿಗಳು ಮೂತ್ರ ವಿಸರ್ಜನೆಯ ಸಮಯದಲ್ಲಿ ಸುಡುವ (ಉರಿ ಮೂತ್ರ) ಸಂವೇದನೆಯನ್ನು ಹೊಂದಿರುತ್ತಾರೆ. ಅಂತಹ ಪೇಷಂಟ್ ನಮಗೆ ಜ್ವರದ ಬಗ್ಗೆ ಮಾತ್ರ ಹೇಳುತ್ತಾರೆ. ಉರಿ ಮೂತ್ರದ ನೋವನ್ನು ನಮೂದಿಸುವುದು ಅಗತ್ಯವೆಂದು ಅವರು ಪರಿಗಣಿಸುವುದಿಲ್ಲ. ಸಾಮಾನ್ಯವಾಗಿ ವೈದ್ಯರು ಈ ವಿವರವನ್ನು ಹೊರಹೊಮ್ಮಿಸುತ್ತಾರೆ. ಆದರೆ, ಒಂದು ವೇಳೆ, ಅದನ್ನು ಕಡೆಗಣಿಸಿದರೆ, ಮೂತ್ರ ನಾಳದ ಸೋಂಕನ್ನು ಕಂಡು ಹಿಡಿಯಲು ತಪ್ಪಬಹುದು.

ವೈದ್ಯಕೀಯ ಭೇಟಿಗಳು ಅಗಾಧವಾಗಿರಬಹುದು. ಕೆಲವೊಮ್ಮೆ ಅತ್ಯಂತ ಒಳ್ಳೆಯ ವೈದ್ಯರು ಕೂಡ ಹೆಚ್ಚಿನ ಮಾಹಿತಿಯನ್ನು ತ್ವರಿತವಾಗಿ ಮತ್ತು ಸಂಕೀರ್ಣ ಪದಗಳಲ್ಲಿ ಪ್ರಸ್ತುತಪಡಿಸಬಹುದು. ಹಾಗಾದಾಗ ವೈದ್ಯರಿಗೆ ಪ್ರಶ್ನೆಗಳನ್ನು ಕೇಳುವುದು ಸರಿಯಾದ ನಡೆ. ಅವರು ವೈದ್ಯಕೀಯ ಭಾಷೆಯಲ್ಲಿ ಮಾತನಾಡುತ್ತಿದ್ದರೆ, ಅದನ್ನು ಸರಳ ಭಾಷೆಯಲ್ಲಿ ಸ್ಪಷ್ಟಪಡಿಸಿಕೊಳ್ಳಲು ನಿಮ್ಮ ವೈದ್ಯರನ್ನು ನೀವು ಕೇಳಬೇಕು. ಮುಂದೆ, ನಿಮ್ಮ ವೈದ್ಯರಿಗೆ ನೀವು ಕೇಳಿಸಿಕೊಂಡ ಮಾಹಿತಿಯನ್ನು ಪುನರಾವರ್ತಿಸಿ. ಇದು ನಿಮಗೆ ಅದನ್ನು ಗ್ರಹಿಸಿಕೊಳ್ಳಲು ಸಹಾಯ ಮಾಡುತ್ತದೆ ಮತ್ತು ನೀವು ಅರ್ಥಮಾಡಿಕೊಂಡಿದ್ದೀರಾ ಎಂದು ವೈದ್ಯರಿಗೆ ತಿಳಿಯಲು ಸಹಾಯ ಮಾಡುತ್ತದೆ. ನಿಮ್ಮ ಮನಸ್ಸನ್ನು ಗೊಂದಲದಿಂದ ಮುಕ್ತವಾಗಿಟ್ಟುಕೊಂಡು ನಿಮ್ಮ ವೈದ್ಯರು ಏನು ಹೇಳುತ್ತಾರೆಂದು ಗಮನಕೊಡಿ. ಅವರು ಮಾತನಾಡುತ್ತಿರುವಾಗ, ನೀವು ಮುಂದೆ ಹೇಳಬಯಸುವ ವಿಷಯದ ಬಗೆ ಯೋಚನೆ ಮಾಡುತ್ತಿದ್ದರೆ, ಪ್ರಮುಖ ಮಾಹಿತಿಯನ್ನು ನೀವು ಕಳೆದುಕೊಳ್ಳಬಹುದು. ಆದ್ದರಿಂದ ಸಕ್ರಿಯ ಆಲಿಸುವಿಕೆ ಮುಖ್ಯವಾಗುತ್ತದೆ.

ಉತ್ತಮ ಸಂವಹನಕ್ಕಾಗಿ ಮತ್ತೊಂದು ತಂತ್ರವೆಂದರೆ, ವಿಶೇಷವಾಗಿ ಸಂಕೀರ್ಣ ಚಿಕಿತ್ಸೆಯ ಅಗತ್ಯವಿರುವ ಕಾಳಜಿಯನ್ನು ನೀವು ಹೊಂದಿದ್ದ ಪಕ್ಷದಲ್ಲಿ, ತಾವು ವಯಸ್ಸಾದ ರೋಗಿಯಾಗಿದಲ್ಲಿ, ನಿಮಗೆ ಆತಂಕ ಹೆಚ್ಚಾದ ಸಂದರ್ಭಗಳಲ್ಲಿ ಆಪ್ತ ಸ್ನೇಹಿತ ಅಥವಾ ಕುಟುಂಬದ ಸದಸ್ಯರನ್ನು ಜೊತೆಯಲ್ಲಿ ಕರೆತರುವುದು, ಸಹಾಯಕವಾಗುತ್ತದೆ. ಆದರೂ, ನೆನಪಿಡಿ, ವೈಯಕ್ತಿಕ ವಿಷಯುಗಳನ್ನು ಚರ್ಚಿಸಲು ವೈದ್ಯರೊಂದಿಗೆ ಏಕಾಂಗಿಯಾಗಿ ಸಮಯ ಬಯಸಿದರೆ, ನಿಮ್ಮ ಸ್ನೇಹಿತ / ಕುಟುಂಬದ ಸದಸ್ಯರನ್ನು ಹೊರಗೆ ಕಾಯಲು ನೀವು ಕೇಳಬಹುದು.

ವೈದ್ಯರೊಂದಿಗೆ ಸಮಾಲೋಚನೆಯ ನಂತರ ಟಿಪ್ಪಣಿಗಳನ್ನು ತೆಗೆದುಕೊಳ್ಳುವುದು ಅಥವಾ ಅವುಗಳನ್ನು ಬರೆಯುವುದು ಉಪಯುಕ್ತ ಅಭ್ಯಾಸ. ನಂತರ ವೈದ್ಯರು ನಿಮಗೆ ಹೇಳಿದ್ದನ್ನು ನಿಖರವಾಗಿ ನೆನಪಿಸಿಕೊಳ್ಳಲು ಈ ಟಿಪ್ಪಣಿಗಳು ಸಹಾಯಕ್ಕೆ ಬರಬಹುದು. ಅಂತಿಮವಾಗಿ, ತೆರೆದ ಮನಸ್ಸನ್ನು ಇಟ್ಟುಕೊಳ್ಳುವುದು ಮತ್ತು ನಿಮ್ಮ ವೈದ್ಯರನ್ನು ನಂಬಲು ಕಲಿಯುವುದು, ಅವರೊಂದಿಗೆ ನಿಮ್ಮ ಭೇಟಿಯನ್ನು ಹೆಚ್ಚು ಪರಿಣಾಮಕಾರಿಯಾಗಿ ಮಾಡಲು ಸಹಾಯ ಮಾಡುತ್ತದೆ.■

# ನವದೆಹಲಿಯ ಕರ್ತವ್ಯ ಪಥದಲ್ಲಿ ಕನ್ನಡದ ಕುವರಿಯರು


ಕು. ಕನ್ನಿಕಾ ಭಟ್


ಕು. ಪ್ರೇರಣಾ ರಾವ್

75ನೇ ಗಣರಾಜ್ಯೋತ್ಸವ ಆಚರಣೆಯ ಭಾಗವಾಗಿ 26.01.2024 ರಂದು ನವದೆಹಲಿಯ ಕರ್ತವ್ಯ ಪಥದಲ್ಲಿ, ಜರುಗಿದ ಸಾಂಸ್ಕೃತಿಕ ಪ್ರದರ್ಶನಗಳಲ್ಲಿ 1500 ನರ್ತಕ ನರ್ತಕಿಯರನ್ನು ಒಳಗೊಂಡ ಕಲಾವಿದರ ತಂಡಗಳು ತಮ್ಮ ಸಮ್ಮೋಹನಗೊಳಿಸುವ, ಅದ್ಭುತ ಪ್ರದರ್ಶನದೊಂದಿಗೆ ವಿವಿಧತೆಯಲ್ಲಿ ಏಕತೆಯ ಪ್ರಬಲ ಸಂದೇಶವನ್ನು ನೀಡಿದರು. ಈ ಪ್ರದರ್ಶನದಲ್ಲಿ ದೆಹಲಿ ಕನ್ನಡಿಗರ ಹೆಮ್ಮೆಯ ಮಕ್ಕಳು ಹಾಗು ಕರ್ನಾಟಕದ ಹೆಮ್ಮೆಯ ಕುವರಿಯರಾದ ಕು. ಪ್ರೇರಣಾ ರಾವ್ ಹಾಗೂ ಕು. ಕನ್ನಿಕಾ ಭಟ್ ಭಾಗವಹಿಸಿ ಕನ್ನಡನಾಡಿನ ಗರಿಮೆಯನ್ನು ಹೆಚ್ಚಿಸಿದರು. ಮೂಲತಃ ಕಥಕ್ ನೃತ್ಯ ಪಟುವಾಗಿರುವ ಕು. ಪ್ರೇರಣಾ ರಾವ್ ಅವರು ಈ ಕಾರ್ಯಕ್ರಮದಲ್ಲಿ ತಮಿಳುನಾಡಿನ 'ಕರಗಟ್ಟಮ್' ಎಂಬ ಜಾನಪದ ನೃತ್ಯ ಶೈಲಿಯನ್ನು ತನ್ನ ನೃತ್ಯ ತಂಡದೊಂದಿಗೆ ಪ್ರದರ್ಶಿಸಿದರೆ, ಕು. ಕನ್ನಿಕಾ ಭಟ್ ಅವರು ಭರತನಾಟ್ಯ ಶೈಲಿಯ ನೃತ್ಯವನ್ನು ತನ್ನ ಸಂಗಡಿಗರೊಂದಿಗೆ ಅತ್ಯದ್ಭುತವಾಗಿ ಪ್ರದರ್ಶಿಸಿದರು. ಕು. ಕನ್ನಿಕಾ ಭಟ್ ದೆಹಲಿ ವಿಶ್ವವಿದ್ಯಾಲಯದ ಹಂಸ್‌ರಾಜ್ ಕಾಲೇಜಿನ ವಿದ್ಯಾರ್ಥಿನಿ, ದೆಹಲಿ ಕರ್ನಾಟಕ ಸಂಘದ ಸದಸ್ಯರಾದ ಶ್ರೀ ನರೇಂದ್ರ ಭಟ್ ಹಾಗೂ ಶ್ರೀಮತಿ ನಯನಾ ಭಟ್ ಅವರ ಸುಪುತ್ರಿ. ಕು. ಪ್ರೇರಣಾ ರಾವ್ ಅವರು ಕರ್ನಾಟಕ ಭವನದಲ್ಲಿ ಅಧಿಕಾರಿಯಾಗಿರುವ ಶ್ರೀ ಪ್ರದೀಪ್ ರಾವ್ ಹಾಗು ದೆಹಲಿ ಕರ್ನಾಟಕ ಸಂಘದ ಉಪಾಧ್ಯಕ್ಷೆಯಾಗಿರುವ ಶ್ರೀಮತಿ ಪೂಜಾ ಪಿ. ರಾವ್ ಅವರ ಸುಪುತ್ರಿ. ದೆಹಲಿ ವಿಶ್ವವಿದ್ಯಾಲಯದ 'ಮೈತ್ರೇಯಿ' ಕಾಲೇಜಿನ ವಿದ್ಯಾರ್ಥಿನಿಯಾಗಿದ್ದು, ಕಾಲೇಜಿನ ಡಾನ್ಸ್ ಸೊಸಾಯಿಟಿ 'ನೃತ್ಯಾಕೃತಿ'ಯ ಅಧ್ಯಕ್ಷೆ ಹಾಗೂ ಸಾಂಸ್ಕೃತಿಕ ಸಮಿತಿಯ ಸಂಚಾಲಕಿಯೂ ಆಗಿದ್ದಾರೆ. ದೆಹಲಿ ಕನ್ನಡ ಮಕ್ಕಳಿಗೆ ಸಂಘದಲ್ಲಿ ನಡೆಯುತ್ತಿರುವ ನೃತ್ಯ ತರಬೇತಿಗಳಲ್ಲಿ ನೃತ್ಯಗಳನ್ನು ಕಲಿಸಿಕೊಟ್ಟು, ಸಂಯೋಜನೆ ಮಾಡಿ ಸಂಘದ ವೇದಿಕೆಯಲ್ಲಿ ಈ ಮಕ್ಕಳು ಬಹಳ ಅದ್ಭುತವಾಗಿ ನೃತ್ಯ ಪ್ರದರ್ಶನ ನೀಡಿರುವುದನ್ನು ದೆಹಲಿ ಕನ್ನಡಿಗರು ವೀಕ್ಷಿಸಿ ಪ್ರಶಂಸಿಸಿದ್ದಾರೆ. ಗಣರಾಜ್ಯೋತ್ಸವ ಪಥ ಸಂಚಲನದಲ್ಲಿ ಭಾಗವಹಿಸಿ ಮನಮೋಹಕ ನೃತ್ಯ ಪ್ರದರ್ಶನ ನೀಡಿ ಅಲ್ಲಿದ್ದ ಜನರ ಪ್ರಶಂಸೆಗೆ ಪಾತ್ರರಾದ ಹೆಮ್ಮೆಯ ಕನ್ನಡತಿಯರಾದ ಕು. ಕನ್ನಿಕಾ ಭಟ್ ಮತ್ತು ಕು. ಪ್ರೇರಣಾ ರಾವ್ ಅವರಿಗೆ ಸಮಸ್ತ ದೆಹಲಿ ಕನ್ನಡಿಗರ ಪರವಾಗಿ ಹಾರ್ದಿಕ ಅಭಿನಂದನೆಗಳು.!

ಕವನ

## ಕಾಲಚಕ್ರದಡಿ ಈ ಜೀವನ

ಹರಿವ ನದಿಯಂತಿರುವುದೇ ಜೀವನ
ಕಾಲಚಕ್ರದಲಿ ಹಿಂತಿರುಗಲಾರದು ಯೌವ್ವನ
ತಿಳಿದಿಹುದೆ ನಿನ್ನ ದಾರಿ!
ವಿಶ್ವ ರೂಪವ ಮೀರಿ!
ಸಾಗಿಸಲೇಬೇಕು ಬಾಳ ನೌಕೆಯ
ಬೆಳಗಬೇಕು ಸಾಮರಸ್ಯದ ದೀವಿಗೆಯ
ನೋವೋ? ನಲಿವೋ?
ಸಿಹಿಯೋ? ಕಹಿಯೋ?
ಸ್ವೀಕರಿಸು ಎಲ್ಲವ ಸಮಚಿತ್ತದಿ

ಮಾಸ ಮುಗಿದರೂ
ವರುಷ ಕಳೆದರೂ
ಮೂಡಲಿ ಹೊಸ ಭರವಸೆಗಳು
ಚಿಗುರಲಿ ಹೊಸ ಕನಸುಗಳು
ಬರಲಿ ನವ ಹುಮ್ಮಸ್ಸು
ತರಲಿ ನವ ಚೈತನ್ಯ
ನಮ್ಮದಾಗಲಿ ನಾಳೆಗಳೆಲ್ಲಾ
ಹಸಿರಾಗಿರಲಿ ಜಗವೆಲ್ಲಾ
ಜೀವಿಸೋಣ ಪ್ರೀತಿಯಿಂದ
ಸಾಗೋಣ ನಂಬಿಕೆಯಿಂದ
ಬದುಕೋಣ ಮಾನವೀಯತೆಯಿಂದ
ಸರ್ವರೂ ಇರಲಿ ಆರೋಗ್ಯದಿಂದ
ಹೊಸ ವರ್ಷದ ಶುಭಾಶಯಗಳು

ರಚನೆ: **ಅರುಣ್ ಚರಾಪ**

# ನವದೆಹಲಿ ನಾಡಪ್ರಭು ಕೆಂಪೇಗೌಡ ಫೌಂಡೇಶನ್ ನ 8ನೇ ವಾರ್ಷಿಕೋತ್ಸವ :

## 'ಪದ್ಮಭೂಷಣ' ಪ್ರಶಸ್ತಿ ಪುರಸ್ಕೃತರಿಗೆ ಅಭಿನಂದನೆ ಮತ್ತು 'ನಾಡಪ್ರಭು ಕೆಂಪೇಗೌಡ ಪ್ರಶಸ್ತಿ' ಪ್ರದಾನ



ದಿನಾಂಕ 16.12.2023 ರಂದು ದೆಹಲಿ ಕರ್ನಾಟಕ ಸಂಘದ ಸಭಾಂಗಣದಲ್ಲಿ ನವದೆಹಲಿಯ ನಾಡಪ್ರಭು ಕೆಂಪೇಗೌಡ ಫೌಂಡೇಶನ್‌ನ 8 ನೇ ವಾರ್ಷಿಕೋತ್ಸವದ ಅಂಗವಾಗಿ ರಾಷ್ಟ್ರಪತಿಗಳಿಂದ ಪದ್ಮಭೂಷಣ ಪ್ರಶಸ್ತಿ ಪುರಸ್ಕೃತರಾದ ಕನ್ನಡ ನಾಡಿನ ಜನಪ್ರಿಯ ಕಾದಂಬರಿಕಾರರಾದ ಡಾ. ಎಸ್.ಎಲ್. ಬೈರಪ್ಪನವರನ್ನು ಅಭಿನಂದಿಸುವ, ಏರ್ ಡೆಕ್ಕನ್ ಸಂಸ್ಥಾಪಕರಾದ ಕ್ಯಾಪ್ಟನ್ ಜಿ.ಆರ್. ಗೋಪಿನಾಥ್ ಅವರಿಗೆ 'ನಾಡಪ್ರಭು ಕೆಂಪೇಗೌಡ' ಪ್ರಶಸ್ತಿ ನೀಡುವ, ಮಕ್ಕಳಿಗೆ ಪ್ರತಿಭಾ ಪುರಸ್ಕಾರ, ವಿದ್ಯಾರ್ಥಿ ವೇತನ ವಿತರಣೆಯ ಮತ್ತು ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿತ್ತು.

ಸುಮಾರು 60ಕ್ಕೂ ಹೆಚ್ಚು ದೆಹಲಿ ಮತ್ತು ಎನ್.ಸಿ.ಆರ್.ನ ಗೃಹಿಣಿಯರು ಪರಮಪೂಜ್ಯ ಜಗದ್ಗುರು ಶ್ರೀ ಡಾ. ನಿರ್ಮಲಾನಂದನಾಥ ಮಹಾಸ್ವಾಮೀಜಿಗಳಿಗೆ ಅಮೃತ ಕಲಶದ ಸ್ವಾಗತ ಕೋರಿದ ನಂತರ ಗುರುಗಳಿಗೆ ಪಾದಪೂಜೆ ಮಾಡಲಾಯಿತು. ನಂತರ ಮುಖ್ಯ ಅತಿಥಿಗಳಿಗೂ ಅಮೃತ ಕಲಶದ ಸ್ವಾಗತ ಕೋರಲಾಯಿತು. ಮಕ್ಕಳು ಮತ್ತು ಮಹಿಳೆಯರು ವೇದಿಕೆ ಮೇಲೆ ನಾಡಗೀತೆ ಹಾಡಿದ ಮೇಲೆ ಪರಮ ಪೂಜ್ಯರೊಂದಿಗೆ ವೇದಿಕೆ ಮೇಲೆ ಉಪಸ್ಥಿತರಿದ್ದ ಎಲ್ಲಾ ಗಣ್ಯರು ವೇದ ಘೋಷಗಳ ಹಿನ್ನಲೆಯಲ್ಲಿ ದೀಪ ಬೆಳಗುವ ಮೂಲಕ ಅಂದಿನ ಕಾರ್ಯಕ್ರಮಕ್ಕೆ ವಿದ್ಯುಕ್ತ ಚಾಲನೆ ನೀಡಲಾಯಿತು. ಶ್ರೀಕ್ಷೇತ್ರ ಆದಿಚುಂಚನಗಿರಿ ಮಹಾಸಂಸ್ಥಾನ ಮಠದ ಪೀಠಾಧ್ಯಕ್ಷರಾದ ಶ್ರೀ ಡಾ. ನಿರ್ಮಲಾನಂದನಾಥ ಮಹಾಸ್ವಾಮೀಜಿಗಳು ಈ ಕಾರ್ಯಕ್ರಮದಲ್ಲಿ ದಿವ್ಯ ಸಾನಿಧ್ಯ ವಹಿಸಿದ್ದರು.

ಮುಖ್ಯ ಅತಿಥಿಗಳಾದ ಡಾ. ಎಸ್.ಎಲ್. ಭೈರಪ್ಪ, ಕ್ಯಾಪ್ಟನ್ ಜಿ.ಆರ್. ಗೋಪಿನಾಥ್, ಪ್ರಖ್ಯಾತ ಸಾಹಿತಿಗಳು ಹಾಗು ಅನುವಾದಕರೂ ಆದ ಡಾ. ಪ್ರಧಾನ್ ಗುರುದತ್, ಫೌಂಡೇಶನ್‌ನ ಅಧ್ಯಕ್ಷರಾದ ಶ್ರೀ ಬಿ.ಎಲ್. ಸುರೇಶ್ ಡಿಸಿಪಿ, ಮಹಾಪೋಷಕರಾದ ಶ್ರೀ ಶಶಿಕುಮಾರ್, ಹಿರಿಯ ಸಾಹಿತಿಗಳಾದ ಡಾ. ಎಚ್.ಎಸ್. ಶಿವಪ್ರಕಾಶ್, ವಿದೇಶಾಂಗ ವ್ಯವಹಾರಗಳ ಸಚಿವಾಲಯದ ಜಂಟಿ ಕಾರ್ಯದರ್ಶಿ ಐಎಫ್‌ಎಸ್., ಅಧಿಕಾರಿ ಡಾ. ಕೆ.ಜೆ. ಶ್ರೀನಿವಾಸ್, ಸಂಸತ್ ಭವನದ ಜಂಟಿ ಕಾರ್ಯದರ್ಶಿ ಡಾ. ಕೆ.ಎಸ್. ಸೋಮಶೇಖರ್ ಹಾಗು ಶ್ರೀ ಕೆ.ಆರ್. ರಂಗನಾಥ್ (ಕನ್ನಡವೇ ಸತ್ಯ ರಂಗಣ್ಣ) ವೇದಿಕೆಯಲ್ಲಿ ಉಪಸ್ಥಿತರಿದ್ದರು.



ಕಾರ್ಯಕ್ರಮದ ನಿರ್ವಹಣೆಯನ್ನು ದೆಹಲಿ ಕರ್ನಾಟಕ ಸಂಘದ ಉಪಾಧ್ಯಕ್ಷೆ ಶ್ರೀಮತಿ ಪೂಜಾ ರಾವ್ ಅವರು ನಡೆಸಿಕೊಟ್ಟರು. ನಾಡಪ್ರಭು ಕೆಂಪೇಗೌಡ ಫೌಂಡೇಶನ್ ಮತ್ತು ಕಾರ್ಯ ಚಟುವಟಿಕೆಗಳ ಮಾಹಿತಿಯನ್ನು ಶ್ರೀ ನ.ಮೂ. ಶ್ರೀರಾಮ್ ಅವರು ಹಿನ್ನಲೆ ಧ್ವನಿಯಲ್ಲಿ ನೀಡಿದರು.

ಫೌಂಡೇಶನ್‌ನ ಪ್ರಧಾನ ಕಾರ್ಯದರ್ಶಿ ಶ್ರೀ ಸಿ.ಎಂ. ನಾಗರಾಜ ಅವರು ಆಗಮಿಸಿದ್ದ ಪರಮ ಪೂಜ್ಯರನ್ನು ಗೌರವಪೂರ್ವಕವಾಗಿ, ಎಲ್ಲಾ ಅತಿಥಿ ಗಣ್ಯರನ್ನು ಹಾಗೂ ಸಭಾಂಗಣದಲ್ಲಿ ಉಪಸ್ಥಿತರಿದ್ದ ಎಲ್ಲರನ್ನು ಹಾರ್ದಿಕವಾಗಿ ಸ್ವಾಗತಿಸಿ ಪ್ರಾಸ್ತಾವಿಕ ಮಾತುಗಳನ್ನಾಡಿದರು. ಫೌಂಡೇಶನ್ ವತಿಯಿಂದ ಮಾಡುತ್ತಿರುವ ನಾನಾ ಕಾರ್ಯಕ್ರಮಗಳ ಬಗ್ಗೆ ಸಂಕ್ಷಿಪ್ತ ವಿವರ ನೀಡಿದರು.

ಪದ್ಮಭೂಷಣ ಪ್ರಶಸ್ತಿ ಪುರಸ್ಕೃತ ಡಾ. ಎಸ್.ಎಲ್. ಭೈರಪ್ಪ ಅವರನ್ನು ಗೌರವಿಸಿ ಅಭಿನಂದಿಸಲಾಯಿತು. ಭಾರತೀಯ ವಾಯು ಸೇನಾ ನಿವೃತ್ತ ಕ್ಯಾಪ್ಟನ್, ಸಮಾಜ ಸೇವಕರು ಹಾಗೂ ಏರ್ ಡೆಕ್ಕನ್ ಸಂಸ್ಥಾಪಕರಾದ ಶ್ರೀ ಜಿ.ಆರ್. ಗೋಪಿನಾಥ್ ಅವರಿಗೆ 'ನಾಡಪ್ರಭು ಕೆಂಪೇಗೌಡ ಪ್ರಶಸ್ತಿ' ಪ್ರದಾನ ಮಾಡಲಾಯಿತು. ಇಬ್ಬರು ಪ್ರಶಸ್ತಿ ಪುರಸ್ಕೃತರ ಪರಿಚಯವನ್ನು ಶ್ರೀಮತಿ ಪೂಜಾ ರಾವ್ ಮಾಡಿಕೊಟ್ಟರು.

ಡಾ. ಪ್ರಧಾನ್ ಗುರುದತ್ ಅವರು ಶ್ರೀ ಭೈರಪ್ಪನವರ ಕುರಿತು ಮಾತನಾಡುತ್ತಾ, ಎಲ್ಲರಿಗೂ ತಮ್ಮ ಕಾದಂಬರಿಗಳ ಮೂಲಕ ಚಿರಪರಿಚಿತರಾದ ಅವರ ಬಗ್ಗೆ ಮಾತನಾಡುವುದು ಒಂದು ರೀತಿಯಲ್ಲಿ ಕಷ್ಟವೂ ಸಹ, ಸುಲಭವೂ ಕೂಡ. ಅವರ ವಿಶಿಷ್ಟವಾದ ದಾಟು ಕಾದಂಬರಿಯನ್ನು ಅವರು ರಚಿಸಿದ್ದು ಎನ್‌ಸಿಇಆರ್‌ಟಿ ನಲ್ಲಿ ಅಧಿಕಾರಿಯಾಗಿ ದೆಹಲಿಯಲ್ಲಿ ಕಾರ್ಯನಿರ್ವಹಿಸುತ್ತಿದ್ದ ಸಮಯದಲ್ಲಿ ಎನ್ನುವುದು ಎಲ್ಲಾ ದೆಹಲಿ ಕನ್ನಡಿಗರು ಹೆಮ್ಮೆಪಡುವಂತಹ ವಿಷಯ. ಆದ್ದರಿಂದ ಭೈರಪ್ಪನವರಿಗೆ ನಾನಾ ಪ್ರಶಸ್ತಿಗಳು ಸಂದಿರುವುದಲ್ಲಿ ದೆಹಲಿಯೂ ಒಂದು ಕಾಣಿಕೆ ನೀಡಿದೆ ಎಂದರು. ಅವರ 24 ಕಾದಂಬರಿಗಳು ಒಂದಕ್ಕಿಂತ ಒಂದು ಮಿಗಿಲಾದವು, ಸಮಾಜದ ಹಿತದೃಷ್ಟಿಯಿಂದ ಸಾಮಾಜಿಕ, ಪೌರಾಣಿಕ ಹಾಗೂ ವೈಜ್ಞಾನಿಕ ವಿಷಯಗಳ ಹಿನ್ನಲೆಯಲ್ಲಿ ವಿಭಿನ್ನವಾದ ಕಾದಂಬರಿಗಳು ಅವರಿಂದ ಹೊರಬಂದಿವೆ, ಅವರು ಸಂಶೋಧನೆ, ಅಧ್ಯಯನ ಮತ್ತು ಸಮಾಲೋಚನೆ ನಡೆಸಿ, ವಿದ್ವಾಂಸರೊಂದಿಗೆ ಚರ್ಚಿಸಿ ತಮ್ಮ ಕೃತಿಗಳನ್ನು ರಚಿಸಿ ಸಮಾಜಕ್ಕೆ ಕೊಡುತ್ತಿದ್ದಾರೆ. ಅವರ ಕೃತಿಗಳು ದೇಶದ ಇತರೆ 22 ಭಾಷೆಗಳಲ್ಲದೆ, ಲಿಪಿಯೇ ಇಲ್ಲದಂತಹ ಕೊಡವ, ತುಳು ಮತ್ತು ಕೊಂಕಣಿ ಭಾಷೆಯಲ್ಲಿಯೂ ಅನುವಾದವಾಗಿವೆ. ಉರ್ದು ನಲ್ಲೂ ಅವರ ವಂಶವೃಕ್ಷ ಕಾದಂಬರಿ ಅನುವಾದ ಗೊಂಡಿದೆ, ಬಹಳ ಹಿಂದೆಯೇ ಬಂಗಾಳದ ಪ್ರಸಿದ್ಧ ವಿದ್ವಾಂಸರು ಅವರನ್ನು ವಿಶ್ವಕವಿ ಎಂದು ಹೇಳಿದ್ದರು. ಅವರ 'ವಂಶವೃಕ್ಷ' ಕಾದಂಬರಿ ಪ್ರಕಟವಾಗಿ 50 ವರ್ಷ ಮತ್ತು 'ಪರ್ವ' ಕಾದಂಬರಿ ಪ್ರಕಟವಾಗಿ 40 ವರ್ಷ ಆದ ಸಂದರ್ಭದಲ್ಲಿ ಸಾಹಿತ್ಯೋತ್ಸವ ಆಚರಿಸುತ್ತಿರುವ ಪರಂಪರೆ ಕನ್ನಡ ನಾಡಿನಲ್ಲಿ ಆರಂಭವಾಗಿದೆ. ಅದಕ್ಕೆ ನಾಂದಿ ಹಾಡಿರುವುದು ಭೈರಪ್ಪನವರ ಜನಪ್ರಿಯ ಕಾದಂಬರಿಗಳು. ಭಾರತೀಯ ಸಾಹಿತ್ಯದಲ್ಲಿ ತ್ರಿವಿಕ್ರಮವನ್ನೇ ಸಾಧಿಸಿದ್ದಾರೆ, ಅವರಿಗೆ ನೊಬೆಲ್ ಪ್ರಶಸ್ತಿ ಬರದಿದ್ದರೂ ಭಾರತದ ಎಲ್ಲ ಸಾಹಿತಿಗಳಿಗೂ ಮೀರಿದಂತ ಅವರೊಬ್ಬ ವಿಶ್ವ ಸಾಹಿತಿ. ಜನಪ್ರಿಯತೆ ಮತ್ತು ವಿಶಿಷ್ಟತೆ ಎರಡರ ಸಮಾಗಮದ ಅವರು ಅಪರೂಪದ ಸಾಹಿತಿ ಎಂದರು. ಲಂಡನ್‌ನಲ್ಲಿ ನಡೆದ ವಿಶ್ವ ಪುಸ್ತಕ ಮೇಳದಲ್ಲಿ ಅವರ ಕೃತಿಗಳ ಸುಮಾರು 200 ಪ್ರತಿಗಳು ಮಾರಾಟವಾಗಿದ್ದನ್ನು ಹಾಗೂ ಅವರ ಜೀವನದ ಕೆಲವು ಪ್ರಸಂಗಗಳನ್ನು ಅವರು ನೆನಪಿಸಿಕೊಂಡರು.

ಫೌಂಡೇಶನ್ ವತಿಯಿಂದ 10 ಮತ್ತು 12ನೇ ತರಗತಿಯಲ್ಲಿ ಅಧಿಕ ಅಂಕ ಪಡೆದ ವಿದ್ಯಾರ್ಥಿಗಳಾದ ಕು. ವಿಷ್ಣು ಎಸ್, ಕು. ಲಕ್ಷಿತಾ ಜೈನ್, ಕು.ಅನಿರುದ್ಧ ಆಚಾರ್ಯ, ಕು. ಶ್ರೇಯಾ ತೇಲಿ, ಕು. ತರುಣ್ ಗೌಡ, ಕು. ಆದಿತ್ಯ ಕುಲಕರ್ಣಿ, ಕು. ಎಚ್.ಬಿ. ಹೇಮನ್ ಅವರಿಗೆ ಪ್ರತಿಭಾ ಪುರಸ್ಕಾರವನ್ನು ಮಹಾಸ್ವಾಮೀಜಿ ಹಾಗು ಮುಖ್ಯ ಅತಿಥಿಗಳು ನೀಡಿದರು.

ನಿಕಟಪೂರ್ವ ಪ್ರತಿಭಾ ಪುರಸ್ಕೃತರು, ಪ್ರಸಕ್ತ ಸಾಧಕರಾದ ಶ್ರೀ ನವಯುಗ್ ಶ್ರೀರಾಮ್, ಶ್ರೀ ಮಹೇಶ್ ಕುಮಾರ್ ನಿಂಬಾಳ, ಶ್ರೀ ಆಹರ್ನಿಶ್ ಕೆ. ಎಸ್. ಹಾಗೂ ಕ್ರೀಡಾ ಕ್ಷೇತ್ರದಲ್ಲಿ ವಿಶಿಷ್ಟ ಸಾಧನೆ ಮಾಡಿರುವ ಕುಮಾರಿ ಅನ್ವೇಷ ಗೌಡ, ಮತ್ತು ಕುಮಾರಿ ಲಕ್ಷ್ಮೀ ಗೌಡ ಮತ್ತು ಕುಮಾರಿ ಭಕ್ತಿ ಸಫಲ ಮಾನಕಾಪುರೆ ಅವರ ಗೈರು ಹಾಜರಿಯಲ್ಲಿ ಅವರ ತಾಯಿ ಶ್ರೀಮತಿ ನಯನ ಮಾನಕಾಪುರೆ ಅವರನ್ನು ಸ್ವಾಮೀಜಿಗಳಿಂದ ಗೌರವಿಸಿ, ಅಭಿನಂದಿಸಲಾಯಿತು.

ಅನಂತರ ಪರಮಪೂಜ್ಯ ಜಗದ್ಗುರು ಶ್ರೀ ಡಾ. ನಿರ್ಮಲಾನಂದನಾಥ ಮಹಾಸ್ವಾಮೀಜಿಗಳು ಆಶೀರ್ವಚನ ನೀಡಿದರು. ನಾಡಪ್ರಭು ಕೆಂಪೇಗೌಡ ಫೌಂಡೇಶನ್‌ನ ವಾರ್ಷಿಕೋತ್ಸವ ಕಾರ್ಯಕ್ರಮದಲ್ಲಿ ಮಕ್ಕಳಿಗೆ ಪ್ರತಿಭಾ ಪುರಸ್ಕಾರ ನೀಡುತ್ತಿರುವುದರ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸುತ್ತಾ ಕೆಂಪೇಗೌಡರು ನಾಡನ್ನು ಕಟ್ಟಿದವರು, ಅವರು ನಾಡಪ್ರಭುಗಳು ಅಷ್ಟೇ ಅಲ್ಲ ಧರ್ಮ ಪ್ರಭುಗಳು ಕೂಡ, ಅವರು ಪ್ರಜಾ ಬಂಧು, ಅಂತಹ ಹಿರಿಯರ ವಿಚಾರವನ್ನು ಸಾರುವ ಇಂತಹ ಕಾರ್ಯಕ್ರಮಗಳು ಆಗಾಗ ಆಗುತ್ತಲಿರಬೇಕು, ನಮ್ಮ ಈ ಪರಂಪರೆಯನ್ನು ಮಕ್ಕಳಿಗೆ ತಿಳಿಸಿ, ಹಿರಿಯರ ಮಾತುಗಳು ಅವರ ಆದರ್ಶವಾಗಬೇಕು ಎಂದು ಸ್ವಾಮೀಜಿ ಹೇಳಿದರು. ತಮ್ಮ ಬಳಿ ಇದ್ದ ಪುಸ್ತಕದಲ್ಲಿ ಉಲ್ಲೇಖವಿದ್ದ ಆಲ್ಬರ್ಟ್ ಐನ್‌ಸ್ಟೀನ್ ಹೇಳಿಕೆಯಂತೆ ಇಮ್ಯಾಜಿನೇಶನ್ ಇಸ್ ಮೋರ್ ಇಂಪಾರ್ಟೆಂಟ್ ದ್ಯಾನ್ ನಾಲೆಡ್ಜ್, ನಾಲೆಡ್ಜ್ ಐಸ್ ಲಿಮಿಟೆಡ್ ಬಟ್ ಇಮ್ಯಾಜಿನೇಷನ್ ಎಂಸರ್ಕ್ಯುಲ್ಸ್‌ದಿ ವರ್ಲ್ಡ್. ಒಬ್ಬ ಕವಿಯಾಗಬಹುದು, ವಿಜ್ಞಾನಿಯಾಗಬಹುದು ಸಂತನಾಗಬಹುದು, ಒಬ್ಬ ಸಾಹಿತಿಯಾಗಬಹುದು ಎಲ್ಲರೂ ವಾಸ್ತವವನ್ನು ಅರಿತು ಅದನ್ನು ಬರೆದು ಕೊಡುವ ಮುಂಚೆ ಕಲ್ಪಿಸಿಕೊಳ್ಳಬೇಕು. ಅದರಲ್ಲೂ ಸಾಹಿತಿಗಳಿಗೆ ಇಮ್ಯಾಜಿನೇಷನ್ ಬಹಳ ಮುಖ್ಯ, ಅಂತಹವರ ಸಾಲಿನಲ್ಲಿ ಸೇರುವಂತ ಸಾಹಿತಿಗಳು ಮತ್ತು ಅಡ್ಮಿನಿಸ್ಟ್ರೇಟರ್ ನಮ್ಮ ಜೊತೆ ಇಂದು ಇಲ್ಲಿ ಇದ್ದಾರೆ ಎಂದರು.


ನಾಡಪ್ರಭು ಕೆಂಪೇಗೌಡ ಪ್ರಶಸ್ತಿಗೆ ಭಾಜನರಾದ ಕ್ಯಾಪ್ಟನ್ ಜಿ.ಆರ್. ಗೋಪಿನಾಥ್ ಅವರು ತಮ್ಮ ಯೋಜನೆಗಳನ್ನು ಸಾಕಾರಗೊಳಿಸುವ ಮೊದಲು ಅದನ್ನು ಕಲ್ಪನೆ ಮಾಡಿಕೊಂಡು ಮುಂದುವರಿದರು. ಅವರು ತಮ್ಮ ವಾಯು ಸೇನೆಯಲ್ಲಿ ಸೇವೆ ಮಾಡಿದ ನಂತರ ನಿವೃತ್ತಿ ಜೀವನದಲ್ಲಿ ಸುಮ್ಮನೆ ಕುಳಿತುಕೊಳ್ಳಲಿಲ್ಲ, ಹೊಸ ಕಲ್ಪನೆಗಳಿಂದ ಹೊಸ ಸಾಹಸಕ್ಕೆ ಕೈ ಹಾಕಿದವರು ಅವರಿಗೆ ನಾಡಪ್ರಭು ಕೆಂಪೇಗೌಡ ಪ್ರಶಸ್ತಿ ನೀಡಿ ಗೌರವಿಸಿರುವುದು ಸ್ತುತ್ಯಾರ್ಹ ಎಂದರು. ಮುಂದುವರಿದು, ನಾವು ಕಲ್ಪಿಸುವ ವಸ್ತುಗಳು ಯೋಜನೆಗಳು ಮುಂದಿನ ಜನಾಂಗದವರಿಗೆ ಹೊಸ ಆಯಾಮವನ್ನು ತಂದು ಕೊಡುವಂತದ್ದಾದರೆ ಅವು ಚಿರಸ್ಮರಣೀಯವಾಗುತ್ತವೆ. ಐನ್‌ಸ್ಟೀನ್ ಒಬ್ಬ ಸೈದ್ಧಾಂತಿಕ ವಿಜ್ಞಾನಿ, ತಾನು ಕಂಡು ಹಿಡಿದಂತಹ ಎಷ್ಟೋ ವಿಚಾರಗಳನ್ನು ಅವರು ಮುಂಚೆ ಕಲ್ಪಿಸಿಕೊಂಡು ತನ್ನ

ಕಾಲಘಟ್ಟದಲ್ಲಿ ಸಾಕಾರಗೊಳಿಸಿದ್ದರು. ಅಂದಿನ ಅವರ ವಿಚಾರವನ್ನು ಪ್ರಾಯೋಗಿಕವಾಗಿ ಈಗಿನ ವಿಜ್ಞಾನಿಗಳು ಸಹಾ ಒಪ್ಪಿಕೊಳ್ಳುತ್ತಾರೆ ಎಂದು ತಿಳಿಸಿದರು.

ಹಾಗೇಯೇ, ಕವಿಗಳು ಅದರಲ್ಲೂ ಸತ್ಯದ ನೆಲೆಯಲ್ಲಿ ಕಲ್ಪಿಸಿಕೊಂಡು ಬರೆದು ಕೊಟ್ಟಂತಹ ಸಾಹಿತ್ಯ, ಸತ್ಯದ ನೆಲಗಟ್ಟಿನಲ್ಲಿ, ಅವರ ಜ್ಞಾನದ ನೆಲಗಟ್ಟಿನಲ್ಲಿ ಅದೆಷ್ಟೋ ಶತಮಾನದ ಯುಗದ ಪರಿವರ್ತನೆಗೆ ಸಹಕಾರಿಯಾಗುತ್ತದೆ. ಅವರ ಸಾಲಿನಲ್ಲಿ ನಿಲ್ಲುವಂತವರು ನಮ್ಮ ಶ್ರೀ ಎಸ್.ಎಲ್. ಭೈರಪ್ಪನವರು. ಅವರು ಕೊಟ್ಟಂತ ಸಾಹಿತ್ಯ ಈ ಯುಗದಲ್ಲಿ ಈ ಕಾಲಘಟ್ಟದಲ್ಲಿ ವಿಶೇಷವಾದದ್ದು. ಅಂತಹ ಮಹನೀಯರಿಗೆ ಪದ್ಮಭೂಷಣ ಪ್ರಶಸ್ತಿಯನ್ನು ಕೇಂದ್ರ ಸರ್ಕಾರ ನೀಡಿ ಗೌರವಿಸಿದೆ. ಅದನ್ನು ಕೆಂಪೇಗೌಡ ಫೌಂಡೇಶನ್ ಗುರುತಿಸಿ ಗೌರವಿಸುತ್ತಿರುವುದು ಅಭಿನಂದನಾರ್ಹದ ಕೆಲಸವೆಂದು ಸ್ವಾಮೀಜಿ ಮೆಚ್ಚುಗೆ ವ್ಯಕ್ತಪಡಿಸಿದರು.

ನಮ್ಮ ಗುರುಗಳು ಸುಮಾರು 20 ವರ್ಷಗಳ ಹಿಂದೆ ಶ್ರೀ ಭೈರಪ್ಪನವರ 'ಸಾರ್ಥ'. ಹೆಸರಿನ ಒಂದು ಪುಸ್ತಕವನ್ನು ನನಗೆ ಕೊಟ್ಟಿದ್ದರು. ಅಲ್ಲಿಯವರೆಗೂ ನನಗೆ ಅವರ ಬಗ್ಗೆ ಗೊತ್ತಿರಲಿಲ್ಲ ಎನ್ನುತ್ತಾ ಭೈರಪ್ಪನವರ ಆ 'ಸಾರ್ಥ' ಕಾದಂಬರಿಯಲ್ಲಿ ಬಿಂಬಿಸಿದ ತತ್ವದ ಬಗ್ಗೆ ಮತ್ತು ಅವರ 'ಯಾನ' ವೈಜ್ಞಾನಿಕ ಕಾದಂಬರಿಯನ್ನು ಹಾಗು ಕುವೆಂಪು ಅವರ ವಿಲಿಯಂ ಬ್ಲೇಕ್‌ನ ಮಾತನ್ನು ಕನ್ನಡಕ್ಕೆ ಅಳವಡಿಸಿದ ರೀತಿಯನ್ನು ವಿಶ್ಲೇಷಿಸಿದರು. ವಿಶ್ವಪ್ರಸಿದ್ಧ ಬೆಂಗಳೂರು ನಗರವನ್ನು ಕಟ್ಟಿದ ನಾಡಪ್ರಭು ಕೆಂಪೇಗೌಡ ಫೌಂಡೇಶನ್‌ನಿಂದ ಅವರ ಹೆಸರಿನಲ್ಲಿ ಇಂದು ಪ್ರತಿಭಾವಂತ ಮಕ್ಕಳಿಗೆ ಪ್ರತಿಭಾ ಪುರಸ್ಕಾರ ಮತ್ತು ವಿದ್ಯಾರ್ಥಿ ವೇತನ ನೀಡುತ್ತಿರುವುದು, ಸಾಧಕರಿಗೆ ಅಭಿನಂದನೆ ಮತ್ತು ಪ್ರಶಸ್ತಿ ಪ್ರದಾನ ಮಾಡುತ್ತಿರುವುದು ಬಹಳ ಸಂತೋಷದ ವಿಚಾರ. ಅದನ್ನು ಸ್ವೀಕರಿಸಿದವರಿಗೂ ಹಾಗೂ ಸಭಾಂಗಣದಲ್ಲಿ ನೆರೆದಿರುವ ಎಲ್ಲರಿಗೂ ವಿಶೇಷವಾಗಿ ತಮ್ಮ ಮಕ್ಕಳನ್ನು ಈ ಕಾರ್ಯಕ್ರಮಕ್ಕೆ ಕರೆ ತಂದಿರುವ ತಾಯಂದಿರಿಗೆ ಶುಭವಾಗಲಿ ಎಂದರು. ಸಾಂಸ್ಕೃತಿಕ ಕಾರ್ಯಕ್ರಮ ನೀಡುತ್ತಿರುವ ಕಲಾವಿದರನ್ನು ಸ್ವಾಮೀಜಿಯವರ ಸಮ್ಮುಖದಲ್ಲಿ ಅಭಿನಂದಿಸಲಾಯಿತು. ಫೌಂಡೇಶನ್ ವತಿಯಿಂದ ಪರಮ ಪೂಜ್ಯರಿಗೆ ಗೌರವ ಸಮರ್ಪಣೆ ನೀಡಲಾಯಿತು.

ಹಿರಿಯ ಸಾಹಿತಿ ಡಾ. ಎಚ್.ಎಸ್. ಶಿವಪ್ರಕಾಶ್ ಅವರು ಮಾತನಾಡಿ ನಾಡಪ್ರಭು ಕೆಂಪೇಗೌಡರ ಸ್ಮರಣೆಯನ್ನು ಈ ರೀತಿ ಫೌಂಡೇಶನ್ ವತಿಯಿಂದ ಸಾಧಕರನ್ನ ಅಭಿನಂದಿಸುತ್ತಿರುವುದು, ಪ್ರತಿಭಾವಂತ ಮಕ್ಕಳಿಗೆ ಪುರಸ್ಕರಿಸುತ್ತಿರುವುದು, ಎಳೆಯ ಪ್ರತಿಭೆಗಳನ್ನು ಪ್ರತಿವರ್ಷ ಪ್ರೋತ್ಸಾಹಿಸುತ್ತಿರುವುದು ಅಭಿನಂದನೀಯ. ಈ ಹಿಂದೆ ಪುರಸ್ಕೃತರಾದ ಮಕ್ಕಳು ಹೇಗೆ ಮುಂದೆ ಬಂದು ಸಾಧಕರಾಗಿದ್ದಾರೆ ಎಂಬುದನ್ನು ನಾವು ನೋಡಿದ್ದೇವೆ, ಪದ್ಮಭೂಷಣ ಪ್ರಶಸ್ತಿ ಪುರಸ್ಕೃತ ಶ್ರೀ ಭೈರಪ್ಪನವರು ಇರುವ ಸಭೆಯಲ್ಲಿ ನಾನು ಭಾಗವಹಿಸುತ್ತಿರುವುದು ನನಗೆ ಹೆಮ್ಮೆಯ ವಿಷಯ, ಅವರು ಕೇವಲ ಕನ್ನಡದ ಬರಹಗಾರರಲ್ಲ, ವಿಶ್ವದ ಬರಹಗಾರರೂ ಹೌದು, ಕನ್ನಡ ಸಾಹಿತ್ಯದ ಪರಂಪರೆ ವಿಶ್ವಾತ್ಮಕವಾದದ್ದು, ಕುವೆಂಪು ಸಹಾ ವಿಶ್ವಮಾನವ ತತ್ವವನ್ನು ಪ್ರತಿಪಾದಿಸಿದವರು, ಸಾಹಿತಿಗಳಿಗೆ ಕನಸಿರುತ್ತದೆ, ಆದರೆ ಅದನ್ನು ಸಾಕಾರಗೊಳಿಸುವವರು ಅವರ ಕನಸನ್ನು ಕಲ್ಪಿಸಿ ಕಾರ್ಯಗತ ಮಾಡುವ ವ್ಯಕ್ತಿಗಳು ಎನ್ನುತ್ತಾ, ಶ್ರೀ ಭೈರಪ್ಪನವರಿಗೆ ತಮ್ಮ ಅಭಿನಂದನೆಗಳನ್ನು ತಿಳಿಸಿದರು. ಪ್ರತಿಯೊಬ್ಬ ಬಡವನೂ ಸಹಾ ಆಕಾಶದಲ್ಲಿ ಹಾರಾಡುವ ಕನಸನ್ನು ಸಾಕಾರಗೊಳಿಸಿದ ಕ್ಯಾಪ್ಟನ್ ಗೋಪಿನಾಥ್ ಅವರೂ ಸಹಾ ಒಬ್ಬ ಸಾಧಕ, ನಾಡಪ್ರಭು ಕೆಂಪೇಗೌಡ ಪ್ರಶಸ್ತಿಗೆ ಭಾಜನರಾದ ಅವರಿಗೂ ಸಹ ಅಭಿನಂದನೆಗಳು ಎಂದರು.



ಮುಖ್ಯ ಅತಿಥಿಗಳಾದ ಪದ್ಮಭೂಷಣ ಪ್ರಶಸ್ತಿ ಪುರಸ್ಕೃತ ಡಾ. ಎಸ್.ಎಲ್. ಭೈರಪ್ಪ ಅವರು ಮಾತನಾಡಿ, ಪೂಜ್ಯ ಸ್ವಾಮೀಜಿ ಅವರು ಎಂಟೆಕ್ ಪದವೀಧರ, ಸಮಾಜದ ಫಿಲಾಸಫಿಯನ್ನು ಚೆನ್ನಾಗಿ ತಿಳಿದುಕೊಂಡಿರುವವರು, ದೇಶದ ಸಮಸ್ಯೆಗಳನ್ನು ಸಮರ್ಪಕವಾಗಿ ಬಗೆಹರಿಸುವಂತ ಕೆಲಸ ಮಾಡುತ್ತಿದ್ದಾರೆ, ಆದ್ದರಿಂದ





ಅವರಿಗೆ ಸಾಹಿತ್ಯ ಚೆನ್ನಾಗಿ ಅರ್ಥವಾಗುತ್ತದೆ, ಅಂತಹವರು ನನ್ನ ಬಗ್ಗೆ ಒಳ್ಳೆ ಮಾತುಗಳು ಆಡಿದ್ದಾರೆ ನಾನು ಅವರಿಗೆ ಕೃತಜ್ಞನಾಗಿದ್ದೇನೆ ಎಂದರು.

ನನ್ನ ಸಾಹಿತ್ಯದ ಬಗ್ಗೆ ಗೆಳೆಯ ಶ್ರೀ ಪ್ರಧಾನ್ ಗುರುದತ್ ಅವರು ಸಹಾ ಒಳ್ಳೆಯ ಮಾತುಗಳನಾಡಿದ್ದಾರೆ. ನೀವೆಲ್ಲ ದೆಹಲಿಯಲ್ಲಿ ವಾಸವಾಗಿದ್ದೀರಿ, ಇದರ ಫಾಯಿದಾ ಇದೆ. ದೆಹಲಿಯಲ್ಲಿ ಇರುವವರಿಗೆ ರಾಷ್ಟ್ರದ ಬಗ್ಗೆ ವಿಶಾಲವಾದ ತಿಳುವಳಿಕೆ ಇರುತ್ತದೆ ಯಾಕೆಂದರೆ ಇಲ್ಲಿಯ ವಾತಾವರಣ ಹಾಗೆ ಇದೆ, ನಾನೂ ಸಹಾ ಈ ಹಿಂದೆ ಎನ್‌ಸಿಇಆರ್‌ಟಿ ನಲ್ಲಿ ಕೆಲಸ ಮಾಡುವಾಗ ನಾಲ್ಕೈವರೆ ವರ್ಷಗಳ ಕಾಲ ದೆಹಲಿಯಲ್ಲಿ ಇದ್ದ ಸಮಯದಲ್ಲಿ ನನಗೂ ಬಹಳಷ್ಟು ಫಾಯಿದಾ ಆಗಿದೆ, ಅದೇನೆಂದರೆ, ಇಡೀ ಭಾರತದ ಸ್ಥಿತಿಗತಿಗಳನ್ನು ಇವತ್ತು ಸಮಗ್ರ ದೃಷ್ಟಿಯಿಂದ ನೋಡುವಂತ ಅವಕಾಶ ನನಗೆ ಇಲ್ಲಿ ಸಿಕ್ಕಿದೆ. ನಾನು ಎನ್‌ಸಿಆರ್‌ಟಿ ನಲ್ಲಿ ಕೆಲಸ ಮಾಡುತ್ತಿದ್ದಾಗ ದೇಶದ ಬೇರೆ ಬೇರೆ ನಗರಗಳಲ್ಲಿ ಸೆಮಿನಾರ್‌ಗಳನ್ನು ಆಯೋಜಿಸುತ್ತಿದ್ದೆವು, ಆ ಸಮಯದಲ್ಲಿ ನಾನು ಆಯೋಜಕರಿಗೆ, ಆ ನಗರಗಳ ಐವತ್ತು ಅರವತ್ತು ಮೈಲಿ ದೂರದಲ್ಲಿರುವ ಯಾವುದಾದರೂ ಒಂದು ಹಳ್ಳಿಯಲ್ಲಿ ಒಬ್ಬ ರೈತನ ಮನೆಯಲ್ಲಿ ತಮಗೆ ಉಳಿದುಕೊಳ್ಳಲು ವ್ಯವಸ್ಥೆ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತಿದ್ದೆ, ಅಲ್ಲಿನ ಗೃಹಿಣಿಯರ ಜೊತೆ ಮಾಡಿದ ಸಂಭಾಷಣೆ ಮೂಲಕ ಅಲ್ಲಿನ ಹಳ್ಳಿಯ ಜನ ಜೀವನದ ಬಗ್ಗೆ ನನಗೆ ಮಾಹಿತಿ ದೊರಕುತ್ತಿತ್ತು ಅದಲ್ಲದೆ ಪ್ರತಿ ಊರುಗಳಲ್ಲಿ ಅರಳಿ ಕಟ್ಟೆಗಳಲ್ಲಿ ನಾನೊಬ್ಬನೇ ಕುಳಿತುಕೊಂಡಿದ್ದಾಗ, ಆ ಹಳ್ಳಿಗಳ ಜನ ನನ್ನೊಂದಿಗೆ ಮಾತನಾಡಿ ನನ್ನ ಪರಿಚಯ ಮಾಡಿಕೊಳ್ಳುತ್ತಿದ್ದರು, ಆಗ ಅವರ ಹಳ್ಳಿಯ ಬಗ್ಗೆ ನನಗೆ ಬಹಳಷ್ಟು ಮಾಹಿತಿಗಳು ಲಭಿಸಿದ್ದು ಹಾಗು ಅದರಿಂದ ಇಡೀ ಭಾರತದ ಬಗ್ಗೆ ಸಿಗುತ್ತಿದ್ದ ದೃಷ್ಟಿಕೋನ ನನ್ನ ಸಾಹಿತ್ಯದ ಬರವಣಿಗೆಗೆ ಸಹಕಾರಿಯಾಗಿದೆ ಎಂದರು.

ದೆಹಲಿಯಲ್ಲಿ ನನಗೆ ಸಿಕ್ಕ ಇನ್ನೊಂದು ಲಾಭವೆಂದರೆ ಇಲ್ಲಿ ಒಳ್ಳೆಯ ಸಂಗೀತ ಕಚೇರಿಗಳು, ನೃತ್ಯಗಳು ನಡೆಯುತ್ತವೆ, ಅಗಾಗ ದೆಹಲಿಗೆ ಬರ್ತಾ ಇದ್ದೇನೆ, ಇಲ್ಲಿಗೆ ಬರದಿದ್ದರೆ ಏನೋ ಕಳೆದುಕೊಂಡಿದ್ದೇನೆ ಎನಿಸುತ್ತದೆ. ಹಿಂದೆ ನಾನು ದೆಹಲಿಯಲ್ಲಿದ್ದಾಗ, ನನಗೆ ಮೂಲ ಕನ್ನಡ ಭಾಷೆ ಬಗ್ಗೆ ಬಿಗಿ ಕಡಿಮೆಯಾಗುತ್ತಿದ್ದ ಕಾರಣ ಕರ್ನಾಟಕಕ್ಕೆ, ಅದರಲ್ಲೂ ಮೈಸೂರಿಗೆ ವರ್ಗಾವಣೆ ಮಾಡಿಕೊಳ್ಳಲು ಇಷ್ಟಪಟ್ಟಿದ್ದೆ. ಕರ್ನಾಟಕಕ್ಕೆ ಹಿಂತಿರುಗಿ ಬಂದ ಮೇಲೆ ಕೆಲವು ಜಾತ್ರೆಗಳಿಗೆ ನಾನು ಭೇಟಿಕೊಡುತ್ತಿದ್ದೆ, ಅಲ್ಲಿನ ಜನಗಳ ಜೊತೆ ಮಾತನಾಡುತ್ತಾ ಬೆರೆಯುತ್ತಿದ್ದೆ, ಅನಂತರ ನನಗೆ ಕನ್ನಡದ ಬಗ್ಗೆ ಮತ್ತೆ ಬಿಗಿ ಹಿಡಿತ ಬಂತು ಎಂದು ತಮ್ಮ ಅನುಭವಗಳನ್ನು ಹಂಚಿಕೊಂಡು ಇವತ್ತು ಕೆಂಪೇಗೌಡ ಫೌಂಡೇಶನ್ ವತಿಯಿಂದ ಅಭಿನಂದನೆ ಮಾಡಿರುವುದು ನನಗೆ ಸಂತೋಷವಾಗಿದೆ ಅವರಿಗೆ ಧನ್ಯವಾದಗಳು ಎಂದರು.





ಮತ್ತೊರ್ವ ಮುಖ್ಯ ಅತಿಥಿ ಮತ್ತು 'ನಾಡಪ್ರಭು ಕೆಂಪೇಗೌಡ' ಪ್ರಶಸ್ತಿ ಸ್ವೀಕರಿಸಿದ ಕ್ಯಾಪ್ಟನ್ ಜಿ.ಆರ್. ಗೋಪಿನಾಥ್ ಅವರು ಮಾತನಾಡಿ ತಮಗೆ ಈ ಪ್ರಶಸ್ತಿ ಕೊಡುವ ಬಗ್ಗೆ ತಿಳಿಸಿದಾಗ ನನಗೆ ಸ್ವಲ್ಪ ಸಂಕೋಚವಾಗಿತ್ತು. ನಾನು ಬೇರೆ ಯಾರಾದರೂ ಹಿರಿಯ ಸಾಧಕರಿಗೆ ನೀಡಿ ಎಂಬ ಮಾತನ್ನು ಹೇಳಿದ್ದೆ, ಭೈರಪ್ಪನವರೇ ಬರೆದಿರುವಂತೆ ಹೊಗಳಿಕೆಗೆ ಮರುಳಾಗುವುದಿಲ್ಲ, ಉತ್ಸವ ಮೂರ್ತಿಗೆ ಜಾಸ್ತಿ ಉತ್ಸವ ಮಾಡಿದರೆ ಮೂಲ ಮೂರ್ತಿಗೆ ಗೌರವ ಕಮ್ಮಿಯಾಗುತ್ತದೆ ಎಂದು, ಹಾಗೇ ಟಾಗೂರ್ ಅವರು ಒಂದು ಕಡೆ ಹೇಳುತ್ತಾರೆ blessed is he whose fame does not outshine his truth. ಎನ್ನುವಂತೆ, ಎಷ್ಟೋ ಬಾರಿ ನನಗೆ ಇರುವ ಪ್ರಖ್ಯಾತಿ ನನ್ನ ಸತ್ಯವನ್ನು ಮೀರಿದೆಯೋ ಏನೋ ಎಂದು ಅನಿಸುತ್ತದೆ. ಆದರೂ ಇಂತಹ ಮಹಾನ್ ಲೇಖಕರಾದ ಭೈರಪ್ಪನವರ ಜೊತೆ ನನ್ನನ್ನೂ ಸೇರಿಸಿದ್ದಕ್ಕೆ ಅದಕ್ಕಿಂತಲೂ ಪ್ರಧಾನವಾಗಿ ಅತ್ಯಂತ ದೊಡ್ಡ ಸಾಹಸಿ ಹಾಗೂ ಉತ್ತಮ ಆಡಳಿತಗಾರ ಕೆಂಪೇಗೌಡ ಅವರ ಹೆಸರಿನ ಪ್ರಶಸ್ತಿಯನ್ನು ನನಗೆ ಕೊಟ್ಟಿರುವುದಕ್ಕೆ ಕೃತಜ್ಞತೆಗಳನ್ನು ಅರ್ಪಿಸುತ್ತೇನೆ ಎಂದರು.

ಪೂಜ್ಯ ಸ್ವಾಮೀಜಿಗಳು ತಮ್ಮ ಮಾತಿನಲ್ಲಿ ಐನ್‌ಸ್ಟೀನ್ ರೆಫರ್ ಮಾಡಿ ಇಮ್ಯಾಜಿನೇಶನ್ ಕುರಿತು ಹೇಳಿದರು, ಐನ್‌ಸ್ಟೀನ್ ಒಂದು ಕಡೆ ಹೇಳುತ್ತಾನೆ, I am not a genious but I am infinitely more curious ಎಂದು. ಹಾಗೆಯೇ ಉದ್ಯಮಿ ಇರಬಹುದು, ಆಟಗಾರ ಇರಬಹುದು, ಸಾಹಿತಿಗಳಿರಬಹುದು ಯಾವುದೇ ವ್ಯಕ್ತಿ ತೆಗೆದುಕೊಂಡರೂ ಎಲ್ಲರಿಗೂ ದೇವರು ಕೊಟ್ಟಂತಹ ಒಂದು ಪ್ರತಿಭೆ ಇರುತ್ತದೆ, ಅದಕ್ಕಿಂತ ಮುಖ್ಯವಾದದ್ದು ಛಲ. ಪ್ರತಿಭೆ ಇದ್ದರೂ ಕೆಲವರು ಜಯ ಕಾಣುವುದಿಲ್ಲ ಏಕೆಂದರೆ ಅವರಿಗೆ ಹಠ ಇರುವುದಿಲ್ಲ ಎಂದರು. ನಾನು ಹುಟ್ಟಿದ್ದು ಗೊರೂರು ಬಳಿಯ ಒಂದು ಪುಟ್ಟ ಹಳ್ಳಿಯಲ್ಲಿ, ನನ್ನ 'ಭಾನಯಾನ' ಪುಸ್ತಕ ಬಿಡುಗಡೆಯಾದ ಸಂದರ್ಭ ಭೈರಪ್ಪನವರು ಕರೆ ಮಾಡಿ ನಿಮ್ಮ ಪುಸ್ತಕ ನನಗೆ ತುಂಬಾ ಹಿಡಿಸಿದೆ ನೀವು ಗೊರೂರಿನ ಬಗ್ಗೆ ಒಳ್ಳೆಯ ಚಿತ್ರಣ ಮಾಡಿರುವಿರಿ ಎಂದು ಹೇಳಿದ್ದು ನನ್ನ ಮನಸ್ಸಿಗೆ ಹೆಚ್ಚು ಉಲ್ಲಾಸವನ್ನು ಕೊಟ್ಟಿತ್ತು.

ಅವರ ಆತ್ಮೀಯತೆ ಮತ್ತು ಮಾನವೀಯತೆ ನನಗೆ ಅಂದೇ ಗೊತ್ತಾಯ್ತು, ಅವರಿಗೆ ಮಡಿವಂತಿಕೆ ಮೀರಿದ ಮಾನವೀಯತೆ ಮತ್ತು ವಿಶ್ವದೃಷ್ಟಿ ಇದೆ ಎಂದರು.

ತಮ್ಮ ಬಾಲ್ಯದ ಬಗ್ಗೆ ವಿವರಿಸುತ್ತಾ, ಆಗ ವಿದ್ಯಾಭ್ಯಾಸ ಮಾಡಲು ಸ್ವಲ್ಪ ಆರ್ಥಿಕ ಮುಗ್ಗಟ್ಟಿತ್ತು. ಗೊರೂರಿನಲ್ಲಿ ನಮ್ಮ ತಂದೆಯವರು ತೋಟಗಳಲ್ಲಿ ಕೆಲಸ ಮಾಡುತ್ತಿದ್ದ ಬಡವರನ್ನ ತೋರಿಸಿ ಅವರಂತೆ ಕಷ್ಟ ಪಡಬೇಕೆಂದು ಹೇಳಿದ್ದರು. ಮನುಷ್ಯನಿಗೆ ಅಸೂಯೆ ಇರಬಾರದು, ನಾನು ಓದುತ್ತಿದ್ದಾಗ ಮಿಲಿಟರಿ ಶಾಲೆಗೆ ಸೇರಲು ಮಾಡುವ ಪರೀಕ್ಷೆ ಬರೆಯುವ ಅವಕಾಶ ಸಿಕ್ಕಿತ್ತು, ಮೊದಲನೇ ಸಲ ನಾನು ಫೇಲಾದೆ, ಯಾಕಂದ್ರೆ ಅದು ಇಂಗ್ಲೀಷ್‌ನಲ್ಲಿತ್ತು. ನಾನು ಕನ್ನಡ ಮೀಡಿಯಂನಿಂದ ಬಂದವನು, ನಂತರ ಮುಂದಿನ ಸಲ ಪರೀಕ್ಷೆ ಕನ್ನಡ ಮೀಡಿಯಂ ನಲ್ಲಿ ಆದಾಗ ನಾನು ಪಾಸಾದೆ, ಯಾರಾದರೂ ಸಾಧ್ಯವಿಲ್ಲವೆಂದು ಹೇಳಿದರೆ ಅದನ್ನು ನಾವು ಬೇಗನೆ ಒಪ್ಪಿಕೊಳ್ಳಬಾರದು, ಅದನ್ನು ಪ್ರಶ್ನಿಸಬೇಕು ಯೋಚನೆ ಮಾಡಿ ಒಂದು ತೀರ್ಮಾನಕ್ಕೆ ಬರಬೇಕು, ಪುತಿನ ಪದ್ಯವನ್ನು ವಿಶ್ಲೇಷಿಸುತ್ತ ಗುಡಿಯಾಚೆ, ಗಡಿಯಾಚೆ, ಗಿಡದಾಚೆ ಹೋಗೋಣ ಬನ್ನಿರೋ ಹೊಸ ನಾಡಿಗೆ, ಅಂದರೆ ಫ್ರೆಂಚ್ ಕವಿ ಹೇಳಿದಂತೆ if you want to discover newland you have to leave the shore for long, ಆ ದೃಷ್ಟಿಯಲ್ಲಿ ನಾನು ಗೊರೂರನ್ನು ಬಿಟ್ಟು ಬಿಜಾಪುರದಲ್ಲಿ ಸೈನಿಕ್ ಶಾಲೆಯನ್ನು ಸೇರಿಕೊಂಡೆ ಎಂದು ಹೇಳುತ್ತಾ ಗ್ರೇಟ್ ಡಿಸ್ಕವರ್ ಕೋಲಮ್ಬಸ್ ವೆಸ್ಟ್ ಇಂಡೀಸ್ ಅನ್ನು ಆಮೇರಿಕಾ ಅನ್ನು ಕಂಡುಹಿಡಿದಿದ್ದನ್ನು ತಿಳಿಸಿದರು. Imagination rules the world, ಕೇವಲ ಕನಸನ್ನು ಕಂಡ್ರೆ ಸಾಲದು ಆ ಕನಸಿನ ಜೊತೆ ಸಾಹಸ ಇರಬೇಕು ಪರಿಶ್ರಮ ಇರಬೇಕು, ಜರ್ಮನ್ ಕವಿ ಹೇಳಿದಂತೆ dare to dream, begin it boldness as genious magic to power it, ಈ ದೃಷ್ಟಿಯಲ್ಲಿ ನಾನು ಸುಮಾರು ಕೆಲಸಗಳನ್ನು ಶುರು ಮಾಡಿದೆ, ಎಷ್ಟೋ ಬಾರಿ ನಾನು ಎಡವಿ ಬಿದ್ದೆ ಆದರೆ ಮತ್ತೆ ಎದ್ದೆ. ಹಾಗೇನೆ ಇನ್ನೊಬ್ಬ ಕವಿ ಹೇಳಿದಂತೆ the glory of man is not falling, but it is rising each time you fall, so failure is when you quit, but if you try continuously, you will succeed. ಎಂದು ತಿಳಿಸಿದರು.

ಮುಂದುವರಿದು, ಸೈನಿಕ್ ಶಾಲೆಯಲ್ಲಿ ಓದಿದ ಮೇಲೆ ತಮಗೆ ಇಂಡಿಯನ್ ಮಿಲಿಟರಿ ಅಕಾಡೆಮಿನಲ್ಲಿ ಪಾಸಾಗಿ, ವಾಯು ಸೇನೆ ಸೇರಿದ ನಂತರ ಇಂಡಿಯಾ ಬಾಂಗ್ಲಾದೇಶ್ ಯುದ್ಧದಲ್ಲಿ ಭಾಗವಹಿಸುವ ಅವಕಾಶ ಸಿಕ್ಕಿತ್ತು. ವಾಯುಸೇನೆಯಲ್ಲಿ ಸೇವೆ ಮಾಡಿದ ಬಳಿಕ ರಾಜೀನಾಮೆ ಕೊಟ್ಟು ಹುಟ್ಟೂರಿಗೆ ಮರಳಿದೆ. 20 ವರ್ಷಗಳ ಸೇವೆ ಮಾಡದ ಕಾರಣ ಪಿಂಚಣಿ ಸಿಗಲಿಲ್ಲ ಮನುಷ್ಯನಿಗೆ ಒಂದು ದೃಷ್ಟಿಕೋನ ಇರಬೇಕು Vision is the art of seeing invisible, ಬೆರ್ನಾಡ್ ಷಾ ಹೇಳುವಂತೆ you see things and say why, but dream things that never were and say why not ಆ ದೃಷ್ಟಿಯಲ್ಲಿ ನಿಮ್ಮ ಕನಸು ನನಸಾಗಬೇಕಾದರೆ, ದೃಢವಾಗಿ ನಡೆಯಬೇಕೆಂಬುದು ಮುಖ್ಯ ಎಂದರು. ಅನಂತರ ತಾವು ತಮ್ಮ ತಂದೆಯವರ ಜಮೀನು ಹೇಮಾವತಿ ನದಿಗೆ ಗೊರೂರಿನಲ್ಲಿ ಡ್ಯಾಮ್ ಕಟ್ಟಿದ ಕಾರಣ ಮುಳುಗಡೆಯಾದ್ದರಿಂದ ಪುನರ್ವಸತಿ ಯೋಜನೆಯಲ್ಲಿ ಹಳೇಬೀಡು ಸಮೀಪ ನೀಡಿದ ಬರಡು ಜಮೀನಿನಲ್ಲಿ ರೇಷ್ಮೆ ಕೃಷಿ, ದನ ಸಾಕಾಣಿಕೆ, ತೋಟದ ಕೃಷಿಯಲ್ಲಿ ಕತ್ತೆಗಳನ್ನು ಇಟ್ಟು ಬೇಸಾಯ ಮಾಡಿದ್ದನ್ನು, ಅನಂತರ ಉಡುಪಿ ಹೋಟೆಲ್ ಅನ್ನು ಇಟ್ಟಿದ್ದು, ಎಂಫಿಲ್ಡ್ ಮೋಟಾರ್ ಸೈಕಲ್ ಶಾಪ್ ನಡೆಸಿದ್ದು ಸ್ಟಾಕ್ ಬ್ರೋಕರ್ ಆಗಿದ್ದು, ಅಗ್ರಿಕಲ್ಚರ್ ಇಕ್ವಿಪ್‌ಮೆಂಟ್ ಡೀಲರ್ ಆಗಿದ್ದನ್ನು ಮುಂತಾದ ತಮ್ಮ ಜೀವನದಲ್ಲಿ ನಡೆದ ಹಾದಿಯನ್ನು ನೆನಪಿಸಿಕೊಂಡರು. ನೀವು ಏನೇ ಹೊಸ ಕೆಲಸ ಶುರು ಮಾಡಿದ ಸಂದರ್ಭದಲ್ಲಿ ಜನ ನಿಮ್ಮನ್ನು ನಿಂದನೆ, ಗೇಲಿ ಮಾಡುತ್ತಾರೆ ಆದರೆ ನೀವು ದೃತಿಗೆಡದೇ, ಈಸಬೇಕು ಇದ್ದು ಜಯಿಸಬೇಕು ಎಂಬ ಮಂತ್ರವನ್ನು ನಿಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಬೇಕು, ಆಗ ಮಾತ್ರ ನಿಮಗೆ ಜಯ ಸಿಗುತ್ತದೆ. ಗಾಂಧೀಜಿ ಅಂತಹ ಹಲವಾರು ಮಹಾಪುರುಷರು ಸಹಾ ನಿಂದನೆಗೆ ಒಳಗಾಗಿಯೇ ಮೇಲೆ ಬಂದವರು ಯಾವುದೇ ವ್ಯಕ್ತಿ ಉದ್ಯಮಶೀಲರಾಗಬೇಕಾದರೆ ಹುಮ್ಮಸ್ಸು, ಕಷ್ಟಪಡುವ ಶ್ರದ್ಧೆ, ಆಶಾವಾದ ಭಾವನೆ ಇರಬೇಕು ಎಂದು ತಿಳಿಸಿದರು.











ನಂತರ 1997ರಲ್ಲಿ ಬೆಂಗಳೂರಿನಲ್ಲಿದ್ದಾಗ ಹೆಲಿಕಾಪ್ಟರ್ ಪೈಲೆಟ್ ಜೊತೆ ಸೇರಿ ಹೆಲಿಕಾಪ್ಟರ್ ಕಂಪನಿ ಆರಂಭ ಮಾಡಿದೆ, ತದ ನಂತರ, ಒಮ್ಮೆ ಅಮೆರಿಕಾದಲ್ಲಿ ಇದ್ದಾಗ ವಿಮಾನ ಯಾನ ಮಾಡುವ ಸಂದರ್ಭದಲ್ಲಿ, ಆಮೇರಿಕಾದ ಕಾರ್ಪೆಂಟರ್ ಒಬ್ಬರು ತಮ್ಮ ಜೊತೆಯಲ್ಲಿ ಪ್ರಯಾಣಿಸುತ್ತಿದ್ದನ್ನು ಕಂಡು, ನಮ್ಮ ದೇಶದಲ್ಲಿಯೂ ಯಾಕೆ ಬಡ ಜನರು ವಿಮಾನ ಪ್ರಯಾಣ ಮಾಡಬಾರದು ಎಂಬ ಯೋಚನೆ ಬಂದಿತ್ತು. 2003 ರಲ್ಲಿ ಒಂದು ರೂಪಾಯಿ, 500 ರೂಪಾಯಿ ಏರ್ ಟಿಕೆಟ್‌ನ ಘೋಷಣೆಯೊಂದಿಗೆ ವಿಮಾನ ಕಂಪನಿಯನ್ನು ಆರಂಭಿಸಿದ್ದ ಕುತೂಹಲಕಾರಿ ವಿಷಯವನ್ನು ತಿಳಿಸುತ್ತಾ Golden age for India is not behind us but ahead of us, ಹಾಗು ಅಬ್ರಹಾಂ ಲಿಂಕನ್ ಹೇಳಿದಂತೆ Best way to predict the future is to create it ಎಂದು ಹೇಳಿ ಕ್ಯಾಪ್ಟನ್ ಗೋಪಿನಾಥ್ ತಮ್ಮ ಮಾತುಗಳನ್ನು ಮುಗಿಸಿದರು.

ಇನ್ನೋರ್ವ ಮುಖ್ಯ ಅತಿಥಿ ಐಎಫ್‌ಎಸ್ ಆಫೀಸರ್ ಡಾ. ಕೆ.ಜೆ. ಶ್ರೀನಿವಾಸ್ ಅವರು ಮಾತನಾಡಿ ಈ ಕಾರ್ಯಕ್ರಮದಲ್ಲಿ ಪೂಜ್ಯ ಗುರುಗಳ ಸಾನಿಧ್ಯದಲ್ಲಿ ಡಾ. ಎಸ್.ಎಲ್. ಭೈರಪ್ಪ ಮತ್ತು ಕ್ಯಾಪ್ಟನ್ ಗೋಪಿನಾಥ್ ಅವರಂತಹ ಗಣ್ಯರೊಂದಿಗೆ ಭಾಗಿಯಾಗಿದ್ದಕ್ಕೆ ಸಂತಸ ವ್ಯಕ್ತಪಡಿಸಿದರು. ನವದೆಹಲಿ ನಾಡಪ್ರಭು ಕೆಂಪೇಗೌಡ ಫೌಂಡೇಶನ್‌ನ ಅಧ್ಯಕ್ಷರಾದ ಡಿಸಿಪಿ ಶ್ರೀ ಬಿ.ಎಲ್. ಸುರೇಶ್ ಅವರು ಮಾತನಾಡಿ ಫೌಂಡೇಶನ್ ವತಿಯಿಂದ ನಡೆಸುತ್ತಿರುವ ಕಾರ್ಯಕ್ರಮಗಳ ಬಗ್ಗೆ ಪಕ್ಷಿ ನೋಟ ನೀಡುತ್ತಾ ತಮ್ಮ ಫೌಂಡೇಶನ್ ಉಗಮಕ್ಕೆ ಕಾರಣ, ಅದರ ಕಾರ್ಯ ಮತ್ತು ಮುಂದಿನ ಯೋಜನೆಗಳನ್ನು ವಿವರಿಸಿದರು. ಫೌಂಡೇಶನ್‌ನ ಅಹ್ವಾನವನ್ನು ಸ್ವೀಕರಿಸಿ ಅಭಿನಂದನೆ ಹಾಗು ಪ್ರಶಸ್ತಿ ಸ್ವೀಕರಿಸಿದ ಡಾ. ಎಸ್. ಎಲ್. ಭೈರಪ್ಪ ಮತ್ತು ಕ್ಯಾಪ್ಟನ್ ಜಿ.ಆರ್. ಗೋಪಿನಾಥ್ ಅವರಿಗೆ ಧನ್ಯವಾದಗಳನ್ನು ಪರಮಪೂಜ್ಯ ಸ್ವಾಮೀಜಿ ಅವರಿಗೆ ವಂದನೆಗಳನ್ನು ತಿಳಿಸಿದರು. ಮೆರಿಟ್ ಆಧಾರಿತ ಒಂದರಿಂದ 9ನೇ ತರಗತಿಯ ಅರ್ಹ ವಿದ್ಯಾರ್ಥಿಗಳಿಗೆ ಪುರಸ್ಕಾರ ಮತ್ತು ಆರ್ಥಿಕ ಅವಶ್ಯಕತೆ ಇರುವ ಮಕ್ಕಳಿಗೆ ವಿದ್ಯಾರ್ಥಿ ವೇತನವನ್ನು ಅತಿಥಿಗಳ ಸಮ್ಮುಖದಲ್ಲಿ ವಿತರಣೆ ಮಾಡಲಾಯಿತು.

ಕಾರ್ಯಕ್ರಮಕ್ಕೆ ಆಗಮಿಸಿದ್ದ ಎಲ್ಲರಿಗೂ ಫೌಂಡೇಶನ್‌ನ ಪರವಾಗಿ ಗೌರವ ಖಜಾಂಚಿಗಳಾದ ಡಾ. ಬಿ.ಟಿ. ಚಿದಾನಂದಮೂರ್ತಿ ಅವರು ವಂದನಾರ್ಪಣೆ ಮಾಡಿದರು. ಸಭಾ ಕಾರ್ಯಕ್ರಮದ ಮೊದಲು ಮತ್ತು ನಂತರ ಸ್ಥಳೀಯ ಮಕ್ಕಳಿಂದ ಮೂಡಿಬಂದ ವಿವಿಧ ಕಲಾ ಪ್ರದರ್ಶನ ಮತ್ತು ದಾವಣಗೆರೆಯ ನಯನ ಕಲಾ ತಂಡದ ಕಲಾವಿದರಿಂದ ಸುಮಧುರ ಗಾಯನ ಮತ್ತು ನೃತ್ಯ ಪ್ರಸ್ತುತಿಗಳು ತುಂಬಿದ ಸಭಾಂಗಣದಲ್ಲಿ ಆಸೀನರಾಗಿದ್ದ ಸಭಿಕರ ಮನರಂಜಿಸಿದವು. ನಂತರ ರುಚಿಕರ ಭೋಜನವನ್ನು ಸವಿದು ದೆಹಲಿ ಕನ್ನಡಿಗರು ಖುಷಿಪಟ್ಟರು. ■

***ಅಭಿಮತ ವರದಿ***

ಕೃಪೆ : ನಾಡಪ್ರಭು ಕೆಂಪೇಗೌಡ ಫೌಂಡೇಶನ್, ನವದೆಹಲಿ

# ನವದೆಹಲಿಯ ಕರ್ನಾಟಕ ಭವನದಲ್ಲಿ ಕನಕದಾಸ ಜಯಂತಿ ಆಚರಣೆ



ನವದೆಹಲಿಯ ಕರ್ನಾಟಕ ಭವನ–1, ಕಾವೇರಿಯ ಕಟ್ಟಡದಲ್ಲಿ ದಿನಾಂಕ 30.11.2023 ರಂದು ಕನಕದಾಸ ಜಯಂತಿಯನ್ನು ಬಹಳ ಅರ್ಥಪೂರ್ಣವಾಗಿ ಆಚರಿಸಲಾಯಿತು. ಕರ್ನಾಟಕ ಭವನದ ಅಪರ ಮುಖ್ಯ ಕಾರ್ಯದರ್ಶಿ(ಸಮನ್ವಯ) ಶ್ರೀಮತಿ ವಂದನಾ ಗುರ್ನಾನಿ, ಭಾ.ಆ.ಸೇ ಅವರು ಕನಕದಾಸರವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ, ನಮನ ಸಲ್ಲಿಸಿದರು. ಈ ಸಂದರ್ಭದಲ್ಲಿ ಮಾಜಿ ರಾಜ್ಯಸಭಾ ಸದಸ್ಯರು, ಮಾಜಿ ಶಾಸಕರು, ಕರ್ನಾಟಕ ಭವನದ ನಿವಾಸಿ ಆಯುಕ್ತರಾದ ಶ್ರೀಮತಿ ಎಂ.ಇಮ್ ಕೊಂಗ್ಲ ಜಮೀರ್, ಭಾ. ಆ.ಸೇ. ಅಪರ ನಿವಾಸಿ ಆಯುಕ್ತೆ ಆಕೃತಿ ಬನ್ಸಲ್ ಭಾ. ಆ.ಸೇ.ಹಾಗೂ ನಿವಾಸಿ ಆಯುಕ್ತರವರ ಕಚೇರಿಯ ಮತ್ತು ಕರ್ನಾಟಕ ಭವನದ ಅಧಿಕಾರಿಗಳು ಹಾಗು ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.

***ಎಸ್. ರಮೇಶ್,*** ಕರ್ನಾಟಕ ಭವನ

# ನವದೆಹಲಿ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಸಂಘದ ವತಿಯಿಂದ ಸ್ವಾತಂತ್ರ್ಯ ಹೋರಾಟಗಾರ ಸಂಗೊಳ್ಳಿ ರಾಯಣ್ಣ ಅವರ ಹುತಾತ್ಮ ದಿನಾಚರಣೆ





ದೆಹಲಿ ಕನ್ನಡ ಹಿರಿಯ ಮಾಧ್ಯಮಿಕ ಶಾಲೆಯಲ್ಲಿ ದಿ. 26.01.2024 ಶುಕ್ರವಾರದಂದು ಭಾರತದ 75ನೇ ಗಣರಾಜ್ಯೋತ್ಸವ ದಿನಾಚರಣೆ ಸಂದರ್ಭ, ಅದೇ ದಿನ, ಬ್ರಿಟೀಷರ ವಿರುದ್ಧ ಸ್ವಾತಂತ್ರ್ಯ ಸಂಗ್ರಾಮದ ಮೊದಲ ಕಿಡಿ ಹಚ್ಚಿ, ನಡೆಸಿದ ಹೋರಾಟದ ದಾರಿಯಲ್ಲಿ ಹುತಾತ್ಮರಾದ ಸಂಗೊಳ್ಳಿ ರಾಯಣ್ಣ ಅವರಿಗೆ ಇಲ್ಲಿನ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಸಂಘ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ನಮನ ಸಲ್ಲಿಸಲಾಯಿತು.

ಈ ಸಂಧರ್ಭದಲ್ಲಿ, ಸಂಸತ್ ಭವನದ ಜಂಟಿ ನಿರ್ದೇಶಕರಾಗಿರುವ ಶ್ರೀ ಎನ್.ಪಿ. ಚಂದ್ರಶೇಖರ ಅವರು ತಮ್ಮ ವಿಚಾರ ಮಂಡಿಸುತ್ತಾ, ಕನ್ನಡಿಗರು ಸಾಹಿತ್ಯ, ಕಲೆ, ಸಂಗೀತದಲ್ಲಿ ಸಾಧನೆ ಮೆರೆದ ಶ್ರೀಮಂತರು ಒಂದು ಕಡೆಯಾದರೆ ಇನ್ನೊಂದೆಡೆ ಪರಾಕ್ರಮ, ಸಾಹಸ, ಶೌರ್ಯ ಮತ್ತು ಕೆಚ್ಚೆದೆಯ ಸ್ವಾಭಿಮಾನಿಗಳು ಎಂದು ಇತಿಹಾಸ ಸಾಬೀತು ಪಡಿಸುತ್ತದೆ. ಕಿತ್ತೂರಿನ ಸಂಸ್ಥಾನದ ರಾಣಿ ಚೆನ್ನಮ್ಮನವರ ಬಲಗೈ ಭಂಟನಾಗಿ ಸೈನ್ಯದ ಮುಂದಾಳತ್ವ ವಹಿಸಿ ಬ್ರಿಟಿಷರ ಹೆಡೆಮುರಿ ಕಟ್ಟಿದ್ದ ದಿಟ್ಟ, ಧೀರ ಸಂಗೊಳ್ಳಿ ರಾಯಣ್ಣ ಅವರು ಕೊನೆಗೆ ತನ್ನವರು ರಚಿಸಿದ ಷಡ್ಯಂತ್ರಕ್ಕೆ ಬಲಿಯಾದಂತಹ ಘಟನೆ ಇಂದಿಗೂ ಎಲ್ಲ ಜನಮಾನಸದಲ್ಲಿ ಉಳಿದಿದೆ. ಅಂದು ನಂಬಿದವರು ಮೋಸ ಮಾಡಿದರು. ಎಲ್ಲಾ ಕಾಲದಲ್ಲೂ ಅಂತಹ ಜನ ಸಿಗುತ್ತಾರೆ ಆದರೆ, ಮನುಷ್ಯ ತನ್ನ ಎಚ್ಚರ ತಪ್ಪಬಾರದು ಎಂದು ತಿಳಿಸಿದರು. ದೆಹಲಿ ಕರ್ನಾಟಕ ಸಂಘದ ಮಾಜಿ ಪ್ರಧಾನ ಕಾರ್ಯದರ್ಶಿಗಳಾದ ಶ್ರೀ ಆರ್. ರೇಣುಕುಮಾರ್ ಅವರು ಸಂಗೊಳ್ಳಿ ರಾಯಣ್ಣ ಅವರ ಜನ್ಮದಿನ ಆಗಸ್ಟ್ 15 ಮತ್ತು ಹುತಾತ್ಮರಾದ ದಿನ ಜನವರಿ 26. ಇದು ಆಕಸ್ಮಿಕವಾದರೂ ವಿಶೇಷವಾಗಿ ಆಚರಿಸುವಂತಹ ದಿನಗಳಾಗಿವೆ ಎಂದು ನುಡಿದರು. ಜೆ.ಎನ್.ಯು.ನ ಪ್ರಾಧ್ಯಾಪಕರಾದ ಡಾ. ವೆಂಕಟಾಚಲ ಹೆಗಡೆ ಅವರು ಮಾತನಾಡಿ, ಅಂತಹ ಶ್ರೇಷ್ಠ ಸೇನಾನಿಗಳ ನಿಷ್ಠೆಯಿಂದ ದೇಶ ಬಹು ಬೇಗ ಸ್ವಾತಂತ್ರ್ಯ ಪಡೆಯುವಂತೆ ಆಯಿತು ಎಂದರು. ಸಂಗೊಳ್ಳಿ ರಾಯಣ್ಣ ಸಂಘದ ಗೌರವಾಧ್ಯಕ್ಷರಾದ ಡಾ.ಮುನಿರಾಜು ಅವರು ಇದೇ ಸಂಧರ್ಭದಲ್ಲಿ ರಾಯಣ್ಣ ಅವರನ್ನು ವಿಶೇಷವಾಗಿ ಅಂಕಿ–ಅಂಶಗಳ ಸಮೇತ ಮತ್ತು ಕಾಲಘಟ್ಟಗಳ ಘಟನೆಗಳಿಂದ ನೆನಪಿಸಿದ ರೀತಿ ತುಂಬಾ ವಿಶೇಷ ಮತ್ತು ವಿಸ್ತೃತವಾಗಿತ್ತು. ಕಾರ್ಯಕ್ರಮಕ್ಕೆ ಶ್ರೀಮತಿ ನೇತ್ರಕುಮಾರ್ ಅವರ ಪ್ರಾರ್ಥನೆ ಮೂಲಕ ಚಾಲನೆ ನೀಡಲಾಯಿತು. ಅತಿಥಿ ಗಣ್ಯರು ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಅವರ ಭಾವಚಿತ್ರಕ್ಕೆ ಪೂಜೆಸಲ್ಲಿಸಿ, ದೀಪ ಬೆಳಗುವ ಮೂಲಕ ಕಾರ್ಯಕ್ರಮ ಉದ್ಘಾಟಿಸಿದರು.

ಕಾರ್ಯಕ್ರಮದಲ್ಲಿ ಸಂಘದ ಅಧ್ಯಕ್ಷರಾದ ಆರ್. ಮಹದೇವ್, ಕಾರ್ಯದರ್ಶಿಗಳಾದ ಶ್ರೀ ಎಸ್.ಡಿ. ಶ್ರೀನಿವಾಸ್, ದೆಹಲಿ ಕನ್ನಡ ಶಿಕ್ಷಣ ಸಂಸ್ಥೆ ಅಧ್ಯಕ್ಷರಾದ ಶ್ರೀ ಬಿ.ಕೆ. ಬಸವರಾಜು, ಗೌರವ ಕಾರ್ಯದರ್ಶಿ ಶ್ರೀ ಟಿ.ಎಂ. ಮೈಲಾರಪ್ಪ, ದೆಹಲಿ ಕರ್ನಾಟಕ ಸಂಘದ ಕಾರ್ಯದರ್ಶಿಗಳಾದ ಶ್ರೀ ರಾಧಾಕೃಷ್ಣ, ಸಮಿತಿ ಸದಸ್ಯ ಶ್ರೀ ನವೀನ ಕುಮಾರ್.ವಿ, ಹಿರಿಯರಾದ ಶ್ರೀ ವಿ.ವಿ. ಬಿರಾದಾರ, ಶ್ರೀ ರಾಜಣ್ಣ ಬಿರಾದರ, ಹಾಗು ಅನೇಕ ದೆಹಲಿ ಕನ್ನಡಿಗರು ಉಪಸ್ಥಿತರಿದ್ದರು.

ಶ್ರೀಮತಿ ಆಶಾ ಮಹದೇವ ಅವರ ಸಮಯೋಚಿತ ಮತ್ತು ಭಾಷಣಗಳ ಮಧ್ಯೆ ರಾಯಣ್ಣ ಕುರಿತ ದೇಶಭಕ್ತಿ ಗೀತೆಗಳ ಸಮ್ಮಿಲನದ ನಿರೂಪಣೆ ಅದ್ಭುತವಾಗಿ ಮೂಡಿಬಂದಿತು. ಹಾಡಿನ ಮುಖಾಂತರ ಶ್ರೀಮತಿ ಮಮತಾ ಶಿವರಾಂ, ಶ್ರೀ ಶಿವರಾಂ, ಶ್ರೀಮತಿ ನೇತ್ರಾ ಕುಮಾರ್, ಕು. ಅವನಿ ನೆಲ್ಲಿ ಅವರು ಸ್ವಾತಂತ್ರ್ಯ ಹೋರಾಟ ಮತ್ತು ಸಂಗೊಳ್ಳಿ ರಾಯಣ್ಣ ಅವರನ್ನು ನೆನೆದು ಕಾರ್ಯಕ್ರಮದ ಮೆರುಗನ್ನು ಹೆಚ್ಚಿಸಿದರು.

ದೆಹಲಿ ಕನ್ನಡ ಶಾಲೆಯ ಜಿ.ಪಿ.ರಾಜರತ್ನಂ ಸಭಾಂಗಣದಲ್ಲಿ, ಕೊರೆಯುವ ಚಳಿಯ ಮಧ್ಯೆಯೂ ಸುಮಾರು ಎರಡೂವರೆ ಗಂಟೆಗಳ ಕಾಲ ನಡೆದ ಈ ಕಾರ್ಯಕ್ರಮದಲ್ಲಿ ನೂರಕ್ಕೂ ಹೆಚ್ಚು ದೆಹಲಿ ಕನ್ನಡಿಗರು ಸೇರಿ ಯಶಸ್ವಿಗೊಳಿಸಿದ್ದು ಸ್ವಾತಂತ್ರ್ಯ ಸೇನಾನಿಗೆ ಸಂದ ಗೌರವವಾಗಿತ್ತು. ನಂತರ ವಿಶೇಷ ಪ್ರಸಾದ ವಿನಿಯೋಗ ಮಾಡಲಾಯಿತು.

***ಎಸ್.ಡಿ. ಶ್ರೀನಿವಾಸ್,***

ಪ್ರಧಾನ ಕಾರ್ಯದರ್ಶಿ, ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಸಂಘ, ನವದೆಹಲಿ



**ದೆಹಲಿ ಕನ್ನಡ ಶಾಲೆಯಲ್ಲಿ 30.11.2023ರಂದು ನವದೆಹಲಿ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಸಂಘದ ವತಿಯಿಂದ ಆಯೋಜನೆಗೊಂಡ ದಾಸ ಶ್ರೇಷ್ಠ ಕನಕದಾಸ ಜಯಂತಿ ಆಚರಣೆಯ ಸಂದರ್ಭ ಸಂಘದ ಪದಾಧಿಕಾರಿಗಳು, ಮುಖ್ಯ ಅತಿಥಿಗಳು ಹಾಗೂ ಭಾಗವಹಿಸಿದ್ದ ದೆಹಲಿ ಕನ್ನಡಿಗರ ಜೊತೆ ಸಮೂಹ ದೃಶ್ಯ**

# ಸ್ನೇಹಾ ದೆಹಲಿ ಕನ್ನಡ ಲೇಡೀಸ್ ಅಸೋಸಿಯೇಶನ್ ನ ವತಿಯಿಂದ ಕ್ರಿಸ್‌ಮಸ್ ಹಬ್ಬದ ಆಚರಣೆ



ಶ್ರೀಮತಿ ಸರೋಜಾ ಮಾಧವ ಅವರ ಅಧ್ಯಕ್ಷತೆಯಲ್ಲಿ ಸ್ನೇಹಾ ದೆಹಲಿ ಕನ್ನಡ ಲೇಡೀಸ್ ಅಸೋಸಿಯೇಶನ್‌ನ ಸದಸ್ಯರು 20.12.2023 ರಂದು ಅತ್ಯಂತ ಉತ್ಸಾಹದಿಂದ ಕ್ರಿಸ್‌ಮಸ್ ಹಬ್ಬವನ್ನು ಆಚರಿಸಿದರು. ದೆಹಲಿ ಕರ್ನಾಟಕ ಸಂಘದಲ್ಲಿರುವ ಗ್ರಂಥಾಲಯ ಕೊಠಡಿಯನ್ನು ಆಕಾಶಬುಟ್ಟಿಗಳು, ಕ್ರಿಸ್‌ಮಸ್ ಟ್ರೀ ಮತ್ತು ವಿವಿಧ ಕ್ರಿಸ್‌ಮಸ್ ಸಂಬಂಧಿತ ವಸ್ತುಗಳಿಂದ ಅಲಂಕರಿಸಲಾಗಿತ್ತು. ಎಲ್ಲಾ ಗೌರವಾನ್ವಿತ ಸದಸ್ಯರು ಕೆಂಪು ಬಣ್ಣದ ವಸ್ತ್ರಗಳನ್ನು ಧರಿಸಿದ್ದರು. ಅಸೋಸಿಯೇಶನ್‌ನ ಖಜಾಂಚಿಗಳಾದ ಶ್ರೀಮತಿ ಅಶ್ವಿನಿ ಬಿ.ಎಸ್. ಸಾಂತಾಕ್ಲಾಸ್ ವೇಷ ಧರಿಸಿ ಸಮಾರಂಭದ ವಿಶೇಷ ಆಕರ್ಷಣ ಬಿಂದುವಾಗಿದ್ದರು. ಸದಸ್ಯೆ ಶ್ರೀಮತಿ ದೀನಾ ಜಾಯ್ಸ್ ಅವರು ಲಾರ್ಡ್ ಜೀಸಸ್ ಕ್ರೈಸ್ಟ್ ಅವರ ಜನನದ ಹಾಗು ಜೀವನದ ಬಗ್ಗೆ ಸಂಘದ ಸದಸ್ಯರಿಗೆ ವಿವರಿಸಿದರು. ಸದಸ್ಯರೆಲ್ಲರೂ ಜಿಂಗಲ್ ಬೆಲ್ಸ್ ಹಾಡನ್ನು ಹಾಡಿ ಸಂತಸಪಟ್ಟರು. ನಮ್ಮ "ಸ್ನೇಹಾ"ದ ಸದಸ್ಯರಾದ ಶ್ರೀಮತಿ ದೀನಾ ಜಾಯ್ಸ್, ಶ್ರೀಮತಿ ರತ್ನಾ, ಶ್ರೀಮತಿ ನಾಗವೇಣಿ ಮತ್ತು ಶ್ರೀಮತಿ ಶೋಭಾ ಗೌಡ ಅವರು ಪ್ಲಮ್ ಕೇಕ್, ಮನೆಯಲ್ಲಿ ತಯಾರಿಸಿದ ಕೇಕ್, ಸಿಹಿ ತಿಂಡಿಗಳು ಮತ್ತು ಚಾಕಲೇಟುಗಳನ್ನು ಕ್ರಮವಾಗಿ ಕೊಡುಗೆಯಾಗಿ ಎಲ್ಲಾ ಸದಸ್ಯರಿಗೆ ವಿತರಿಸಿದರು. ಶ್ರೀಮತಿ ಲಲಿತಾ ಸುದೇಶ್ ಅವರು ಎಲ್ಲಾ ಸದಸ್ಯರಿಗೆ ಮಧ್ಯಾಹ್ನದ ಊಟದ ವಿಶೇಷ ವ್ಯವಸ್ಥೆ ಮಾಡಿ ಗಮನ ಸೆಳೆದರು. ಸದಸ್ಯರು ಪರಸ್ಪರ ಕ್ರಿಸ್‌ಮಸ್ ಮತ್ತು ಹೊಸ ವರ್ಷದ ಶುಭಾಶಯಗಳನ್ನು ಕೋರಿ ಸಾಮೂಹಿಕ ಭಾವಚಿತ್ರ ತೆಗೆದುಕೊಳ್ಳುವುದರ ಮೂಲಕ ಸಂಭ್ರಮಿಸಿದರು.

*ಶ್ರೀಮತಿ ಶೋಭಾ ಗೌಡ*
ಕಾರ್ಯದರ್ಶಿ
ಸ್ನೇಹಾ ದೆಹಲಿ ಕನ್ನಡ ಲೇಡೀಸ್ ಅಸೋಸಿಯೇಶನ್, ನವದೆಹಲಿ

## ರಾಷ್ಟ್ರ ರಾಜಧಾನಿ ದೆಹಲಿಯ ಕನ್ನಡ ಶಾಲೆಯಲ್ಲಿ ಮೊಳಗಿದ ಕನ್ನಡದ ಕಹಳೆ

ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಯಲ್ಲಿ ದಿನಾಂಕ 29.11.2023ರಂದು ಆಚರಿಸಿದ 68ನೇ ಕರ್ನಾಟಕ ರಾಜ್ಯೋತ್ಸವ ಕಾರ್ಯಕ್ರಮದಲ್ಲಿ ಪ್ರಾಧ್ಯಾಪಕರಾದ ಪ್ರೊ. ವಿಶ್ವನಾಥ ಅವರು ದೀಪ ಬೆಳಗಿಸಿ, ಕನ್ನಡ ತಾಯಿ ಭುವನೇಶ್ವರಿಗೆ ಪುಷ್ಪಾರ್ಚನೆಗೈದರು. ಅವರು ಮಾತನಾಡಿ ಕುವೆಂಪು ಅವರು ಬರೆದ ಭಾರತ ಜನನಿಯ ತನುಜಾತೆ ಎಂಬ ಭಾರತೀಯತೆಯ, ಕರ್ನಾಟಕತೆಯ ಕವಿತೆಯನ್ನು ಕರ್ನಾಟಕ ವಿಧಾನಸಭೆ ನಾಡಗೀತೆಯಾಗಿ ಅಂಗೀಕರಿಸಿತು. ಜಿ.ಪಿ. ರಾಜರತ್ನಂ ಹೇಳಿರುವಂತೆ ಮನುಷ್ಯನಿಗೆ ಪ್ರೀತಿಯನ್ನು, ಸಹಬಾಳ್ವೆಯನ್ನು ಸಮಾನತೆಯನ್ನು ಕೊಡುವ ಶಕ್ತಿ ಕನ್ನಡ ಭಾಷೆಗಿದೆ. ಕನ್ನಡ ಜನಸಾಮಾನ್ಯರಲ್ಲಿದೆ ದೆಹಲಿ ಕನ್ನಡಿಗರಲ್ಲಿದೆ ಕನ್ನಡವನ್ನು ಕಲಿಯಿರಿ, ಕನ್ನಡದಲ್ಲಿ ಬರೆಯಿರಿ, ಕನ್ನಡ ಸಾಹಿತ್ಯವನ್ನು ಉಳಿಸಿ, ಬೆಳೆಸಿ ಎಂದರು.

ಅಧ್ಯಕ್ಷತೆ ವಹಿಸಿದ್ದ ಸಂಸ್ಥೆಯ ಉಪಾಧ್ಯಕ್ಷೆ ಶ್ರೀಮತಿ ಎಂ. ವೀಣಾ ಜಗದೀಶ್ ಅವರು ಮಾತನಾಡಿ ನಮ್ಮೆಲ್ಲರ ಹೆಮ್ಮೆಯ ಪ್ರತೀಕವಾದ, ದೆಹಲಿಯಲ್ಲಿ ಕನ್ನಡದ ಅನನ್ಯತೆಯ ಪ್ರತಿರೂಪವಾದ ನಮ್ಮ ಸಂಸ್ಥೆಯು ಪ್ರತಿವರ್ಷವೂ ಕರ್ನಾಟಕ ರಾಜ್ಯೋತ್ಸವವನ್ನು ಅರ್ಥಪೂರ್ಣವಾಗಿ ಆಚರಿಸಿಕೊಂಡು ಬರುತ್ತಿದೆ. ಕನ್ನಡವೆಂಬ ಚಪ್ಪರದಡಿಯಲ್ಲಿ ಕನ್ನಡ ತಾಯಿಯ ಮಕ್ಕಳಾದ ನಾವೆಲ್ಲರೂ ಇಲ್ಲಿ ಒಂದಾಗಿ ಬದುಕುತ್ತಿದ್ದೇವೆ. ಕನ್ನಡ ನಾಡು–ನುಡಿಗಾಗಿ ಇನ್ನಷ್ಟು ಶ್ರಮಿಸಲು, ಸೇವೆಗೈಯಲು ನಾವೆಲ್ಲರೂ ಜೊತೆಗೂಡಿ ಹೆಜ್ಜೆ ಇಡೋಣ ಎಂದರು.

ಶಾಲಾ ಆವರಣದ ಸುತ್ತಲೂ ರಾರಾಜಿಸುತ್ತಿದ್ದ ಕನ್ನಡ ಬಾವುಟ, ಕೊರಳಲ್ಲಿ ಮಿನುಗುತ್ತಿದ್ದ ಕನ್ನಡ ಶಾಲುಗಳ ನಡುವೆ ಶಾಲಾ ಉಪ ಪ್ರಾಂಶುಪಾಲೆ ಶ್ರೀಮತಿ ಪ್ರೇಮಲತಾ ಬಿ. ಅವರಿಂದ ಚನ್ನವೀರ ಕಣವಿ ಅವರ 'ಹೆಸರಾಯಿತು ಕರ್ನಾಟಕ ಉಸಿರಾಗಲಿ ಕನ್ನಡ' ಕವಿತೆಯ ಸುಶ್ರಾವ್ಯ ಪ್ರಸ್ತುತಿ, ಶಿಕ್ಷಕ ವೃಂದದಿಂದ ಮೊಳಗಿದ ಕನ್ನಡ ನಾಡಗೀತೆ, ವಿದ್ಯಾರ್ಥಿ ಕೀರ್ತನ್ ಪಿ. ಅವರ ರಾಜ್ಯೋತ್ಸವ ಸಂದೇಶ, ಕು. ಇಶಿಕಾ ಮತ್ತು ಕು. ಸೈನಾ ಅವರ ವಿಶ್ವವಿನೂತನ ವಿದ್ಯಾಚೇತನ ಹಾಡಿಗೆ ನೃತ್ಯ, ಶಾಲಾ ಕನ್ನಡ ಪೋಷಕರಿಂದ ಪ್ರಸ್ತುತವಾದ ಎನ್.ಎಸ್. ಲಕ್ಷ್ಮೀನಾರಾಯಣ ಭಟ್ ಅವರ ಜಯ ಜಯ ಜಯ ಕನ್ನಡ ರಾಜೇಶ್ವರಿ ಹಾಡು ಕನ್ನಡಾಭಿಮಾನಕ್ಕೆ ಸಾಕ್ಷಿಯಾಯಿತು. ಇದೇ ಸಂದರ್ಭದಲ್ಲಿ 2022–23ನೇ ಶೈಕ್ಷಣಿಕ ಸಾಲಿನ ಹತ್ತನೇ ತರಗತಿಯ ಕನ್ನಡ ವಿದ್ಯಾರ್ಥಿಗಳಲ್ಲಿ ಅತೀ ಹೆಚ್ಚು ಅಂಕ ಪಡೆದ ಕು. ಭುವನ್ ಸೂರಜ್ ಅವರನ್ನು ಸಂಸ್ಥೆಯ ವತಿಯಿಂದ ಅಭಿನಂದಿಸಲಾಯಿತು.

ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಯ ಗೌರವ ಕಾರ್ಯದರ್ಶಿಗಳು, ಆಡಳಿತ ಸಮಿತಿ ಸದಸ್ಯರುಗಳು, ಶಾಲೆಯ ಪ್ರಾಂಶುಪಾಲರು, ಶಾಲಾ ವಿದ್ಯಾರ್ಥಿಗಳು, ಶಿಕ್ಷಕ–ಶಿಕ್ಷಕೇತರ ವೃಂದದವರು, ಕನ್ನಡ ಪೋಷಕರು ಹಾಗೂ ಕನ್ನಡಾಭಿಮಾನಿಗಳು ಉಪಸ್ಥಿತರಿದ್ದರು. ದೆಹಲಿ ಕನ್ನಡ ಹಿರಿಯ ಮಾಧ್ಯಮಿಕ ಶಾಲೆಯ ಗೌರವ ವ್ಯವಸ್ಥಾಪಕ ಶ್ರೀ ಉಮೇಶ್ ಬಿ.ಆರ್. ಸ್ವಾಗತಿಸಿದರು. ಕನ್ನಡ ಶಿಕ್ಷಕ ಶ್ರೀ ಅರವಿಂದ ಬಿಜ್ಜೆ ಕಾರ್ಯಕ್ರಮ ನಿರೂಪಿಸಿದರು. ಸಂಸ್ಥೆಯ ಆಡಳಿತ ಸಮಿತಿ ಸದಸ್ಯ ಶ್ರೀ ಗಿರೀಶ್ ಎಸ್. ವಂದನಾರ್ಪಣೆ ನಡೆಸಿಕೊಟ್ಟರು. ■





# ದೆಹಲಿ ಕನ್ನಡ ಹಿರಿಯ ಮಾಧ್ಯಮಿಕ ಶಾಲಾ ವಾರ್ಷಿಕೋತ್ಸವ ಸಮಾರಂಭ



ದೆಹಲಿ ಕನ್ನಡ ಹಿರಿಯ ಮಾಧ್ಯಮಿಕ ಶಾಲೆಯಲ್ಲಿ ಶಾಲಾ ವಾರ್ಷಿಕೋತ್ಸವ ಸಮಾರಂಭವನ್ನು 09.12.2023 ರಂದು ಆಯೋಜಿಸಲಾಗಿತ್ತು. ಈ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಶಿಕ್ಷಣ ನಿರ್ದೇಶನಾಲಯ ಜೆಎನ್‌ಸಿಟಿ ದೆಹಲಿ ಇದರ ನಿರ್ದೇಶಕರಾದ ಐಎಎಸ್ ಅಧಿಕಾರಿ ಶ್ರೀ ಹಿಮಾಂಶು ಗುಪ್ತಾ ಅವರು ಮಾತನಾಡಿ ದೆಹಲಿಯ ಅನುದಾನಿತ ಶಾಲೆಗಳಲ್ಲಿ ದೆಹಲಿ ಕನ್ನಡ ಶಾಲೆಯು ಅತ್ಯುತ್ತಮವಾದುದು ಎಂದು ಹೇಳಿದರು.

ಮಕ್ಕಳನ್ನು ಸ್ಪರ್ಧಾತ್ಮಕವಾಗಿ ಅಲ್ಲ ಗುಣಾತ್ಮಕವಾಗಿ ಬೆಳೆಸಿ. ಮಗುವಿನ ಸರ್ವತೋಮುಖ ಬೆಳವಣಿಗೆಯಲ್ಲಿ ಪೋಷಕರ ಪಾತ್ರ ಅತ್ಯಂತ ಮಹತ್ವದ್ದು, ಆರು ಗಂಟೆ ಶಾಲೆಯಲ್ಲಿ, ಉಳಿದ ಸಮಯವನ್ನು ಮನೆಯಲ್ಲಿ ಕಳೆಯುವ ಮಗುವಿನ ಜೊತೆ ಎರಡು ಗಂಟೆಗಳ ಕಾಲ ಕುಳಿತು ಎಳವೆಯಲ್ಲಿಯೇ ಮಗುವಿನ ಬಗ್ಗೆ ತಾಯಿ ಅಥವಾ ತಂದೆ ಗಮನ ನೀಡಬೇಕಾಗಿರೋದು ಬಹಳ ಅಗತ್ಯವಾಗಿದೆ, ವಿದ್ಯಾರ್ಥಿಗಳು ಎಂದಿಗೂ ತಮ್ಮ ಹಿನ್ನೆಲೆಯನ್ನೂ, ಪರಿಸ್ಥಿತಿಯನ್ನೂ ಯೋಚಿಸದೆ ಭವಿಷ್ಯದಲ್ಲಿ ಸಾಧಿಸುವಂತಹ ಕಾರ್ಯಗಳ ಬಗ್ಗೆ ಉತ್ಸುಕರಾಗಬೇಕು ಎಂದು ಹೇಳಿದರು.

ಸಮಾರಂಭವನ್ನು ದೀಪ ಬೆಳಗಿಸಿ ಉದ್ಘಾಟಿಸಿ ಮಾತನಾಡಿದ ಕನ್ನಡದ ಖ್ಯಾತ ಬರಹಗಾರ್ತಿ ಡಾ. ಶುಭಶ್ರೀ ಪ್ರಸಾದ್ ಅವರು ನಮ್ಮ ನೆಲದ ಸಂಸ್ಕೃತಿಯನ್ನು ನಮ್ಮ ಎದೆಯ ಭಾಷೆಯನ್ನು ಬಿಂಬಿಸುವಂತಹ ಕನ್ನಡ ಭಾಷೆಯನ್ನು ಬೆಳೆಸುವ ಕಡೆ ಗಮನಹರಿಸಬೇಕು. ರಾಷ್ಟ್ರ ರಾಜಧಾನಿಯಲ್ಲಿ ಕನ್ನಡದ ಒಲವನ್ನು ಶಿಕ್ಷಣದ ಮೂಲಕ ಕನ್ನಡಿಗರಲ್ಲಿಯೂ ಕನ್ನಡೇತರರಲ್ಲಿಯೂ ಕನ್ನಡ ಭಾಷೆಯ ಸಿರಿವಂತಿಕೆಯನ್ನು ಕಲಿಸುತ್ತಿರುವ ತಿಳಿಸುತ್ತಿರುವ ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಗೆ ಅಭಿನಂದನೆಗಳನ್ನು ಅರ್ಪಿಸುತ್ತೇನೆ ಎಂದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಯ ಅಧ್ಯಕ್ಷರಾದ ಶ್ರೀ ಬಿ.ಕೆ. ಬಸವರಾಜು ಅವರು ಮಾತನಾಡಿ ಉಪಸ್ಥಿತರಿರುವ ದೆಹಲಿ ಶಿಕ್ಷಣ ಇಲಾಖೆಯ ಉನ್ನತ ಅಧಿಕಾರಿ ಅವರ ಸಹಕಾರದಿಂದ ಶಾಲೆಯಲ್ಲಿ ನೇಮಕಾತಿ ಮಾಡಿದ ಮೂರು ಹುದ್ದೆಗಳಿಗೆ ಸರಕಾರದ ಅನುಮೋದನೆ ದೊರೆತಿದೆ. ಖಾಲಿಯಿರುವ ಹುದ್ದೆಗಳನ್ನು ಭರ್ತಿಗೊಳಿಸಲು ಅವರ ಸಹಕಾರ ಅಗತ್ಯವಾಗಿದೆ. ಕರ್ನಾಟಕ ಬ್ಯಾಂಕ್ ಮತ್ತು ಭಾರತಿ ಎಕ್ಸಾ ಲೈಫ್ ಇನ್ಶೂರೆನ್ಸ್ ಕಂಪೆನಿಯ ಸಹಕಾರದಿಂದ ಶಾಲಾ ಮೊದಲನೆ ಮಹಡಿಯ ನವೀಕರಣವನ್ನು ಮಾಡಲಾಗಿದೆ. ಶಾಲೆಯ ಅಭಿವೃದ್ಧಿಯಲ್ಲಿ ಕೈ ಜೋಡಿಸುತ್ತಿರುವ ಎಲ್ಲರಿಗೂ ವಂದನೆಗಳು ಎಂದರು.

ಸಾಧನೆಗೈದ ಶಾಲೆಯ ಪ್ರತಿಭಾನ್ವಿತ ವಿದ್ಯಾರ್ಥಿಗಳನ್ನು ಪುರಸ್ಕಾರದೊಂದಿಗೆ ಸಮಾರಂಭದಲ್ಲಿ ಗೌರವಿಸಲಾಯಿತು. ದೆಹಲಿ ರಾಜ್ಯ ಮಟ್ಟದ ಶಿಕ್ಷಕ ಪ್ರಶಸ್ತಿಯನ್ನು ಪಡೆದ ಶಾಲೆಯ ದೈಹಿಕ ಶಿಕ್ಷಣ ಶಿಕ್ಷಕಿ ಶ್ರೀಮತಿ ಡ್ಯಾರೆಲ್ ಜೆಸಿಕಾ ಫೆರ್ನಾಂಡಿಸ್, ಶಾಲೆಯ ಹಳೇ ವಿದ್ಯಾರ್ಥಿನಿ ಶ್ರೀಮತಿ ರಂಜನಾ ಬುದ್ಧಿರಾಜ ಹಾಗೂ ಶಾಲಾ ಮೊದಲನೆ ಮಹಡಿಯ ನವೀಕರಣದಲ್ಲಿ ಸಹಕರಿಸಿದ ದೆಹಲಿ ಕನ್ನಡಿಗರೂ, ಹಾಗು ಅಭಿಯಂತರರಾದ ಶ್ರೀ ಈಶ್ವರ ಎನ್. ಕಟ್ಟಿಮನಿ ಅವರನ್ನು ಅಭಿನಂದಿಸಲಾಯಿತು. ಉದ್ಘಾಟಕರಿಗೆ, ಮುಖ್ಯ ಅತಿಥಿಗಳಿಗೆ ಗೌರವ ಸಮರ್ಪಣೆ ನೀಡಲಾಯಿತು.

ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಯ ಆಡಳಿತ ಸಮಿತಿಯ ಪದಾಧಿಕಾರಿಗಳು, ಸದಸ್ಯರು, ಹಳೆಯ ವಿದ್ಯಾರ್ಥಿಗಳು, ಪೋಷಕರು, ಅಪಾರ ಕನ್ನಡಿಗರು ಉಪಸ್ಥಿತರಿದ್ದರು. ಶಾಲಾ ಗೌರವ ವ್ಯವಸ್ಥಾಪಕರಾದ ಶ್ರೀ ಬಿ.ಆರ್. ಉಮೇಶ್ ಸ್ವಾಗತಿಸಿದರು. ಪ್ರಾಂಶುಪಾಲ ಶ್ರೀ ಪ್ರಶಾಂತ ಕುಮಾರ್ ಶಾಲಾ ವಾರ್ಷಿಕ ವರದಿ ವಾಚಿಸಿದರು. ಉಪ ಪ್ರಾಂಶುಪಾಲೆ ಶ್ರೀಮತಿ ಪ್ರೇಮಲತಾ ಬಿ. ವಂದನೆಗಳನ್ನು ಅರ್ಪಿಸಿದರು. ಶಿಕ್ಷಕರಾದ ಪ್ರೊಮೀಳಾ ದಹಿಯಾ ಹಾಗೂ ಕುಮಾರಿ ಬಿದಿಶಾ ಕಾರ್ಯಕ್ರಮವನ್ನು ಸುಂದರವಾಗಿ ನಿರೂಪಿಸಿದರು.

ಸಭಾ ಕಾರ್ಯಕ್ರಮದ ನಂತರ 'ಒಂದೇ ಭಾರತ, ಶ್ರೇಷ್ಠ ಭಾರತ' ಪರಿಕಲ್ಪನೆಯಲ್ಲಿ ಶಾಲಾ ವಿದ್ಯಾರ್ಥಿಗಳು, ಶಿಕ್ಷಕರು, ಪೋಷಕರು, ಆಡಳಿತ ಸಮಿತಿಯವರು, ವಿದ್ಯಾರ್ಥಿಗಳಾದ ಸ್ನೇನಾ, ಇಶಿಕಾ, ಅಪೇಕ್ಷಾ, ಸಾತ್ವಿಕ್ ಎಚ್. ತೇಲಿ ಅವರ ನಿರೂಪಣೆಯಲ್ಲಿ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನಡೆಸಿಕೊಟ್ಟರು. ■

ಸಮಗ್ರ ವರದಿ : **ಅರವಿಂದ ಬಿಜೈ**

ಕನ್ನಡ ಶಿಕ್ಷಕರು, ದೆಹಲಿ ಕನ್ನಡ ಹಿರಿಯ ಮಾಧ್ಯಮಿಕ ಶಾಲೆ, ನವದೆಹಲಿ

# ದೆಹಲಿಯಲ್ಲಿ ಕನ್ನಡ ಡಿಂಡಿಮ ಕನ್ನಡ ರಾಜ್ಯೋತ್ಸವ ಕಾರ್ಯಕ್ರಮ



ಬೆಂಗಳೂರಿನ ಡಾ. ಗುಣವಂತ ಮಂಜು ಅಧ್ಯಕ್ಷತೆಯ ಆತ್ಮಶ್ರೀ ಕನ್ನಡ ಸಾಂಸ್ಕೃತಿಕ ಪ್ರತಿಷ್ಠಾನ ಮತ್ತು ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತು ನವದೆಹಲಿ ಘಟಕದ ಸಹಕಾರದೊಂದಿಗೆ ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಯ ಸಭಾಂಗಣದಲ್ಲಿ ದಿನಾಂಕ 06.12.2023ರಂದು 'ಕನ್ನಡ ಡಿಂಡಿಮ ಕನ್ನಡ ರಾಜ್ಯೋತ್ಸವ 2023' ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು.

ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಹೊಸ ಮತ್ತು ನವೀಕರಿಸಬಹುದಾದ ಇಂಧನ ರಾಸಾಯನಿಕ ಮತ್ತು ರಸಗೊಬ್ಬರ ಇಲಾಖೆಯ ರಾಜ್ಯ ಸಚಿವರಾದ ಶ್ರೀ ಭಗವಂತ ಖೂಬ ಅವರು ಮುಂದಿನ ಜನಾಂಗಕ್ಕೆ ಸ್ಫೂರ್ತಿ ಆಗಬಹುದಾದ ಮತ್ತು ಎಲ್ಲರ ಬದುಕಿಗೆ ಭರವಸೆ ತುಂಬುವ ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತಿನ ಕೇಂದ್ರ ಘಟಕದ ಅಧ್ಯಕ್ಷರು ಹಾಗೂ ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರದ ನಿಕಟ ಪೂರ್ವ ಅಧ್ಯಕ್ಷರಾದ ಡಾ. ಸಿ. ಸೋಮಶೇಖರ್ ಅವರ ಆತ್ಮಕಥನ 'ನೀನೊಲಿದ ಬದುಕು' ಕೃತಿ ಬಿಡುಗಡೆ ಮಾಡುತ್ತಿರುವುದು ತಮಗೆ ಸಂತೋಷ ಮತ್ತು ಹೆಮ್ಮೆ ತಂದಿದೆ. ಕನ್ನಡ ನಾಡಿನಲ್ಲಿ ತಾವು ಹುಟ್ಟಿರುವುದೇ ಒಂದು ಸೌಭಾಗ್ಯ ಎಂದು ಹೇಳಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ, ಶರಣ ಬಂಧು ಡಾ. ಸಿ. ಸೋಮಶೇಖರ್ ಅವರು ತಮ್ಮ ಬದುಕಿನ ಅನುಭವಗಳನ್ನು ಒಳಗೊಂಡ ಕೃತಿ ಬಗ್ಗೆ ಅನೇಕ ವಿಚಾರಗಳನ್ನು ತಿಳಿಸಿದರು.

ಕಾರ್ಯಕ್ರಮದಲ್ಲಿ ನಾಡು ನುಡಿಗಾಗಿ ವಿಶೇಷ ಸಾಧನೆಗೈಯುತ್ತಿರುವ ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತಿನ ದೆಹಲಿ ಘಟಕದ ಅಧ್ಯಕ್ಷರಾದ ಶ್ರೀ ಚಂದ್ರಶೇಖರ ಎನ್.ಪಿ. ಅವರಿಗೆ ವರ್ಷದ ಕನ್ನಡಿಗ–2023 ಹಾಗೂ ಗೌರವ ಕೋಶಾಧ್ಯಕ್ಷರಾದ ಶ್ರೀ ಶಿವಪ್ಪ ಎಂ. ಅವರಿಗೆ ಹೆಮ್ಮೆಯ ಕನ್ನಡಿಗ ಪ್ರಶಸ್ತಿ ನೀಡಿ ಗೌರವಿಸಲಾಯಿತು. ಅದೇ ರೀತಿಯಲ್ಲಿ ಇನ್ನೂ ವಿವಿಧ ಕ್ಷೇತ್ರದಲ್ಲಿ ಕೊಡುಗೆ ನೀಡಿದ ಕರ್ನಾಟಕ ರಾಜ್ಯದ, ತಮಿಳುನಾಡಿನ ಮತ್ತು ಮಹಾರಾಷ್ಟ್ರದ ಕನ್ನಡ ಸಾಧಕರಿಗೆ ವಿವಿಧ ಪ್ರಶಸ್ತಿ ಪ್ರದಾನ ಮಾಡಲಾಯಿತು.

ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಡಾ. ಬಿ.ಆರ್. ಹಿರೇಮಠ ಉಪ ಆಯುಕ್ತರು ಅಬಕಾರಿ ಇಲಾಖೆ, ಬೆಂಗಳೂರು, ಜೆಎನ್‌ಯು ಪ್ರಾಧ್ಯಾಪಕ ಪ್ರೊ. ವೆಂಕಟಾಚಲ ಜಿ. ಹೆಗಡೆ, ದೆಹಲಿ ಕರ್ನಾಟಕ ಭವನದ ಉಪ ಸಮನ್ವಯ ಅಧಿಕಾರಿ ಶ್ರೀ ಆರ್. ರೇಣುಕುಮಾರ್, ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಯ ಅಧ್ಯಕ್ಷರಾದ ಶ್ರೀ ಬಿ.ಕೆ. ಬಸವರಾಜು, ಗೌರವ ಕಾರ್ಯದರ್ಶಿ ಶ್ರೀ ಟಿ.ಎಂ. ಮೈಲಾರಪ್ಪ ಮತ್ತಿತರರು ಭಾಗಿಯಾಗಿದ್ದರು.

ದೆಹಲಿ ಹಾಗೂ ಗುರುಗ್ರಾಮದ ಕನ್ನಡಿಗರು ಸೇರಿದಂತೆ ದೇಶದ ವಿವಿಧ ರಾಜ್ಯಗಳಿಂದ ಹೆಚ್ಚಿನ ಸಂಖ್ಯೆಯ ಕನ್ನಡ ಅಭಿಮಾನಿಗಳು ಭಾಗವಹಿಸಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸಿದರು. ಬೆಂಗಳೂರಿನ ನವ್ಯಶ್ರೀ ಎಂ.ಕೆ. ರವರು ಹಚ್ಚೇವು ಕನ್ನಡದ ದೀಪ ನೃತ್ಯವನ್ನು ವಿಶೇಷವಾಗಿ ಪ್ರದರ್ಶನ ಮಾಡಿದರು. ದೆಹಲಿ ಕನ್ನಡ ಮಹಿಳೆಯರು ಮತ್ತು ಮಕ್ಕಳಿಂದ ಸಾಂಸ್ಕೃತಿಕ ಕಾರ್ಯಕ್ರಮಗಳು ಜರುಗಿದವು. ■

**ತಿಮ್ಮಪ್ಪ ಜಿ.ಆರ್.**

# ಮಕ್ಕಳಿಗೆ ಕನ್ನಡ ಕಲಿಸುವ ಮೂಲಕ ನಮ್ಮ ನಾಡಿನ ನೆಲಮೂಲದ ಸಂಸ್ಕಾರ ಕಲಿಸಿ - ಹಿರಿಯ ಚಲನಚಿತ್ರ ನಟ ಶ್ರೀ ದೊಡ್ಡಣ್ಣ



ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತಿನ ದೆಹಲಿ ಪ್ರದೇಶ ಘಟಕದ ವತಿಯಿಂದ ನವದೆಹಲಿಯ ಸಾಕೇತ್ ನಲ್ಲಿರುವ ಸುತ್ತೂರು ಸಾಂಸ್ಕೃತಿಕ ಭವನದಲ್ಲಿ ದಿನಾಂಕ :30.12.2023 ರಂದು, ರಾಷ್ಟ್ರ ಪ್ರಶಸ್ತಿ ವಿಜೇತ ಕನ್ನಡ ಚಲನ ಚಿತ್ರ ನಿರ್ದೇಶಕ ಡಾ. ಟಿ.ಎಸ್. ನಾಗಾಭರಣ ಅವರ ಅಧ್ಯಕ್ಷತೆಯಲ್ಲಿ ಘಟಕದ ಮೂರನೇ ವಾರ್ಷಿಕೋತ್ಸವ ಹಾಗೂ ವಿಶ್ವಮಾನವ ದಿನಾಚರಣೆಯನ್ನು ಆಚರಿಸಲಾಯಿತು.

ಕಾರ್ಯಕ್ರಮದ ಉದ್ಘಾಟನೆ ಮಾಡಿದ ಕನ್ನಡ ಚಲನಚಿತ್ರ ಹಾಗೂ ರಂಗಭೂಮಿಯ ಹಿರಿಯ ನಟ ಶ್ರೀ ದೊಡ್ಡಣ್ಣ ಅವರು ಮಕ್ಕಳಿಗೆ ಕನ್ನಡ ಭಾಷೆಯನ್ನು ಹೇಳಿಕೊಡುವ ಮೂಲಕ ನಮ್ಮ ನಾಡಿನ ನೆಲಮೂಲದ ಸಂಸ್ಕಾರವನ್ನು ಕಲಿಸಬೇಕು ಎಂದರು. ಮಕ್ಕಳ ಕೈಗೆ ಮೊಬೈಲ್ ಕೊಡಬೇಡಿ, ಮಕ್ಕಳ ಬುದ್ದಿ ಶಕ್ತಿ ಬೆಳವಣಿಗೆ ಕುಂಠಿತಗೊಳ್ಳುತ್ತದೆ ಎಂದು ಪೋಷಕರಿಗೆ ಕಿವಿ ಮಾತನ್ನು ಹೇಳಿದ ಅವರು ಕನ್ನಡವನ್ನು ಮರೆತರೆ ತಾಯಿಯನ್ನು ಮರೆತಂತೆ, ಹಾಗಾಗಿ ಸುಸಂಸ್ಕೃತವಾದ ಭಾಷೆಯಾಗಿರುವ ಕನ್ನಡವನ್ನು ಮಕ್ಕಳಿಗೆ ಕಲಿಸಿ, ನಮ್ಮ ತಾಯಿ ನುಡಿ ಕನ್ನಡಕ್ಕೆ ಶ್ರೀಮಂತವಾದ ಸಾಹಿತ್ಯ, ಸಮೃದ್ಧವಾದ ಪದಕೋಶ ಮತ್ತು ಉಜ್ವಲವಾದ ಇತಿಹಾಸವಿದೆ, ಶಾಸನಗಳೂ ಸೇರಿದಂತೆ ಪ್ರಾಚೀನ ಕಾಲದಿಂದಲೂ ನೂರಾರು ಜನ ಕವಿಗಳು, ವಚನಕಾರರು, ದಾಸರು ತತ್ವ ಪದಕಾರರು ಸಾಮಾಜಿಕ ಸುಧಾರಕರು ಕನ್ನಡ ಭಾಷೆ ಮತ್ತು ಸಂಸ್ಕೃತಿಯನ್ನು ಸಮೃದ್ಧಗೊಳಿಸಿದ್ದಾರೆ. ಎಂದರು.

ಕವಿರಾಜ ಮಾರ್ಗದಲ್ಲಿ 'ಕುರಿತೋದದೆಯುಂ ಕಾವ್ಯ ಪ್ರಯೋಗ ಪರಿಣಿತ ಮತಿಗಳ್' ಎಂಬುದಾಗಿ ಕನ್ನಡಿಗರ ಜ್ಞಾನ, ಬುದ್ಧಿಶಕ್ತಿ, ಧೈರ್ಯ, ಶೌರ್ಯ, ಉನ್ನತ ಆದರ್ಶಗಳನ್ನು ಪ್ರಶಂಸಿಸಿದ್ದನ್ನು ಉಲ್ಲೇಖಿಸಿದ ದೊಡ್ಡಣ್ಣ ಅವರು ಕಾಲೇಜು ವಿದ್ಯಾಭ್ಯಾಸ ಮಾಡದೇ ಇದ್ದರೂ ಕನ್ನಡದ ಸಾರ ಸರ್ವಸ್ವವನ್ನು ಕರಗತ ಮಾಡಿಕೊಂಡಿರುವುದು ಅವರ ಮನೋಜ್ಞವಾದ ಭಾಷಣದಲ್ಲಿ ಪ್ರತಿಧ್ವನಿಸುತ್ತಿತ್ತು. ಪ್ರಾಚೀನ ಸಾಹಿತ್ಯ ಮತ್ತು ಕಾವ್ಯಗಳ ಕುರಿತು ಆಳವಾಗಿ ಅಧ್ಯಯನ ಮಾಡಿಕೊಂಡಿರುವ ಅವರು ಬಸವಣ್ಣನವರ ವಚನಗಳಲ್ಲಿ ಅಗಾಧವಾದ ಅರ್ಥವಿದ್ದು ಅವುಗಳನ್ನು ಚೆನ್ನಾಗಿ ಅರ್ಥೈಸಿಕೊಳ್ಳಬೇಕು ಎಂದು ತಿಳಿಸುತ್ತಾ ಅನೇಕ ವಚನಗಳನ್ನು ಉಲ್ಲೇಖಿಸಿದರು. ನಮ್ಮ ಕಸ್ತೂರಿ ಕನ್ನಡ ಭಾಷೆ ಅಂದವಾಗಿದ್ದು, ಅಂತಹ ಭಾಷೆಯನ್ನು ಕಲಿತು ಬದುಕಿನಲ್ಲಿ ಸಂಸ್ಕಾರ ಮತ್ತು ಆನಂದವನ್ನು ಕಾಣಬೇಕು ಎಂದು ತಮ್ಮ ಭಾಷಣದ ಉದ್ದಕ್ಕೂ ಸಭಿಕರನ್ನು ನಕ್ಕು ನಲಿಸುತ್ತಾ ಸ್ವಾರಸ್ಯಕರವಾಗಿ ಮಾತನಾಡಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಡಾ. ಟಿ.ಎಸ್. ನಾಗಾಭರಣ ಅವರು ಮಾತನಾಡಿ, ವಿಶ್ವಮಾನವ ತತ್ವಗಳು ಕನ್ನಡ ಸಂಸ್ಕೃತಿ ಬೇರುಗಳಲ್ಲಿಯೇ ಇವೆ. ಎಲ್ಲಕಾಲಕ್ಕೂ ಈ ಪರಂಪರೆಯನ್ನು ಕನ್ನಡದಲ್ಲಿ ಪೋಷಿಸಿಕೊಂಡು ಬರಲಾಗುತ್ತಿದ್ದು ಆ ನಿಟ್ಟಿನಲ್ಲಿ ವಿಶ್ವಗುರು ಬಸವಣ್ಣ ಹಾಗೂ ವಿಶ್ವಮಾನವ ಕುವೆಂಪು ಎರಡೂ ಮಹಾನ್ ಕನ್ನಡದ ಚೇತನಗಳನ್ನು ಕನ್ನಡಿಗರು ಎಂದಿಗೂ ಮರೆಯಲಾಗದು ಎಂದು ಹೇಳಿ ಅವರ ವಿಚಾರಗಳನ್ನು ಅರ್ಥೈಸಿಕೊಂಡು ಅನುಷ್ಠಾನಕ್ಕೆ ತರುವ ಕೆಲಸ ನಿಜವಾದ ಅರ್ಥದಲ್ಲಿ ಆಗುತ್ತಿಲ್ಲ ಎಂದು ವಿಷಾಧ ವ್ಯಕ್ತ ಪಡಿಸಿದರು. ವಿಶ್ವಮಾನವ ಸಂದೇಶಗಳು ಕೇವಲ ವೇದಿಕೆಗಳ ಭಾಷಣಕ್ಕೆ ಮಾತ್ರ ಕೊನೆಯಾಗಬಾರದು. ಕುವೆಂಪು ಅವರು ಬರೆದ "ಶ್ರೀ ಬಸವೇಶ್ವರರಿಗೆ" ಕವನದಲ್ಲಿ ನಿವೇದಿಸಿಕೊಂಡಿರುವಂತೆ ಬಸವಣ್ಣನವರ 12ನೇ ಶತಮಾನದ ಕನಸುಗಳನ್ನು ನನಸು ಮಾಡುವ ಕೆಲಸ ಈಗಲಾದರೂ ಆಗಬೇಕೆಂದು ಮಾರ್ಮಿಕವಾಗಿ ತಮ್ಮ ಹಿತನುಡಿಗಳನ್ನು ಹೇಳಿದರು.

ಡಿಸೆಂಬರ್ 29 'ರಾಷ್ಟ್ರಕವಿ ಕುವೆಂಪು' ಅವರ ಜನ್ಮ ದಿನದ ಅಂಗವಾಗಿ ಬಸವಣ್ಣ ಹಾಗೂ ಕುವೆಂಪು ಅವರ ವಿಶ್ವ ಮಾನವ ಸಂದೇಶ ಕುರಿತ ವಿಶೇಷ ಉಪನ್ಯಾಸ ನೀಡಿದ ನವದೆಹಲಿಯ ಅನರ್ಘ್ಯ ಐಎಎಸ್ ಅಕಾಡೆಮಿಯ ಶ್ರೀ ಮನೋಜ ಮಡ್ಡಿಲ ಅವರು ಬಸವಣ್ಣ ವಿಶ್ವವಂದ್ಯರು ಮತ್ತು ಕುವೆಂಪು ಕನ್ನಡ ಸಾಹಿತ್ಯದ ಆಧುನಿಕ ಘಟ್ಟದ ಅನಭಿಷಿಕ್ತ ದೊರೆ. ಯಾರೂ ಮುಖ್ಯರಲ್ಲ, ಯಾರೂ ಅಮುಖ್ಯರಲ್ಲ ಎಂದು ಹೇಳಿದ ರಸ ಋಷಿ ಕುವೆಂಪು ಅವರ ಶ್ರೀ ಸಾಮಾನ್ಯನೇ ಭಗವತ್ ಮಾನ್ಯಂ ಎಂಬ ನುಡಿಗಳನ್ನು ಉಲ್ಲೇಖಿಸಿ ಎರಡೂ ಮಹಾನ್ ಚೇತನಗಳ ವಿಚಾರಧಾರೆಗಳನ್ನು ಪ್ರಸ್ತುತ ಪಡಿಸುತ್ತಾ ಬಸವಣ್ಣ ಕನ್ನಡಕ್ಕೆ ಆತ್ಮ ಹಾಗೂ ಕುವೆಂಪು ಅವರು ಪ್ರಾಣ ಎಂಬುದಾಗಿ ಅಭಿಪ್ರಾಯ ಪಟ್ಟರು. ಅರಮನೆಯನ್ನು ಅವಲಂಬಿಸಿದ್ದ ಕನ್ನಡ ಸಾಹಿತ್ಯ ಮಹಾಮನೆಯಲ್ಲಿ ಮಘ ಮಘಿಸುವಂತೆ ಅರಳುವಂತಹ ವಾತಾವರಣವನ್ನು ಹನ್ನೆರಡನೇ ಶತಮಾನದಲ್ಲಿ ಬಸವಣ್ಣನವರು ಸೃಷ್ಟಿಸಿದ್ದು ಕನ್ನಡ ಸಾಹಿತ್ಯದ ವಿಶೇಷ ಚರಿತ್ರೆ ಎಂದರು.

ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿದ್ದ ನವದೆಹಲಿಯ ಸಂಸ್ಕೃತ ವಿಶ್ವವಿದ್ಯಾಲಯದ ಉಪಕುಲಪತಿಗಳಾದ ಪ್ರೊ. ಶ್ರೀನಿವಾಸ ವರಖೇಡಿ ಅವರು ಮಾತನಾಡಿ ಕನ್ನಡ ಭಾಷೆ ಮತ್ತು ಸಾಹಿತ್ಯಕ್ಕೆ ಎಲ್ಲ ಗಡಿಗಳನ್ನು ಮೀರುವ ಶಕ್ತಿ ಇದೆ. ಕರ್ನಾಟಕಕ್ಕೆ ಪ್ರಾಚೀನ ಇತಿಹಾಸದಲ್ಲಿ ಕಿಷ್ಕಿಂದೆ ಎಂಬ ಹೆಸರಿದ್ದು, ಭಾರತದ ಚರಿತ್ರೆಯ ಜೊತೆ ಜೊತೆಗೆ ಕನ್ನಡದ ಪರಂಪರೆ ಬೆಳೆದು ಬಂದಿದೆ. ಬಸವಣ್ಣ ಮತ್ತು ಕುವೆಂಪು ಅವರು ಅದನ್ನು ಉಜ್ವಲಗೊಳಿಸಿದ್ದಾರೆ ಎಂದು ಹೇಳಿದರು.

ಮತ್ತೋರ್ವ ಮುಖ್ಯ ಅತಿಥಿ ಹೃದ್ರೋಗ ತಜ್ಞ ಡಾ. ಪರ್ವತ ಗೌಡ ಸಿ, ಗೌರವ ಉಪಸ್ಥಿತರಿದ್ದ ನಮ್ಮ ಪರಿಷತ್ತಿನ ದೆಹಲಿ ಘಟಕದ ಗೌರವ ಸಲಹೆಗಾರರಾಗಿರುವ ಶ್ರೀ ಅನಂತರಾಮ ಅರಳಿ ಮತ್ತು ಘಟಕದ ಉಪಾಧ್ಯಕ್ಷರಾದ ಶ್ರೀ ಪ್ರಭುಪಾಟೀಲ್ ಅವರು ಕಾರ್ಯಕ್ರಮ ಕುರಿತು ಮೆಚ್ಚುಗೆಯ ಮಾತುಗಳನ್ನಾಡಿದರು.

ಕಾರ್ಯಕ್ರಮದಲ್ಲಿ ದೆಹಲಿ–ಎನ್‌ಸಿಆರ್ ನ ಕನ್ನಡ ಮಹಿಳೆಯರು ಮತ್ತು ಮಕ್ಕಳಿಂದ ಕನ್ನಡ ಕವನಗಳ ಗಾಯನ, ವಚನ ವಾಚನ, ನೃತ್ಯ ಹಾಗೂ ಕನ್ನಡೇತರ ಮಕ್ಕಳಿಂದ ನೃತ್ಯ ಇತ್ಯಾದಿ ಎಪ್ಪತ್ತಕ್ಕೂ ಹೆಚ್ಚು ಪ್ರತಿಭಾನ್ವಿತರ ಕಲಾ ಅಭಿವ್ಯಕ್ತಿಗೆ ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತಿನ ಕಾರ್ಯಕ್ರಮ ವೇದಿಕೆಯಾಯಿತು ಎಂಬುದು ಹೆಮ್ಮೆಯ ಸಂಗತಿ.

ಪರಿಷತ್ತಿನ ದೆಹಲಿ ಘಟಕದ ಅಧ್ಯಕ್ಷರಾದ ಶ್ರೀ ಚಂದ್ರಶೇಖರ ಎನ್.ಪಿ. ಅವರು ಸ್ವಾಗತ ಮತ್ತು ಆಶಯ ನುಡಿಗಳನ್ನು ಪ್ರಸ್ತುತಪಡಿಸಿದರು. ವಾರ್ಷಿಕ ವರದಿಯನ್ನು ಗೌರವ ಕೋಶಾಧ್ಯಕ್ಷರಾದ ಶ್ರೀ ಶಿವಪ್ಪ ಎಂ. ಅವರು ಮಂಡಿಸಿದರು. ಕಾರ್ಯಕಾರಿ ಸಮಿತಿ ಸದಸ್ಯರುಗಳಾದ ಶ್ರೀ ಎಚ್.ಎಸ್. ತೇಲಿ ಹಾಗೂ ಶ್ರೀ ತಿಮ್ಮಪ್ಪ ಜಿ.ಆರ್. ಕಾರ್ಯಕ್ರಮದ ನಿರೂಪಣೆಯನ್ನು ನೆರವೇರಿಸಿದರೆ, ಶ್ರೀಮತಿ ಜಯಶ್ರೀ ಬಸವರಾಜ್ ಅವರು ವಂದನೆಗಳನ್ನು ಅರ್ಪಿಸಿದರು. ಪರಿಷತ್ತಿನ ಎಲ್ಲಾ ಪದಾಧಿಕಾರಿಗಳ ಪರಿಶ್ರಮದಿಂದಾಗಿ ಉತ್ತಮ ಸಂಖ್ಯೆಯಲ್ಲಿ ಭಾಗವಹಿಸಿದ್ದ ದೆಹಲಿ ಕನ್ನಡಿಗರ ಉಪಸ್ಥಿತಿಯಲ್ಲಿ ಈ ಕಾರ್ಯಕ್ರಮವು ಯಶಸ್ವಿಯಾಗಿ ನೆರವೇರಿತು. ■

ಸಮಗ್ರ ವರದಿ
***ತಿಮ್ಮಪ್ಪ ಜಿ.ಆರ್.***
ಸದಸ್ಯರು, ಅಭಾಶಸಾಪ, ದೆಹಲಿ ಘಟಕ

# ಅಗಲಿದ ಶ್ರೀ ಬೈಕೆರೆ ನಾಗೇಶ್ ಅವರಿಗೆ ದೆಹಲಿ ಕನ್ನಡಿಗರಿಂದ ನುಡಿನಮನದ ಶ್ರದ್ಧಾಂಜಲಿ





ದೆಹಲಿಯಲ್ಲಿ ಕರ್ನಾಟಕ ಸರ್ಕಾರದ ವಿಶೇಷ ಪ್ರತಿನಿಧಿಯಾಗಿ ಹಾಗೂ ಅನೇಕ ಕೇಂದ್ರ ಮಂತ್ರಿಗಳ ಜೊತೆ ವಿಶೇಷ ಕರ್ತವ್ಯಾಧಿಕಾರಿಯಾಗಿ ಈ ಹಿಂದೆ ಕಾರ್ಯ ನಿರ್ವಹಿಸಿ ಇಲ್ಲಿನ ಹೊರನಾಡ ಕನ್ನಡಿಗರ ಕಷ್ಟ-ಸುಖಗಳಿಗೆ, ಸಮಸ್ಯೆಗಳಿಗೆ ಸ್ಪಂದಿಸಿದ್ದ ಸ್ನೇಹಮಯಿ ಹಾಗು ಕ್ರಿಯಾಶೀಲ ವ್ಯಕ್ತಿಯಾಗಿದ್ದ ಶ್ರೀ ಬೈಕೆರೆ ನಾಗೇಶ್ ಅವರು 23.01.2024 ರಂದು ಅನಾರೋಗ್ಯದ ಕಾರಣ ನಿಧನರಾದ ಸುದ್ದಿ ದೆಹಲಿ ಕನ್ನಡಿಗರಿಗೆ ಬಹಳ ದುಃಖದಾಯಕವಾಗಿತ್ತು.

ಅವರ ಹಠಾತ್ ಅಗಲಿಕೆ ತುಂಬಲಾರದ ನಷ್ಟವಾಗಿದೆ. ಮೃತರ ಆತ್ಮಕ್ಕೆ ಚಿರಶಾಂತಿ ಕೋರಲು ಶ್ರದ್ಧಾಂಜಲಿ ಸಭೆಯನ್ನು ದೆಹಲಿ ಕರ್ನಾಟಕ ಸಂಘದ ವಿಚಾರ ಸಂಕಿರಣ ಕೊಠಡಿಯಲ್ಲಿ 26.01.2024ರ ಶುಕ್ರವಾರ ಸಂಜೆ ಆಯೋಜಿಸಲಾಗಿತ್ತು. ಉತ್ತಮ ಸಂಖ್ಯೆಯಲ್ಲಿ ದೆಹಲಿ ಕನ್ನಡಿಗರು ಒಟ್ಟು ಸೇರಿ ಅಗಲಿದ ಬೈಕರೆ ನಾಗೇಶ್ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ, ವಂದಿಸಿ, ನುಡಿನಮನದ ಶ್ರದ್ಧಾಂಜಲಿ ನೀಡಿದರು. ಮೃತರ ಗೌರವಾರ್ಥ ಎಲ್ಲರೂ ಎದ್ದು ನಿಂತು ಎರಡು ನಿಮಿಷ ಮೌನಾಚರಣೆ ಮಾಡಿದರು.

ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷರಾದ ಶ್ರೀ ಸಿ.ಎಂ. ನಾಗರಾಜ ಅವರು ಮಾತನಾಡಿ ಅನೇಕ ಮಂತ್ರಾಲಯಗಳಲ್ಲಿ, ಕೇಂದ್ರ ಮಂತ್ರಿಗಳ ಜೊತೆ, ರಾಜ್ಯ ಸರ್ಕಾರದ ಮಂತ್ರಿಗಳ ಜೊತೆ ಶ್ರೀ ನಾಗೇಶ್ ಅವರು ಕೆಲಸ ಮಾಡಿದ್ದರು. ಅನಂತರ ದೆಹಲಿಯಲ್ಲಿ ಕರ್ನಾಟಕ ಸರ್ಕಾರದ ವಿಶೇಷ ಪ್ರತಿನಿಧಿಯಾಗಿ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ನಡುವಿನ ಬಾಂಧವ್ಯದ ಕೊಂಡಿಯಾಗಿದ್ದರು. ತಮ್ಮ ಹುಟ್ಟೂರಾದ ತಮ್ಮ ಬೈಕೆರೆ ಗ್ರಾಮದಿಂದ ದೆಹಲಿಗೆ ಬಂದು ತಮ್ಮ ಸರ್ಕಾರದ ಜವಾಬ್ದಾರಿಯ ಜೊತೆಗೆ, ಇಲ್ಲಿನ ಕನ್ನಡಿಗರಿಗೆ ಸಾಕಷ್ಟು ನೆರವು ನೀಡಿದ್ದರಲ್ಲದೆ, ತಮ್ಮ ಗ್ರಾಮದಲ್ಲಿ ಮೂಲಭೂತ ಸೌಕರ್ಯಗಳನ್ನು ಒದಗಿಸಿಕೊಡುವಲ್ಲಿ ಅವರು ಮಹತ್ತರ ಪಾತ್ರ ವಹಿಸಿದ್ದರು. 2011 ರಲ್ಲಿ ಮಾನ್ಯ ಶ್ರೀ ಯಡಿಯೂರಪ್ಪನವರು ಕರ್ನಾಟಕದ ಮುಖ್ಯಮಂತ್ರಿಗಳಾಗಿದ್ದ ಸಮಯದಲ್ಲಿ ಡಾ. ವೆಂಕಟಾಚಲ ಜಿ. ಹೆಗಡೆಯವರು ಅಧ್ಯಕ್ಷರಾಗಿದ್ದಾಗ ದೆಹಲಿ ಕರ್ನಾಟಕ ಸಂಘಕ್ಕೆ ಒಂದು ಕೋಟಿ ರೂಪಾಯಿಗಳ ಅನುದಾನವನ್ನು ಬಿಡುಗಡೆ ಮಾಡಿಸುವಲ್ಲಿ ಹಾಗು ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಗೆ ಎರಡು ಬಸ್ಸುಗಳನ್ನು ಉಚಿತವಾಗಿ ಕೊಡಿಸುವಲ್ಲಿ ಶ್ರೀ ನಾಗೇಶ್ ಅವರು ನಮಗೆ ನೆರವಾಗಿದ್ದರು. ಸಂಘಕ್ಕೆ ದೊರೆತ ಅನುದಾನದಿಂದ ಸಂಘದಲ್ಲಿ ಹೆಚ್ಚುವರಿಯಾಗಿ ಮೂರು ವಸತಿ ಕೊಠಡಿ, ಆರ್ಟ್ ಗ್ಯಾಲರಿ, ಪ್ರಸಾದನ ಕೊಠಡಿಗಳನ್ನು ಮಾಡಲಾಗಿತ್ತು. ಶ್ರೀ ನಾಗೇಶ್‌ರವರು ದೆಹಲಿ ಕನ್ನಡಿಗರಿಗೆ ಬಹಳ ಆತ್ಮೀಯವಾಗಿದ್ದರು ಹಾಗು ಪ್ರತಿ ದೀಪಾವಳಿ ಹಬ್ಬದ ಸಮಯದಲ್ಲಿ ಜೇನುತುಪ್ಪ, ಏಲಕ್ಕಿ, ಚಿಕ್ಕಮಗಳೂರು ಕಾಫಿ ಪುಟಿಗಳನ್ನು ಇಲ್ಲಿನ ಕನ್ನಡಿಗರಿಗೆ ತಪ್ಪದೇ ಕಳುಹಿಸುತ್ತಿದ್ದರು. ಅವರ ಅಗಲಿಕೆ ದೆಹಲಿ ಕನ್ನಡಿಗರಿಗೆ ಬಹಳ ದುಃಖ ತಂದಿದೆ ಮತ್ತು ಬರಿಸಲಾಗದ ನಷ್ಟವಾಗಿದೆ ಎಂದರು.

ದೆಹಲಿ ಕರ್ನಾಟಕ ಸಂಘದ ಮಾಜಿ ಅಧ್ಯಕರೂ ಹಾಗೂ ಜೆಎನ್‌ಯು.ನ ಪ್ರಾಧ್ಯಾಪಕರಾದ ಡಾ. ವೆಂಕಟಾಚಲ ಜಿ. ಹೆಗಡೆಯವರು ಮಾತನಾಡಿ ಶ್ರೀ ನಾಗೇಶ್ ಅವರು ಸಂಘದ ಕಟ್ಟಡ ಕಟ್ಟುವ ವೇಳೆ ನಮಗೆ ಸಹಾಯ ಮಾಡಿದ್ದರು. ಕಳೆದ ಎರಡು ದಶಕಗಳಲ್ಲಿ ದೆಹಲಿ ಕನ್ನಡಿಗರಿಗೆ, ನಾಡಿನ ಜನತೆಗೆ ಹೆಚ್ಚಿನ ಸಹಕಾರ ನೀಡಿದವರಲ್ಲಿ ಅತೀ ಮುಖ್ಯವಾಗಿ ಶ್ರೀ ನಾಗೇಶ್ ಅವರನ್ನು ನಾವು ಸ್ಮರಿಸಬೇಕು. ಅವರ ಮೇಲೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳಿಗೆ ಬಹಳ ವಿಶ್ವಾಸವಿದ್ದುದರಿಂದ ಅವರ ಮೂಲಕ ಅನೇಕ ಕೆಲಸಗಳು ಸುಗಮವಾಗಿ ಆಗುತ್ತಿದ್ದವು. ಅವರು ದೆಹಲಿಯಲ್ಲಿದ್ದ ಸಮಯ ಅನೇಕ ಬಾರಿ ಕರ್ನಾಟಕ ಭವನದಲ್ಲಿ ಬ್ರೇಕ್‌ಫಾಸ್ಟ್ ಮೀಟಿಂಗ್‌ನಲ್ಲಿ ಭೇಟಿಯಾಗುತ್ತಿದ್ದೆವು. ಎಲ್ಲರನ್ನು ಪ್ರೀತಿಯಿಂದ, ಆದರದಿಂದ ಕಾಣುವ, ಮೃದುವಾಗಿ ಮಾತನಾಡುವ ತುಂಬಾ ಒಳ್ಳೆಯ ವ್ಯಕ್ತಿ ಅವರಾಗಿದ್ದರು.

ಅವರ ಪ್ರಮುಖ ಕೊಡುಗೆ ಎಂದರೆ ಕೇಂದ್ರದಿಂದ ಕರ್ನಾಟಕಕ್ಕೆ ಬರುವ ನಾನಾ ಅನುದಾನಗಳ ಬಗ್ಗೆ ವಿವಿಧ ಸಚಿವಾಲಯಗಳ ಕಾರ್ಯ ಯೋಜನೆಗಳ ಸವಲತ್ತುಗಳ ಬಗ್ಗೆ ವಿವರವಾದ ಕೈಪಿಡಿಯನ್ನು ಸಿದ್ದಪಡಿಸಿ ಕರ್ನಾಟಕದಿಂದ ಕೇಂದ್ರ ಮತ್ತು ರಾಜ್ಯ ಮಂತ್ರಿಗಳಿಗೆ, ಅಧಿಕಾರಿಗಳಿಗೆ ಒದಗಿಸಿದ್ದುದು ಹಾಗೂ ಕಾಲ ಕಾಲಕ್ಕೆ ಅದನ್ನು ಅಪ್‌ಡೇಟ್ ಮಾಡುತ್ತಿದ್ದುದು ಅವರು ಮಾಡಿದ ದೊಡ್ಡ ಕೆಲಸವೆನ್ನಬಹುದು. ನನ್ನ ಅಧ್ಯಕ್ಷೀಯ ಕಾರ್ಯಕಾಲದಲ್ಲಿ ಸಂಘಕ್ಕೆ ಕರ್ನಾಟಕ ಸರ್ಕಾರದಿಂದ ಅನುದಾನ ಬಿಡುಗಡೆ ಮಾಡಲು ಹಾಗೂ ಕನ್ನಡ ಶಿಕ್ಷಣ ಸಂಸ್ಥೆಗೆ ಬಸ್ಸುಗಳನ್ನು ನೀಡಲು ಅವರು ನೀಡಿದ ಸಹಕಾರ ಮರೆಯುವಂತಿಲ್ಲ. ಅವರು ತಮ್ಮ ಸ್ವಂತ ಊರಿನ ಅಭಿವೃದ್ಧಿ, ದೇವಸ್ಥಾನಗಳ ಜೀರ್ಣೋದ್ಧಾರದಲ್ಲಿ ಶ್ರಮಿಸಿದವರು. He was rooted to his village Baikere, ದೆಹಲಿಯಲ್ಲಿ ಬಹಳ ಅರ್ಥಪೂರ್ಣ ಜೀವನ ನಡೆಸಿದ್ದಾರೆ, ವೈಯಕ್ತಿಕವಾಗಿ ತಮಗೆ ಆತ್ಮೀಯರಾಗಿದ್ದ ಅವರಿಗೆ ಮನಃಪೂರ್ವಕ ಶ್ರದ್ಧಾಂಜಲಿ ಎಂದರು.

ಹಿರಿಯ ದೆಹಲಿ ಕನ್ನಡಿಗರಾದ ಶ್ರೀ ಎನ್.ಎ. ಮಾಧವ ಅವರು ಮಾತನಾಡಿ ಶ್ರೀ ನಾಗೇಶ್ ಅವರು ತಮಗೂ ಹಾಗೂ ಎಲ್ಲರಿಗೂ ಆತ್ಮೀಯರಾಗಿದ್ದರು. ಅವರದ್ದು ಎಲ್ಲವೂ ಸಿಂಪ್ಲಿಸಿಟಿ, ತಮ್ಮ ತನು, ಮನ ಧನದಿಂದ ದೆಹಲಿ ಕನ್ನಡಿಗರಿಗೆ ಸಹಾಯ ಮಾಡಿದ್ದಾರೆ. ಈ ಹಿಂದೆ ಕೃಷಿಕ್ ಸರ್ವೋದಯ ಫೌಂಡೇಶನ್ ವತಿಯಿಂದ ಕರ್ನಾಟಕದ ಹಿರಿಯ ಐಎಎಸ್ /ಐಪಿಎಸ್ ಅಧಿಕಾರಿಗಳಿಂದ ಕರ್ನಾಟಕದ 200–300 ಸಿವಿಲ್ ಸರ್ವಿಸಸ್ ಆಕಾಂಕ್ಷಿಗಳಿಗೆ ತರಬೇತಿ ನೀಡುವ ಸಲುವಾಗಿ Interactive Session ಗಳಿಗೆ ಎರಡು ಬಾರಿ ಉಚಿತವಾಗಿ ಸಹಕಾರ ನೀಡಿದ್ದರು. He was a simple and gem of a person ಆಗಿದ್ದರು. ಅವರ ಆತ್ಮಕ್ಕೆ ಶಾಂತಿ, ಕುಟುಂಬದವರಿಗೆ ದುಃಖ ಭರಿಸುವ ಶಕ್ತಿ ದೇವರು ನೀಡಲಿ ಎಂದರು.

ಹಿರಿಯ ದೆಹಲಿ ಕನ್ನಡತಿ ಶ್ರೀಮತಿ ರಾಧಾ ಕೌಜಲಗಿ ಅವರು ಮಾತನಾಡಿ ಸ್ನೇಹಾ ದೆಹಲಿ ಕನ್ನಡ ಲೇಡೀಸ್ ಅಸೋಸಿಯೇಶನ್‌ಗೆ ಶ್ರೀ ನಾಗೇಶ್ ಅವರು ಸದಾ ಸಹಾಯ ಮಾಡುತ್ತಾ ಇದ್ದರು. ಅವರ ಧರ್ಮ ಪತ್ನಿ ಶ್ರೀಮತಿ ಸುಗುಣಾ ನಾಗೇಶ್‌ರವರು ದೆಹಲಿಯಲ್ಲಿ ಇದ್ದಾಗ ಅಸೋಸಿಯೇಶನ್‌ನ ಜೊತೆ ಉತ್ತಮ ಒಡನಾಟ ಹೊಂದಿದ್ದರು. ಶ್ರೀ ನಾಗೇಶ್ ಅವರು ಕಳೆದ 20–30 ವರ್ಷಗಳಲ್ಲಿ ದೆಹಲಿಯಲ್ಲಿ ಒಳ್ಳೆಯ ಕೆಲಸ ಮಾಡಿದ್ದಾರೆ. ಅವರೊಂದು ತುಂಬಿದ ಕೊಡ, ಅವರ ಆತ್ಮಕ್ಕೆ ದೇವರು ಶಾಂತಿ ಕರುಣಿಸಲಿ ಎಂದರು.

ನವದೆಹಲಿಯ ಬಸವ ಇಂಟರ್‌ನ್ಯಾಷನಲ್ ಸೆಂಟರಿನ ಉಪಾಧ್ಯಕ್ಷರೂ, ಕಲ್ಯಾಣ ಕರ್ನಾಟಕ ಸಾಂಸ್ಕೃತಿಕ ಸಂಸ್ಥೆಯ ಅಧ್ಯಕ್ಷರೂ ಆಗಿರುವ ಹಿರಿಯ ದೆಹಲಿ ಕನ್ನಡಿಗ ಶ್ರೀ ವಿ.ವಿ. ಬಿರಾದಾರ ಅವರು ಶ್ರೀ ಬೈಕೆರೆ ನಾಗೇಶ್ ಅವರ ಬಗ್ಗೆ ಮಾತನಾಡುತ್ತಾ ಬಸವ ಇಂಟರ್‌ನ್ಯಾಷನಲ್ ಸೆಂಟರ್ ಅನ್ನು ಸ್ಥಾಪಿಸಿದವರಲ್ಲಿ ಅವರೂ ಒಬ್ಬರು, ಅದನ್ನು ಚೆನ್ನಾಗಿ ಮುಂದುವರಿಸಿಕೊಂಡು ಹೋಗಿ ಎಂದು ತಮಗೆ ಆಗಾಗ ಹೇಳುತ್ತಿದ್ದರು. ಅವರು ಎಲೆಮರೆ ಕಾಯಿಯಂತೆ ಕೆಲಸ ಮಾಡಿದವರು, ಬಡವರಿಗೆ ಕೆಲಸ ಕೊಡಿಸಿದವರು, ಪೆಟ್ರೋಲಿಯಂ ಸಚಿವಾಲಯದಲ್ಲಿ ಉತ್ತಮ ಕಾರ್ಯಗಳನ್ನೂ, ಕರ್ನಾಟಕ ಸರ್ಕಾರದ ದೆಹಲಿಯಲ್ಲಿ ವಿಶೇಷ ಪ್ರತಿನಿಧಿಯಾಗಿದ್ದಾಗ ಕೈಪಿಡಿ ಹೊರತಂದು ಅದರ ಪ್ರತಿಗಳನ್ನು ಸಂಬಂಧಪಟ್ಟವರಿಗೆ ನೀಡುತ್ತಿದ್ದುದು ಬಹಳ ವಿಶೇಷವಾಗಿತ್ತು. ಅವರ

ಹುಟ್ಟೂರಾದ ಬೈಕೆರೆಯಲ್ಲಿ ರಸ್ತೆ ನಿರ್ಮಾಣ, ದೇವಸ್ಥಾನಗಳ ಜೀರ್ಣೋದ್ಧಾರ ಮುಂತಾದ ಜನಾನುರಾಗಿ ಕೆಲಸಗಳನ್ನು ಮಾಡಿದ್ದಾರೆ. ಶ್ರೀ ನಾಗೇಶ್ ದಂಪತಿಗಳು ಎಲ್ಲರನ್ನೂ ಅತ್ಯಂತ ಆತ್ಮೀಯವಾಗಿ ನೋಡಿಕೊಳ್ಳುತ್ತಿದ್ದರು. ಅನೇಕ ರೈತರಿಗೂ, ಒಕ್ಕಲಿಗರಿಗೂ ಸಹಾಯ ಮಾಡಿದ್ದಾರೆ. ಎಲ್ಲರನ್ನೂ ಪ್ರೀತಿಯಿಂದ ಗೌರವಿಸುವ ಅಪರೂಪದ ಸರಳ ವ್ಯಕ್ತಿ ಆದ ಅಂತಹವರು ಪುನಃ ಹುಟ್ಟಿ ಬರಲಿ, ಅವರ ಆತ್ಮಕ್ಕೆ ಶಾಂತಿ ಕೋರುತ್ತೇನೆ ಎಂದರು.

ನವದೆಹಲಿಯ ಕರ್ನಾಟಕ ಭವನದಲ್ಲಿ ಉಪ ಸಮನ್ವಯ ಅಧಿಕಾರಿಗಳಾಗಿರುವ ಶ್ರೀ ಎಚ್. ಆಂಜನೇಯ ಅವರು ಮಾತನಾಡಿ, ಭಾರತ ಸರ್ಕಾರದ ವಿವಿಧ ಇಲಾಖೆಗಳಲ್ಲಿ ಉನ್ನತ ಸ್ಥಾನದಲ್ಲಿ ಕೆಲಸ ಮಾಡುವಂತಹ ಕನ್ನಡಿಗರು ಬಹಳ ವಿರಳ, ಅಂತಹ ವಿಶೇಷ ವ್ಯಕ್ತಿಗಳಲ್ಲಿ ಶ್ರೀ ಬೈಕೆರೆ ನಾಗೇಶ್ ಒಬ್ಬರಾಗಿದ್ದರು. ಕೇಂದ್ರ ಸರ್ಕಾರದ ಕಾರ್ಯ ಯೋಜನೆಗಳು, ಅನುದಾನ ಮುಂತಾದ ವಿಷಯಗಳು, ರಾಜ್ಯ ಸರ್ಕಾರಕ್ಕೆ ಹಣ ಬಿಡುಗಡೆಯಾದ ವಿವರಗಳನ್ನೊಳಗೊಂಡ ಕಿರು ಹೊತ್ತಿಗೆ / ಬುಕ್‌ಲೆಟ್ ಅನ್ನು ಅವರು ಮೊಟ್ಟ ಮೊದಲು ಹೊರತಂದಿದ್ದು ಎಲ್ಲರಿಗೂ ಉಪಯೋಗವಾಗಿತ್ತು. ಅವರು ಯಾವ ಮತ, ಜಾತಿ ಭೇದವಿಲ್ಲದೆ ಕನ್ನಡಿಗರೆಲ್ಲರನ್ನೂ ಸಮಾನವಾಗಿ ಆತ್ಮೀಯವಾಗಿ ನೋಡಿಕೊಳ್ಳುತ್ತಿದ್ದರು, ಅವರ ಆತ್ಮಕ್ಕೆ ಚಿರಶಾಂತಿ ಸಿಗಲಿ ಎಂದರು.

ಕರ್ನಾಟಕ ಭವನದಲ್ಲಿ ಅಧಿಕಾರಿಯಾಗಿರುವ ಶ್ರೀ ಮಂಜುನಾಥ ಜಿ. ಗೌಡ ಅವರು ಮಾತನಾಡಿ ಶ್ರೀ ನಾಗೇಶ್ ಅವರೊಂದಿಗೆ 2007 ರಿಂದ ಒಡನಾಟ. ಸುಮಾರು 7 ವರ್ಷಗಳು ಅವರೊಟ್ಟಿಗೆ ಕೆಲಸ ಮಾಡಿದ್ದೇನೆ. ಕನ್ನಡದಲ್ಲಿ ಬರೆಯುವವರು ಬೇಕೆಂದು ಅವರು ಬಯಸಿದಾಗ ತಮ್ಮನ್ನು ಆಯ್ಕೆ ಮಾಡಿಕೊಂಡಿದ್ದರು. ಆನಂತರ ನನ್ನ ಜೀವನದ ಹಾದಿ ಸುಗಮವಾಯಿತು. ವೆಂಟಿಲೇಟರ್‌ನಲ್ಲಿದ್ದ ಅವರ ಅನಾರೋಗ್ಯದ ಮಾಹಿತಿ ಸಿಕ್ಕ ತಕ್ಷಣ 23.01.2024ರ ದಿನ ನಾನು ಅವರನ್ನು ನೋಡಲು ಬೆಂಗಳೂರಿಗೆ ತೆರಳಿದ್ದೆ. ಆದರೆ ಆಸ್ಪತ್ರೆಗೆ ತಲುಪುವ ಮೊದಲೇ ಅವರ ನಿಧನವಾಗಿತ್ತು. ಅವರ ಅಂತಿಮ ದರ್ಶನ ಪಡೆಯಲು ಸಾಧ್ಯವಾಗಿದ್ದು ನನ್ನ ಪುಣ್ಯ. ಅವರ ಬಗ್ಗೆ ನನ್ನ ಕೆಲವು ಅನಿಸಿಕೆಗಳನ್ನು ಲೇಖನವೊಂದರ ಮೂಲಕ ತಿಳಿಸಿದ್ದೇನೆ, ಅದನ್ನು ಅಭಿಮತದಲ್ಲಿ ಪ್ರಕಟಿಸಬೇಕೆಂದು ವಿನಂತಿಸುತ್ತೇನೆ, ಎಲ್ಲರಿಗೂ ಉಪಯೋಗಿಯಾಗುವಂತಹ ಭಾರತ ನಿರ್ಮಾಣ ಬುಕ್‌ಲೆಟ್ ಅನ್ನು ಅವರು ಹೊರ ತಂದಿದ್ದರು. ಪ್ರತಿಯೊಂದು ವಿಷಯವನ್ನು ಸಣ್ಣವರಿಂದ ದೊಡ್ಡವರ ಜೊತೆ ಚರ್ಚಿಸಿ ಆಮೇಲೆ ನಿರ್ಧಾರ ತೆಗೆದುಕೊಳ್ಳುತ್ತಿದ್ದರು. ಕರ್ನಾಟಕ ಭವನದಲ್ಲಿ ನಾನು ಕೆಲಸ ಮಾಡುತ್ತಿದ್ದ ಸಮಯ ನಾವು ನಡೆದು ಬಂದ ದಾರಿಯನ್ನು ನಾವೆಂದಿಗೂ ಮರೆಯಬಾರದು ಎಂದು ಅವರು ಹೇಳುತ್ತಿದ್ದರು. ಅವರನ್ನು ನೆನೆಸಿಕೊಂಡು ಯೋಜನಾ ಕಮಿಷನ್ ಕಚೇರಿಯ ಸಿಬ್ಬಂದಿಗಳು ಈಗಲೂ ಅಳುತ್ತಾರೆ. ಕಠಿಣ ಪರಿಶ್ರಮ ಮಾಡುವವರನ್ನು ಕಂಡರೆ ಅವರಿಗೆ ಬಹಳ ಪ್ರೀತಿ, ಅವರು ಅಪಾರ ದೈವ ಭಕ್ತರಾಗಿದ್ದರು. ಬೈಕೆರೆಯಲ್ಲಿ ಶ್ರೀರಾಮೇಶ್ವರ ಮಂದಿರ ಹಾಗು ಇನ್ನೂ ಹಲವಾರು ದೇವಸ್ಥಾನಗಳ ಜೀರ್ಣೋದ್ಧಾರಕ್ಕೆ ಧನ ಸಹಾಯ ಮಾಡಿದ್ದಾರೆ. ನನಗೆ ಬಹಳ ಆತ್ಮೀಯರಾಗಿದ್ದ ಅವರಿಗೆ ನನ್ನ ಶ್ರದ್ಧಾಂಜಲಿ ಎಂದರು.

ಕರ್ನಾಟಕ ಸರ್ಕಾರದ ಅಧಿಕಾರಿಯಾಗಿರುವ ಶ್ರೀ ಮಂಜು ಗೌಡ ಅವರು ಮಾತನಾಡಿ ಶ್ರೀ ನಾಗೇಶ್‌ರವರು ತಮಗೆ 1998ರಿಂದ ಪರಿಚಯ, 2004 ರಿಂದ 2009ರವರೆಗೆ ಅವರೊಟ್ಟಿಗೆ ಕೆಲಸ ಮಾಡಿದ್ದೇನೆ. ಅವರೊಬ್ಬ ಮೇಧಾವಿ ಹಾಗು ಸ್ನೇಹಜೀವಿ ಆಗಿದ್ದ ಅವರ ಆತ್ಮಕ್ಕೆ ಶಾಂತಿ ಸಿಗಲಿ ಎಂದರು. ಶ್ರೀಮತಿ ಪ್ರತಿಭಾ ಮಂಜುಗೌಡ ಅವರು ಮಾತನಾಡಿ 2007ರಲ್ಲಿ ಅವರು ಪ್ಲಾನಿಂಗ್ ಕಮಿಷನ್‌ನಲ್ಲಿ ಇದ್ದಾಗ ತಮಗೆ ಅವರ ಮತ್ತು ಕುಟುಂಬದ ಪರಿಚಯವಾಯಿತು. ಅವರು ನನಗೆ ದೆಹಲಿಗೆ ಬಂದಾಗ ಮುಂದಿನ ಜೀವನದ ಬಗ್ಗೆ ಧೈರ್ಯ ತುಂಬಿ ಕೊಟ್ಟವರು, ನನ್ನ ಪತಿ ಮಂಜುಗೌಡ ಅವರನ್ನು ತಮ್ಮ ಮಗನಂತೆ ನೋಡಿಕೊಳ್ಳುತ್ತಿದ್ದರು. ಅವರ ಅತಿಥಿ ಸತ್ಕಾರ ಬಹಳ ವಿಶೇಷವಾಗಿತ್ತು ಅವರಿಗೆ ನನ್ನ ನಮನಗಳು ಎಂದರು.

ದೆಹಲಿ ಕೊಡವ ಸಮಾಜದ ಅಧ್ಯಕ್ಷರಾಗಿರುವ ಶ್ರೀ ಕಾರಿಯಪ್ಪ ಅವರು ಮಾತನಾಡಿ ಶ್ರೀ ನಾಗೇಶ್ ಅವರನ್ನು ನಾನು ಆಗಾಗ್ಗೆ ಭೇಟಿಯಾಗುತ್ತಿದ್ದೆ, He was an unique human being, he would listen to most ordinary person and help him out. Earlier for two years some of the central Government grants used to lapse, so when he was special representative to Govt., of Karnataka in Delhi, to educate the people he came out with a Hand Book to MPs and Government officers My wife happened to visit Sakleshpur and paid tribute during his last rites, God should support his wife and daughter ಎಂದರು.

ದೆಹಲಿ ಕರ್ನಾಟಕ ಸಂಘದ ಮಾಜಿ ಉಪಾಧ್ಯಕ್ಷರಾದ ವಿಜ್ಞಾನಿ ಡಾ. ಎಂ.ಎಸ್. ಶಶಿಕುಮಾರ್ ಅವರು ಮಾತನಾಡಿ ಶ್ರೀ ಬೈಕೆರೆ ನಾಗೇಶ್ ಅವರು ಒಬ್ಬ ನಿಷ್ಠಾವಂತ, ಸರಳ, ಸಜ್ಜನ, ಸೃಜನಶೀಲ Down to Earth ವ್ಯಕ್ತಿಯಾಗಿದ್ದರು. ಅವರು ಅನೇಕ ಸಚಿವರ ಜೊತೆ ಕೆಲಸ ಮಾಡಿದ ಅನುಭವದೊಂದಿಗೆ ಕನ್ನಡಿಗರ, ಕರ್ನಾಟಕದ ಏಳಿಗೆಗೆ ದುಡಿದವರು. ತಾವು ಕೆಲಸ ಮಾಡುತ್ತಿರುವ ಭಾರತ ಸರ್ಕಾರದ ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವಾಲಯದಲ್ಲಿ ಈ ಹಿಂದೆ ತಮ್ಮನ್ನು ಅವರು ಬೆಂಗಳೂರಿನ ಇನ್ಫೋಸೀಸ್‌ನ ಸಬ್ಸಿಡರಿ ಕಂಪನಿಯಾದ Edgeverve Systems ನ ಜಜ್ಜರ್‌ನಲ್ಲಿನ AIIMS ಕ್ಯಾನ್ಸರ್ ಹಾಸ್ಪಿಟಲ್ ಸಂಬಂಧ ಸಹಾಯ ಮಾಡಲು ಕೋರಿಕೊಂಡಿದ್ದರು. ನನ್ನ ವಿಭಾಗದ ಕೆಲಸವಲ್ಲದಿದ್ದರೂ ಅವರೊಂದಿಗೆ ಸಹಕರಿಸಿ, ಆ ಕಾರ್ಯ ಸುಗಮವಾಗಿ ಮಾಡಿಸಿಕೊಟ್ಟ ನಿದರ್ಶನವನನ್ನು ನೆನಪಿಸುತ್ತಾ ಕನ್ನಡಿಗರಿಗೆ ಸಹಾಯ ಮಾಡುವುದರಿಂದ ಆತ್ಮತೃಪ್ತಿ ಸಿಗುತ್ತದೆ ಎಂದು ತಮ್ಮಲ್ಲಿ ಹಂಚಿಕೊಂಡು ಸಂತಸಪಟ್ಟಿದ್ದ ನಿದರ್ಶನವನ್ನು ನೆನಪಿಸಿಕೊಂಡರು. ಕನ್ನಡಪರ ಸದಾ ಯೋಚನೆ ಮಾಡುತ್ತಿದ್ದ ಅಂತಹ ವ್ಯಕ್ತಿಗಳು ಸಿಗುವುದು ಬಹಳ ಅಪರೂಪ, ಅವರ ಆತ್ಮಕ್ಕೆ ಮೋಕ್ಷ ಸಿಗಲಿ ಎಂದು ಪ್ರಾರ್ಥಿಸಿದರು.

ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಯ ಉಪಾಧ್ಯಕ್ಷರಾದ ಡಾ. ವೈ. ಅವನೀಂದ್ರನಾಥ್ ರಾವ್ ಅವರು ಮಾತನಾಡಿ ಶ್ರೀ ನಾಗೇಶ್ ಅವರೊಬ್ಬ ಸರಳ ವ್ಯಕ್ತಿಯಾಗಿದ್ದರು. ಶಾಸ್ತ್ರಿ ಭವನದಲ್ಲಿ ಈ ಹಿಂದೆ ಶ್ರೀ ಅನಂತಕುಮಾರ್ ಅವರ ಜೊತೆ ಕೆಲಸ ಮಾಡುವ ಸಮಯ ಶ್ರೀ ನಾಗೇಶ್ ಅವರು ಸರ್ಕಾರದ ಅಂಕಿ ಅಂಶಗಳು, ಯೋಜನೆಗಳ ಬಗ್ಗೆ ವಿವರಗಳನ್ನು ಕನ್ನಡದಲ್ಲಿ ಹೊರ ತಂದಿರುವುದು ಶ್ಲಾಘನೀಯ ಕಾರ್ಯ. ಸರ್ಕಾರದ ಕೆಲಸ ದೇವರ ಕೆಲಸವೆಂದು ಅವರು ಭಾವಿಸಿದ್ದರು. ತಮ್ಮ ಸಂಪರ್ಕದಲ್ಲಿ ಬಂದವರಿಗೆಲ್ಲಾ ಅವರು ಬಹಳ ಆತ್ಮೀಯರಾಗಿದ್ದರು, ಎಷ್ಟೋ ಜನರಿಗೆ ಸಮಸ್ಯೆ ದೂರಪಡಿಸಿ ಪಿಂಚಣಿ ಸಿಗುವಂತೆ ನೆರವಾಗಿದ್ದರು. ಅವರ ಸಾವೊಂದು ಸತ್ಯ, ಆದರೆ ಉಳಿದುಕೊಳ್ಳುವುದು ಅದರ ಆದರ್ಶ, ಅದನ್ನು ಇತರರು ಪಾಲಿಸಿಕೊಂಡು ಹೋಗಬೇಕು, ಅವರಿಗೆ ಭಾವಪೂರ್ಣ ಶ್ರದ್ಧಾಂಜಲಿ ಅರ್ಪಿಸುತ್ತೇನೆ ಎಂದರು.

ಸ್ನೇಹಾ ದೆಹಲಿ ಕನ್ನಡ ಲೇಡೀಸ್ ಅಸೋಸಿಯೇಶನ್‌ನ ಅಧ್ಯಕ್ಷೆಯಾದ ಶ್ರೀಮತಿ ಸರೋಜ ಮಾಧವ ಅವರು ಮಾತನಾಡಿ ಶ್ರೀ ನಾಗೇಶ್ ಹಾಗು ಅವರ ಪತ್ನಿ ಶ್ರೀಮತಿ ಸುಗುಣಾ ನಾಗೇಶ್ ಅವರು ದೆಹಲಿಯಲ್ಲಿ ಯಾವಾಗಲೂ ಆಕ್ಟಿವ್ ಆಗಿದ್ದರು, ಇಬ್ಬರೂ ದೈವ ಭಕ್ತರು. ಲೇಡೀಸ್ ಅಸೋಸಿಯೇಶನ್‌ಗೆ ತುಂಬಾ ಸಹಾಯ ಮಾಡಿದ್ದರು. ರಾಷ್ಟ್ರಪತಿ ಭವನ, ಸಂಸತ್ ಭವನ ವೀಕ್ಷಣೆಗೆ ನಮ್ಮ ಸದಸ್ಯೆಯರಿಗೆ ಅನುವು ಮಾಡಿಕೊಟ್ಟಿದ್ದರು. ಅವರು ನನ್ನ ಸ್ವಂತ ತಮ್ಮನ ಹಾಗೆ ನನ್ನೊಂದಿಗೆ ನಡೆದುಕೊಂಡಿದ್ದರು. ಪ್ರತಿ ಹಬ್ಬದ ದಿನಗಳಲ್ಲಿ ಅವರ ಮನೆಯಲ್ಲಿ ನಮಗೆಲ್ಲಾ ಅತಿಥಿ ಸತ್ಕಾರ ನೀಡುತ್ತಿದ್ದರು. ಲೇಡೀಸ್ ಕ್ಲಬ್‌ನ ಎಲ್ಲರಿಗೂ ಕಾಫಿ, ಏಲಕ್ಕಿ, ಜೇನುತುಪ್ಪಗಳನ್ನು ಪ್ರತಿ ವರ್ಷ ಕಳುಹಿಸಿಕೊಡುತ್ತಿದ್ದರು. ಶ್ರೀ ಬಿ.ಎಸ್. ಯಡಿಯೂರಪ್ಪನವರು ಮುಖ್ಯಮಂತ್ರಿಗಳಾಗಿದ್ದ ಸಮಯ ಸ್ನೇಹಾ ದೆಹಲಿ ಕನ್ನಡ ಲೇಡೀಸ್ ಅಸೋಸಿಯೇಶನ್‌ಗೆ ಧನ ಸಹಾಯ ಕೊಡಿಸಿದ್ದರು. ಜನರ ಸೇವೆಯೇ ದೇವರ ಭಕ್ತಿ, ಜನರ ಕಷ್ಟವೇ ತಮ್ಮ ಕಷ್ಟವೆಂದು ಭಾವಿಸುತ್ತಿದ್ದ ಶ್ರೇಷ್ಠ ಮಾನವ ಅವರಾಗಿದ್ದರು. ಅವರಿಗೆ ದೇವರು ಮುಕ್ತಿ ನೀಡಲಿ, ಪತ್ನಿ ಹಾಗೂ ಮಗಳಿಗೆ ಧೈರ್ಯ ನೀಡಲಿ ಎಂದು ಪ್ರಾರ್ಥಿಸುತ್ತೇನೆ ಎಂದರು.


ದೆಹಲಿ ಕನ್ನಡಿಗ ಶ್ರೀ ನರಸಿಂಹಮೂರ್ತಿ ಅವರು ಮಾತನಾಡುತ್ತಾ ಶ್ರೀ ನಾಗೇಶ್ ಅವರು ತಮಗೆ ಪರಿಚಯವಿರಲಿಲ್ಲ, ಆದರೆ ಅವರ ಹೆಸರು ದೆಹಲಿ ಕರ್ನಾಟಕ ಸಂಘದ ಗೋಡೆ ಗೋಡೆಗಳಲ್ಲಿ ಪ್ರತಿಧ್ವನಿಸುತ್ತಿದೆ, ಸರ್ಕಾರಿ ಕೆಲಸ ದೇವರ ಕೆಲಸವೆಂದು ಶ್ರದ್ಧೆಯಿಂದ ತಮ್ಮ ಕೆಲಸವನ್ನು ಅವರು ಮಾಡಿರುವುದನ್ನು ಕೇಳಿದ್ದೇನೆ, ಕರ್ನಾಟಕದಿಂದ ದೆಹಲಿಯಲ್ಲಿ ಹೆಚ್ಚುವರಿ ಪ್ರತಿನಿಧಿಯಾಗಿ ಬಂದು ಕೇಂದ್ರ ಮತ್ತು ರಾಜ್ಯದ ನಡುವೆ ಅವರು ಕೊಂಡಿಯಾಗಿದ್ದರು. ಎಲ್ಲರಿಗೂ ಉಪಯೋಗವಾಗುವ ಕೈಪಿಡಿ ತಂದಿದ್ದು ಅತ್ಯಂತ ಶ್ರೇಯವಾದ ಕೆಲಸ. ನಮ್ಮ ಸಂಸದರು ಸಂಸತ್ತಿನಲ್ಲಿ ಚರ್ಚೆ ಮಾಡಿ ಕರ್ನಾಟಕಕ್ಕೆ ಕೇಂದ್ರದ ಯೋಜನೆಗಳು ಹಾಗು ಹಣ ಸುಗಮವಾಗಿ ಬರುವಂತೆ ಮಾಡಲು ಅವರು ಶ್ರಮಿಸಿದ್ದರು. ಹೆಸರಾಯಿತು ಕರ್ನಾಟಕ ಆಡಳಿತಾತ್ಮಕ ಮಾತಾದರೆ, ಉಸಿರಾಗಲಿ ಕನ್ನಡ ಎನ್ನುವುದು ಅವರ ಆತ್ಮಕ್ಕೆ ಹತ್ತಿರವಾದ ಮಾತಾಗಿತ್ತು. ಪಾಪಿ ಚಿರಾಯು, ತೀರಿಕೊಂಡವರು ಪುಣ್ಯಾತ್ಮರು ಎಂಬಂತೆ ಅವರಿಗೆ ಸದ್ಗತಿ ದೊರೆತಿದೆ, ಅವರ ಆತ್ಮಕ್ಕೆ ಮೋಕ್ಷ ಸಿಗಲಿ ಎಂದು ಆಶಿಸಿದರು.

ಶ್ರದ್ಧಾಂಜಲಿ ಸಭೆಯ ಕೊನೆಯಲ್ಲಿ ನುಡಿನಮನ ನೀಡಿದ ಎಲ್ಲಾ ಗಣ್ಯರಿಗೂ ಹಾಗು ಉತ್ತಮ ಸಂಖ್ಯೆಯಲ್ಲಿ ಭಾಗಿಯಾದ ದೆಹಲಿ ಕನ್ನಡಿಗರು, ಮಕ್ಕಳು ಮತ್ತು ಮಹಿಳೆಯರಿಗೆ ಸಂಘದ ಅಧ್ಯಕ್ಷ ಶ್ರೀ ಸಿ.ಎಂ. ನಾಗರಾಜ ಅವರು ವಂದನೆಗಳನ್ನು ಅರ್ಪಿಸಿದರು.

ಸಮಸ್ತ ದೆಹಲಿ ಕನ್ನಡಿಗರ ಪರವಾಗಿ ದಿವಂಗತ ಶ್ರೀ ಬೈಕೆರೆ ನಾಗೇಶ್ ಅವರಿಗೆ ಭಾವಪೂರ್ಣ ಶ್ರದ್ಧಾಂಜಲಿಯನ್ನು ಅರ್ಪಿಸುತ್ತಾ ಅವರ ಕುಟುಂಬದವರಿಗೆ ಅವರ ಅಗಲಿಕೆಯ ದುಃಖ ಭರಿಸುವ ಶಕ್ತಿಯನ್ನು ಭಗವಂತನು ನೀಡಲಿ ಎಂದು ದೆಹಲಿ ಕರ್ನಾಟಕ ಸಂಘವು ಪ್ರಾರ್ಥಿಸುತ್ತದೆ.

***ಅಭಿಮತ ವರದಿ***

# ಹಳ್ಳಿ-ದೆಹಲಿ ನಡುವಣ ಸೇತುವೆಯಾಗಿದ್ದ ಶ್ರೀ ಬೈಕೆರೆ ನಾಗೇಶ್



ಹಾಸನ ಜಿಲ್ಲೆಯ ಸಕಲೇಶಪುರ ತಾಲ್ಲೂಕಿನ ಬೈಕೆರೆ ಎಂಬ ಕುಗ್ರಾಮದಲ್ಲಿ ದಿನಾಂಕ 27.03.1951ರಂದು ಜನಿಸಿದ್ದ ಬೈಕೆರೆ ನಾಗೇಶ್ ಹಳ್ಳಿ ಮತ್ತು ದೆಹಲಿಯ ನಡುವಣ ಸೇತುವೆ ಎಂಬ ಹೆಗ್ಗಳಿಕೆಗೆ ಗುರಿಯಾಗಿದ್ದರು.

ಬೆಂಗಳೂರು ವಿಶ್ವವಿದ್ಯಾಲಯದಿಂದ ಪದವಿ ಪಡೆದ ಬೈಕೆರೆ ನಾಗೇಶ್ ಅವರು ಮೈಸೂರು ವಿಶ್ವ ವಿದ್ಯಾಲಯದಿಂದ ರಾಜಕೀಯ ಶಾಸ್ತ್ರದಲ್ಲಿ ಎಂ.ಎ. ಪದವಿಯನ್ನು ಪಡೆದಿದ್ದರು. ರಾಜ್ಯ ಸರ್ಕಾರದ ಉದ್ಯಮ ಸಂಸ್ಥೆಯೊಂದರಲ್ಲಿ ತಮ್ಮ ವೃತ್ತಿ ಜೀವನವನ್ನು ಪ್ರಾರಂಭಿಸಿದ ಅವರು 1989ರಲ್ಲಿ ದೆಹಲಿಯತ್ತ ಸಾಗಿದ್ದರು. 1989 ರಿಂದ 2019ರ ತನಕ ಬೈಕರೆ ನಾಗೇಶ್ ಅವರ ದೆಹಲಿಯಲ್ಲಿನ ಜೀವನ ಮತ್ತು ನೀಡಿದ ಸೇವೆ ಅವಿಸ್ಮರಣೀಯ ಅಜರಾಮರ.

1989 ರಿಂದ 1990ರವರೆಗೆ ಅಂದಿನ ಭಾರತ ಸರ್ಕಾರದ ಪೆಟ್ರೋಲಿಯಂ ಸಚಿವರಾದ ಶ್ರೀ ಎಂ.ಎಸ್. ಗುರುಪಾದ ಸ್ವಾಮಿಯವರ ವಿಶೇಷ ಕರ್ತವ್ಯಾಧಿಕಾರಿಯಾಗಿ ದೆಹಲಿಯಲ್ಲಿ ಸೇವೆ ಪ್ರಾರಂಭಿಸಿದ ಅವರು ನಾಡು ನುಡಿಯ ಸೇವೆಗೆ ಕಂಕಣ ಬದ್ದರಾದರು. ಇದುವೇ ಸನ್ಮಾರ್ಗ ಎಂಬುದನ್ನು 1989ರಲ್ಲಿಯೇ ಅರಿತ ನಾಗೇಶ್‌ರವರು ದೆಹಲಿಯಲ್ಲಿಯೇ ಟಿಕ್ಕಾಣಿ ಹೂಡಿದ್ದರು. ಹಳ್ಳಿಯ ಅಭಿವೃದ್ಧಿಯಿಂದ ತಾಲ್ಲೂಕಿನ ಅಭಿವೃದ್ಧಿ, ತಾಲ್ಲೂಕಿನ ಅಭಿವೃದ್ಧಿಯಿಂದ ಜಿಲ್ಲೆಯ ಅಭಿವೃದ್ಧಿ, ಜಿಲ್ಲೆಯ ಅಭಿವೃದ್ಧಿಯಿಂದ ರಾಜ್ಯದ ಅಭಿವೃದ್ಧಿ ಎಂಬ ಧ್ಯೇಯಕ್ಕೆ ಕಟ್ಟುಬಿದ್ದ ಬೈಕೆರೆ ನಾಗೇಶ್‌ರವರು ರಾಷ್ಟ್ರದ ರಾಜಧಾನಿಯಲ್ಲಿ ಸತತ 30 ವರುಷಗಳ ಕಾಲ ಭಾರತ ಸರ್ಕಾರದಲ್ಲಿ ಸೇವೆ ಸಲ್ಲಿಸಿ, ರಾಜ್ಯದ ಅಭಿವೃದ್ಧಿಗೆ ಸಹಕರಿಸಿ ಜನಮನ್ನಣೆ ಗಳಿಸಿದ್ದರು.

1990–1991ರವರೆಗೆ ಡಾ. ಸಂಜಯ ಸಿಂಗ್ (ಸಂಪರ್ಕ ಸಚಿವರು), 1991–1996ರವರೆಗೆ ಅಂದಿನ ರೈಲ್ವೇ ಸಚಿವರಾದ ಶ್ರೀ ಸಿ.ಕೆ. ಜಾಫರ್ ಷರೀಫ್ ಅವರ ವಿಶೇಷ ಕರ್ತವ್ಯಾಧಿಕಾರಿಯಾಗಿ ಬೈಕೆರೆ ನಾಗೇಶ್‌ರವರು ಸೇವೆ ಸಲ್ಲಿಸಿದ್ದಾರೆ. ರೈಲ್ವೇ ಸಚಿವಾಲಯದಲ್ಲಿನ ಸೇವಾ ಅವಧಿಯಲ್ಲಿ ಅವರು ತಮ್ಮ ಹಳ್ಳಿ ಬೈಕೆರೆಗೆ ಹತ್ತಾರು ರೈಲ್ವೇ ಅಭಿವೃದ್ಧಿ / ಸೌಕರ್ಯ ನೀಡಿ ಗ್ರಾಮೀಣ ಅಭಿವೃದ್ಧಿಯ ಹರಿಕಾರರಾದರು. ಅಂದಿನ ರೈಲ್ವೇ ಸಚಿವರಾದ ಶ್ರೀ ಜಾಫರ್ ಷರೀಫ್ ಖುದ್ದು ಬೈಕೆರೆ ಗ್ರಾಮಕ್ಕೆ ಭೇಟಿ ನೀಡಿದ್ದರು. ಆ ಮಟ್ಟಕ್ಕೆ ಬೈಕೆರೆ ನಾಗೇಶ್ ಕರ್ತವ್ಯದಲ್ಲಿ ತಮ್ಮ ಛಾಪನ್ನು ಮೂಡಿಸಿದ್ದರು.

ತದನಂತರ ಬೈಕೆರೆ ನಾಗೇಶ್ ಅವರು, ಭಾರತ ಸರ್ಕಾರದ ನೇಮಕಾತಿಯಂತೆ ಈ ಕೆಳಗೆ ನಮೂದಿಸಿರುವ ಪ್ರಧಾನ ಮಂತ್ರಿಗಳು ಹಾಗೂ ಕೇಂದ್ರದ ಸಚಿವರೊಂದಿಗೆ ಕರ್ತವ್ಯ ನಿರ್ವಹಿಸಿದ್ದಾರೆ.

- 1996–97 : ಶ್ರೀ ಹೆಚ್.ಡಿ. ದೇವೇಗೌಡ, ಮಾನ್ಯ ಪ್ರಧಾನ ಮಂತ್ರಿಗಳು
- 1998–99: ಶ್ರೀ ರಾಮಕೃಷ್ಣ ಹೆಗಡೆ, ವಾಣಿಜ್ಯ ಸಚಿವರು, ಭಾರತ ಸರ್ಕಾರ
- 2000–2001 : ಶ್ರೀ ವಿ. ಧನಂಜಯ್ ಕುಮಾರ್ : ಹಣಕಾಸು ಸಚಿವರು, ಭಾರತ ಸರ್ಕಾರ
- 2001–2002 : ಪ್ರೊ. ಚಮನ್ ಲಾಲ್ ಗುಪ್ತ, ಆಹಾರ ಸಂಸ್ಕರಣಾ ಸಚಿವರು, ಭಾರತ ಸರ್ಕಾರ
- 2002–2004 : ಪ್ರೊ. ಚಮನ್ ಲಾಲ್ ಗುಪ್ತ : ರಕ್ಷಣಾ ಸಚಿವರು, ಭಾರತ ಸರ್ಕಾರ
- 2004–2008 : ಶ್ರೀ ಎಂ.ವಿ. ರಾಜಶೇಖರನ್, ಕೇಂದ್ರ ಯೋಜನಾ ಮಂತಿಗಳು, ಯೋಜನಾ ಭವನ, ನವದೆಹಲಿ.
- 2008–2008 ಶ್ರೀ ವಿ. ನಾರಾಯಣ ಸ್ವಾಮಿ, ಯೋಜನಾ ಆಯೋಗ ಮತ್ತು ಸಂಸದೀಯ ವ್ಯವಹಾರಗಳ ಸಚಿವರು, ಭಾರತ ಸರ್ಕಾರ.

ಓರ್ವ ಉತ್ತಮ ವಾಗ್ಮಿ, ಹಸನ್ಮುಖಿ ಹಾಗೂ ಸ್ನೇಹಮಯಿ ಆಕರ್ಷಣೀಯ ವ್ಯಕ್ತಿತ್ವದ ಬೈಕೆರೆ ನಾಗೇಶ್‌ರವರು ಕೇಂದ್ರ ಸರ್ಕಾರದ ಹತ್ತಾರು ಹಿರಿಯ ಅಧಿಕಾರಿಗಳನ್ನು ತಮ್ಮತ್ತ ಸೆಳೆಯುವ ಹೃದಯ ವೈಶಾಲ್ಯತೆಯನ್ನು ಹೊಂದಿದ್ದರು. ಹೀಗಾಗಿ ಅಂದು ಕುಗ್ರಾಮವಾಗಿದ್ದ ಬೈಕೆರೆಯನ್ನು ರಾಜ್ಯ ಸರ್ಕಾರದಿಂದ ಹಾಗೂ ಕೇಂದ್ರ ಸರ್ಕಾರದಿಂದ ಹತ್ತಾರು ಸೌಲಭ್ಯವನ್ನು ಒದಗಿಸಿ ಇಂದು ಮಾದರಿ ಗ್ರಾಮವನ್ನಾಗಿ ಪರಿವರ್ತಿಸಿದ್ದಾರೆ. ಪ್ರಸ್ತುತ ತಮ್ಮದಾದರೂ ಗ್ರಾಮದ ಅಭಿವೃದ್ಧಿಗೆ ಸಹಕರಿಸಿದ ಮಾನ್ಯ ಸಂಸದರುಗಳನ್ನು, ಮಾನ್ಯ ಶಾಸಕರುಗಳನ್ನು, ರಾಜ್ಯ ಮತ್ತು ಕೇಂದ್ರ ಸರ್ಕಾರಗಳ ಅಧಿಕಾರಿಗಳನ್ನು ಬೈಕೆರೆ ನಾಗೇಶ್ ಅವರು ಸದಾ ಸ್ಮರಿಸುತ್ತಿದ್ದರು.

ಕೇಂದ್ರದಲ್ಲಿನ ಇವರ ಸುದೀರ್ಘ ಅನುಭವವನ್ನು ಮನಗಂಡ ಕರ್ನಾಟಕ ಸರ್ಕಾರವು 2008–2013ರವರೆಗೆ ಶ್ರೀ ಬೈಕೆರೆ ನಾಗೇಶ್ ಅವರಿಗೆ ರಾಜ್ಯ ಸಚಿವ ಸ್ಥಾನಮಾನವನ್ನು ನೀಡಿ ದೆಹಲಿಯಲ್ಲಿ ಕರ್ನಾಟಕ ರಾಜ್ಯದ ಅಪರ ವಿಶೇಷ ಪ್ರತಿನಿಧಿಯನ್ನಾಗಿ ನೇಮಕಗೊಳಿಸಿತ್ತು. ತಮ್ಮ ಅನುಭವ ಮತ್ತು ಕೇಂದ್ರ ಸರ್ಕಾರದಲ್ಲಿನ ಹಿರಿಯ ಅಧಿಕಾರಿಗಳ ಸಂಪರ್ಕ ಹೊಂದಿದ್ದ ನಾಗೇಶ್ ಅವರು ಭಾರತ ಸರ್ಕಾರದಿಂದ ಅತೀ ಹೆಚ್ಚಿನ ಅನುದಾನವನ್ನು ರಾಜ್ಯಕ್ಕೆ ಕೊಡಿಸುವಲ್ಲಿ ಯಶಸ್ವಿಯಾಗಿದ್ದರು. ಅವರನ್ನು ಎಲ್ಲಾ ಪಕ್ಷದ ಜನಪ್ರತಿನಿಧಿಗಳು ಪ್ರಶಂಸಿಸುತ್ತಿದ್ದರು.

ಸತತ 5 ವರ್ಷಗಳ ಕಾಲ "ಭಾರತ್ ನಿರ್ಮಾಣ್" ಎಂಬ ಶೀರ್ಷಿಕೆಯಡಿಯಲ್ಲಿ ಕೇಂದ್ರದ ಫ್ಲಾಗ್‌ಶಿಪ್ ಯೋಜನೆಗಳ ಕುರಿತಾದ ಕೈಪಿಡಿ ಸಿದ್ಧಪಡಿಸಿ, ರಾಜ್ಯಕ್ಕೆ ಬಿಡುಗಡೆಯಾದ ಅನುದಾನಗಳ ಮಾಹಿತಿಯನ್ನು ರಾಜ್ಯದ ಪ್ರತಿಯೊಬ್ಬ ಮಾನ್ಯ ಸಚಿವರಿಗೆ, ಪ್ರತಿ ಇಲಾಖೆಯ ಅಧಿಕಾರಿಗಳಿಗೆ, ಜಿಲ್ಲಾ ಮಟ್ಟದ ಅಧಿಕಾರಿಗಳಿಗೆ ಯೋಜನೆಗಳ ಮಾಹಿತಿಯನ್ನು ಪೂರೈಸುವಲ್ಲಿ ಸಫಲರಾಗಿದ್ದರು. ಕೇಂದ್ರದ ಹತ್ತಾರು ಯೋಜನೆಗಳು ಜನಮನಕ್ಕೆ ತಲುಪುವಲ್ಲಿ ಈ ಕೈಪಿಡಿ ಸಾಧನವಾಗಿತ್ತು. ರಾಜ್ಯದ ಸನ್ಮಾನ್ಯ ಮುಖ್ಯಮಂತ್ರಿಗಳಾದಿಯಾಗಿ ಕೇಂದ್ರದ ಹಲವಾರು ಮಾನ್ಯ ಸಚಿವರುಗಳು ಮತ್ತು ಅಧಿಕಾರಿಗಳು ಬೈಕೆರೆ ನಾಗೇಶ್ ಅವರ ಈ ಪರಿಶ್ರಮಕ್ಕೆ ಪತ್ರ ಬರೆದು ಶ್ಲಾಘಿಸಿ ಅಭಿನಂದಿಸಿದ್ದರು. ಪಕ್ಷಾತೀತವಾಗಿ ಬೈಕೆರೆ ನಾಗೇಶ್ ಅವಿರತವಾಗಿ ರಾಜ್ಯದ ಅಭಿವೃದ್ಧಿಗಾಗಿ ದೆಹಲಿಯಲ್ಲಿ ದುಡಿದಿದ್ದರು. ಹಲವಾರು ಸಂಘ ಸಂಸ್ಥೆಗಳು ಬೈಕೆರೆ ನಾಗೇಶ್ ಅವರನ್ನು ಅಭಿನಂದಿಸಿ ಗೌರವಿಸಿವೆ. ರಾಜ್ಯದ ಮಾನ್ಯ ಸಂಸದರ ಹುಟ್ಟು ಹಬ್ಬಕ್ಕೆ (ದೆಹಲಿಯಲ್ಲಿದ್ದ ಪಕ್ಷದಲ್ಲಿ) ನಾಗೇಶ್ ಅವರು ಖುದ್ದಾಗಿ ಭೇಟಿಯಾಗಿ ಶುಭಾಶಯ ಕೋರುತ್ತಿದ್ದರು. ಸಂಸತ್ ಅಧಿವೇಶನದ ಸಂದರ್ಭದಲ್ಲಿ ರಾಜ್ಯದ ಪ್ರತಿಯೊಬ್ಬ ಸಂಸದರನ್ನು ಭೇಟಿ ಮಾಡಿ ಅವರವರ ಸಂಸದೀಯ ಕ್ಷೇತ್ರಕ್ಕೆ ಸಂಬಂಧಪಟ್ಟ ಕೆಲಸಗಳ ಬಗ್ಗೆ ಚರ್ಚಿಸಿ ಅದಕ್ಕೆ ಪರಿಹಾರ ಕಂಡುಕೊಳ್ಳುವಲ್ಲಿ ಸಹಕಾರಿಯಾಗಿದ್ದರು. ರಾಜ್ಯದ ಮಾನ್ಯ ಸಚಿವರು ನವದೆಹಲಿಗೆ ಆಗಮಿಸಿದಾಗ ಅವರುಗಳನ್ನು ಖುದ್ದಾಗಿ ಭೇಟಿಯಾಗಿ ಕೇಂದ್ರ ಸರ್ಕಾರದೊಂದಿಗಿನ ಸಮನ್ವಯಕ್ಕೆ ಹೆಚ್ಚಿನ ಬಲವನ್ನು ಅವರು ತುಂಬುತ್ತಿದ್ದರು. ಬೈಕೆರೆ ನಾಗೇಶ್ ಅವರೆ ನೀವು ನಮ್ಮ ರಾಜ್ಯದ ಅನಧಿಕೃತ ಸಂಸದರು ಎಂದು ಕೆಲವರು ಅವರ ಬಗೆ ಹೇಳಿ ನಗಿಸುತ್ತಿದ್ದರು.

ಅನಂತರ ಕೇಂದ್ರ ರಸಾಯನಿಕ ಮತ್ತು ರಸಗೊಬ್ಬರ ಹಾಗೂ ಸಂಸದೀಯ ವ್ಯವಹಾರಗಳ ಸಚಿವರಾಗಿದ್ದ ಶ್ರೀ ಅನಂತ ಕುಮಾರ್ ಅವರ ಸಲಹೆಗಾರರಾಗಿ 2014 ರಿಂದ 2018ರವರೆಗೆ ಶ್ರೀ ಬೈಕೆರೆ ನಾಗೇಶ್ ಅವರು ಕರ್ತವ್ಯ ನಿರ್ವಹಿಸಿದ್ದರು. 2018–2019ರವರೆಗಿನ ಮಧ್ಯಂತರದ ಅವಧಿಯಲ್ಲಿ ರಾಜ್ಯದ ಮಾಜಿ ಮುಖ್ಯಮಂತ್ರಿಗಳು ಹಾಗೂ ಕೇಂದ್ರ ಸಚಿವರಾದ ಶ್ರೀ ಡಿ.ವಿ. ಸದಾನಂದ ಗೌಡರ ಸಲಹೆಗಾರರಾಗಿ ಕಾರ್ಯ ನಿರ್ವಹಿಸಿದ ಖ್ಯಾತಿ ನಾಗೇಶ್ ಅವರದ್ದು.

ಅಭಿವೃದ್ಧಿಯ ಹರಿಕಾರರೆಂಬಂತೆ, ಬೈಕೆರೆಗೆ ಮೂಲಭೂತ ಸೌಕರ್ಯ, ರೈಲ್ವೇ ಪಾದಚಾರಿ ಸೇತುವೆ, ಸುಸಜ್ಜಿತ ರೈಲ್ವೇ ನಿಲ್ದಾಣ, ಕುಡಿಯುವ ನೀರಿನ ವ್ಯವಸ್ಥೆ, ಅಂಚೆ ಕಛೇರಿ, ಅಂಗನವಾಡಿ ಶಾಲೆ, ರೈತ ವಾರ್ತಾ ಕೇಂದ್ರ, ಆರೋಗ್ಯ ಘಟಕ, ಪಶು ಚಿಕಿತ್ಸಾಲಯ. ರಸ್ತೆ, ಚರಂಡಿ ವ್ಯವಸ್ಥೆ, ಸೇತುವೆಗಳ ನಿರ್ಮಾಣ, ಬಸ್ಸು ತಂಗುದಾಣ, ಕೆರೆಗಳ ದುರಸ್ತಿ, ಮೊಬೈಲ್ ಟವರ್, ಅಂಬೇಡ್ಕರ್ ಭವನ ಇತ್ಯಾದಿ ಸೌಕರ್ಯಗಳನ್ನು ಒದಗಿಸಿಕೊಟ್ಟು ಗ್ರಾಮಸ್ಥರ ಮೆಚ್ಚುಗೆಗೆ ಪಾತ್ರರಾಗಿದ್ದರು ಬೈಕೆರೆ ನಾಗೇಶ್.



ಚಿಕ್ಕಮಗಳೂರು–ಬೇಲೂರು–ಹಾಸನ ರೈಲು ಮಾರ್ಗ ಪ್ರಸ್ತಾವನೆ ವಿಚಾರವಾಗಿ ರಾಜ್ಯದ ಸಂಸದರಿಗೆ, ಜನಪ್ರತಿನಿಧಿಗಳಿಗೆ ಮತ್ತು ರಾಜ್ಯ ಸರ್ಕಾರದ ಅಧಿಕಾರಿಗಳಿಗೆ ಸಹಕಾರಿಯಾಗಿ ಬೈಕೆರೆ ನಾಗೇಶ್ ಅವರು ದೆಹಲಿಯಲ್ಲಿ ದುಡಿದಿದ್ದಾರೆ. ಈ ಭಾಗದ ಕಾಫಿ ಬೆಳೆಗಾರರ ಮತ್ತು ಅಡಿಕೆ ಬೆಳೆಗಾರರ ಸಮಸ್ಯೆಯನ್ನು ಪರಿಹರಿಸುವಲ್ಲಿ ಅವರು ಪರಿಶ್ರಮಿಸಿದ್ದಾರೆ. ಅಂದಿನ ಹಣಕಾಸು ಸಚಿವರಾದ ಶ್ರೀ ಪ್ರಣಬ್ ಮುಖರ್ಜಿ ಅವರ ಬಳಿ ರಾಜ್ಯದ ಮಾನ್ಯ ಸಂಸದರುಗಳ ನಿಯೋಗದೊಂದಿಗೆ ತೆರಳಿ ಕಾಫಿ ಬೆಳೆಗಾರರ ಸಮಸ್ಯೆ ಪರಿಹಾರ ಕಂಡುಕೊಳ್ಳುವಲ್ಲಿ ನಾಗೇಶ್ ಅವರು ಸಹಕಾರಿಯಾಗಿದ್ದರು. ಅದನ್ನು ಇಂದಿಗೂ ರಾಜ್ಯದ ಕಾಫೀ ಬೆಳೆಗಾರರು ನೆನೆಯುತ್ತಾರೆ.

ವಿಶೇಷವಾಗಿ ದೈವಭಕ್ತರಾಗಿದ್ದ ನಾಗೇಶ್‌ರವರು ತಮ್ಮ ಹುಟ್ಟೂರಾದ ಬೈಕೆರೆಯಲ್ಲಿ ಪುರಾತನ ದೇವಳವಾದ ಶ್ರೀರಾಮೇಶ್ವರ ದೇವಸ್ಥಾನವನ್ನು ಜೀರ್ಣೋದ್ಧಾರಗೊಳಿಸಿ ಅಲ್ಲಿ ದಿನನಿತ್ಯದ ಶಾಶ್ವತ ಪೂಜೆಗೆ ಅರ್ಚಕರನ್ನು ನಿಯೋಜಿಸಿ, ಶ್ರೀ ದೇವರ ಕೃಪೆಗೆ ಪಾತ್ರರಾಗಿದ್ದರು. ಆ ಸಂದರ್ಭದಲ್ಲಿ ಕನ್ನಡದ ಮೇರು ನಟ ಡಾ. ರಾಜಕುಮಾರ್ ಬೈಕೆರೆಗೆ ಭೇಟಿ ನೀಡಿರುವುದನ್ನು ನಾಗೇಶ್‌ರವರು ಸದಾ ಸ್ಮರಿಸುತ್ತಿದ್ದರು. 2013ರಲ್ಲಿ ಬೈಕೆರೆಯಲ್ಲಿ ಶ್ರೀ ಸಾಯಿಬಾಬಾ ದೇವಸ್ಥಾನವನ್ನು ಸ್ಥಾಪಿಸಿ, ಅಲ್ಲಿ ಸುಂದರ ಉದ್ಯಾನವನವನ್ನು ಸೃಜಿಸಿ ದಿನನಿತ್ಯ ಪ್ರವಾಸಿಗರನ್ನ ಆಕರ್ಷಿಸುವಲ್ಲಿ ಕಾರಣೀಭೂತರಾಗಿದ್ದಾರೆ. ಶ್ರೀ ಗುಡ್ಡೇಬಸವಣ್ಣ ದೇವಸ್ಥಾನ ಬೈಕೆರೆ ನಾಗೇಶ್‌ರವರು ಸ್ಥಾಪಿಸಿದ ಇನ್ನೊಂದು ದೇವಸ್ಥಾನವಾಗಿದೆ.

ಮಾನವೀಯ ಗುಣಗಳನ್ನು ಬೆಳೆಸಿಕೊಂಡ ಬೈಕೆರೆ ನಾಗೇಶ್‌ರವರು ದೀನದಲಿತರು ಮತ್ತು ಬಡವರ ಬಗ್ಗೆ ಅಪಾರ ಕಾಳಜಿಯನ್ನು ಹೊಂದಿದ್ದರು. ತಮ್ಮ ದುಡಿಮೆಯ ಸಂಪಾದನೆಯಲ್ಲಿ ಕೆಲ ಅಂಶಗಳನ್ನು ಕಷ್ಟದಲ್ಲಿದ್ದವರಿಗೆ ಮತ್ತು ದೇವಸ್ಥಾನದ ಜೀರ್ಣೋದ್ಧಾರಕ್ಕೆ ನೀಡುತ್ತಿದ್ದರು. ದೆಹಲಿ ಕನ್ನಡಿಗರು ತುರ್ತು ಸಂದರ್ಭದಲ್ಲಿ ರಾಜ್ಯಕ್ಕೆ ಪ್ರಯಾಣಿಸಬೇಕಾದ ಅನಿವಾರ್ಯತೆ ಉಂಟಾದಾಗ, ಅವರನ್ನು ಸಂಪರ್ಕಿಸಿದ ಪಕ್ಷದಲ್ಲಿ ವಿಮಾನ ವೆಚ್ಚ ಭರಿಸಿ ಕಷ್ಟದಲ್ಲಿರುವವರು ತಮ್ಮ ತವರಿಗೆ ತಲುಪವಲ್ಲಿ ಸಹಕರಿಸುತ್ತಿದ್ದರು. ಅವರು ಕೇಂದ್ರದಲ್ಲಿ ರೈಲ್ವೇ ಸಚಿವರ ಬಳಿ ಕರ್ತವ್ಯ ನಿರ್ವಹಿಸುತ್ತಿದ್ದಾಗ ರೈಲ್ವೇ ಪ್ರಯಾಣಕ್ಕೆ ಸಹಕರಿಸಿರುವುದನ್ನು ದೆಹಲಿ ಕನ್ನಡಿಗರು ಇಂದಿಗೂ ಸ್ಮರಿಸುತ್ತಿದ್ದಾರೆ. ವಿದೇಶದಲ್ಲಿ ಕನ್ನಡಿಗರು ಸಂಕಷ್ಟದಲ್ಲಿದ್ದಾಗ ಅವರನ್ನು ಸುರಕ್ಷಿತವಾಗಿ ರಾಜ್ಯಕ್ಕೆ ಕರೆಸುವಲ್ಲಿ ಅವರದ್ದು ಎತ್ತಿದ ಕೈ. ಬೈಕೆರೆ ನಾಗೇಶ್ ಅವರು, ಹಸಿದ ಹೊಟ್ಟೆಗೆ ಅನ್ನ ನೀಡುವ ಪುಣ್ಯಾತ್ಮರು, ದೆಹಲಿಯಲ್ಲಿನ ಅವರ ಕಛೇರಿ ದಿನದ 12 ಘಂಟೆ ಆತಿಥ್ಯಕ್ಕೆ ತೆರೆದಿತ್ತು.

ಹಬ್ಬ ಹರಿದಿನಗಳಂದು ದೆಹಲಿಯಲ್ಲಿನ ಅವರ ನಿವಾಸ (21/70 ಲೋಧಿ ರಸ್ತೆ) ದೆಹಲಿ ಕನ್ನಡಿಗರಿಗೆ ಹಬ್ಬದ ಸಂಭ್ರಮ ನೀಡುತ್ತಿತ್ತು. ಕನ್ನಡ ನಾಡಿನ ವಿಶೇಷ ಹಬ್ಬಗಳನ್ನು ಬೈಕೆರೆ ನಾಗೇಶ್ ಮತ್ತು ಕುಟುಂಬದವರು ಸಂಭ್ರಮದಿಂದ ಆಚರಿಸುತ್ತಿದ್ದರು. ದೀಪಾವಳಿ ಹಬ್ಬದ ಸಂದರ್ಭದಲ್ಲಿ ಕನಿಷ್ಟ 3000 ರಿಂದ 5000 ರಷ್ಟು ಅವರ ಆತ್ಮೀಯರ ಮನೆಗೆ ಸಕಲೇಶಪುರದ ಕಾಫಿ ಪೌಡರ್, ಏಲಕ್ಕಿ, ಜೇನುತುಪ್ಪ ಮೆಣಸಿನ ಕಾಳು ತಲುಪುತ್ತಿತ್ತು. ದೀಪಾವಳಿ ಬಂತೆಂದರೆ ದೆಹಲಿಯಲ್ಲಿ ಹತ್ತಾರು ಜನ "ನಾಗೇಶ್ ಜೀ ಏಲಾಚಿ" ಎಂದು ದೂರವಾಣಿ ಕರೆ ನೀಡುತ್ತಿದ್ದರು. ಇಂದಿಗೂ ದೆಹಲಿಯಲ್ಲಿ ಅವರನ್ನು ದೀಪಾವಳಿಯ ಸಮಯದಲ್ಲಿ ಹಲವಾರು ಜನರು ನೆನೆಸುತ್ತಾರೆ.

ಪ್ರತಿ ವರುಷ ಜನವರಿ ತಿಂಗಳಿನಲ್ಲಿ ಶ್ರೀ ರಾಮೇಶ್ವರ ದೇವರ ಫೋಟೋವನ್ನು ಮತ್ತು ಆ ವರ್ಷದ ಕಿರು ಕ್ಯಾಲೆಂಡರನ್ನು ಕರ್ನಾಟಕ ರಾಜ್ಯದ ಸರಿ ಸುಮಾರು 10000 ಮನೆಗಳಿಗೆ ತಲುಪಿಸುತ್ತಿದ್ದರು. ಬೇರೆ ಬೇರೆ ರಾಜ್ಯದಲ್ಲಿನ ತಮ್ಮ ಆತ್ಮೀಯರಿಗೂ ಸಹಾ ಕ್ಯಾಲೆಂಡರ್ ತಲುಪುತ್ತಿತ್ತು. ವಿದೇಶದಲ್ಲಿನ ಮಿತ್ರರಿಗೂ ಸಹಾ ಕ್ಯಾಲೆಂಡರ್ ಕಳುಹಿಸುತ್ತಿದ್ದರು. ತಾಂತ್ರಿಕ ಯುಗದ ಈ ಕಾಲದಲ್ಲೂ ಬೈಕೆರೆ ನಾಗೇಶ್ ಅವರು ಅಂಚೆ ಕಛೇರಿಯ ಮೂಲಕ ಜನಸಾಮಾನ್ಯರ ಮತ್ತು ಮಿತ್ರರ ಮನ ತಲುಪುತ್ತಿದ್ದರು.

ದೆಹಲಿಯಲ್ಲಿ ಸರಿಸುಮಾರು 30 ವರ್ಷಗಳ ಸೇವೆ ಸಲ್ಲಿಸಿದ ಶ್ರೀ ಬೈಕೆರೆ ನಾಗೇಶ್ ಅವರು ಇಲ್ಲಿನ ಕನ್ನಡದ ಮಾದ್ಯಮ ಪ್ರತಿನಿಧಿಗಳೊಂದಿಗೆ ಉತ್ತಮ ಬಾಂಧ್ಯವ್ಯ ಹೊಂದಿದ್ದು, ಅಪಾರ ಪ್ರೀತಿ ವಿಶ್ವಾಸಗಳಿಸಿದ್ದ ಅವರನ್ನು ಪ್ರತಿಯೊಬ್ಬ ಮಾಧ್ಯಮ ಮಿತ್ರರು ಇಂದಿಗೂ ನೆನೆಯುತ್ತಾರೆ. ತಮ್ಮ ಬಳಿ ಕರ್ತವ್ಯ ನಿರ್ವಹಿಸಿದ ಪ್ರತಿಯೊಬ್ಬ ಸಿಬ್ಬಂದಿಯನ್ನು ಹುರಿದುಂಬಿಸಿ, ಪ್ರೋತ್ಸಾಹಿಸಿ ಅವರನ್ನು ನೈಪುಣ್ಯರನ್ನಾಗಿ ಮಾಡುವಲ್ಲಿ ಬೈಕೆರೆ ನಾಗೇಶ್‌ರವರು ಸದಾ ಮುಂಚೂಣಿಯಲ್ಲಿದ್ದರು. ಅವರೊಂದಿಗೆ ಕರ್ತವ್ಯ ನಿರ್ವಹಿಸಿದ ಬಹಳಷ್ಟು ಸಿಬ್ಬಂದಿಗಳು ತಮ್ಮ ಜೀವನ ಕಟ್ಟಿಕೊಳ್ಳುವಲ್ಲಿ ಸಫಲರಾಗಿದ್ದಾರೆ, ಉತ್ತಮವಾದ ಸ್ಥಾನಮಾನವನ್ನು ಕಂಡುಕೊಂಡಿದ್ದಾರೆ. ಕೇಂದ್ರ ಸರ್ಕಾರದಲ್ಲಿನ ಹಲವಾರು ಕಛೇರಿಗಳಲ್ಲಿ ಕನ್ನಡೇತರರು ಸಹ ಬೈಕೆರೆ ನಾಗೇಶ್ ಅವರ ಹೃದಯವಂತಿಕೆಯನ್ನು ಇಂದಿಗೂ ಗುಣಗಾನ ಮಾಡುತ್ತಾರೆ.

2020ರ ಅವಧಿಯಲ್ಲಿ ಬೈಕೆರೆ ನಾಗೇಶ್ ಅವರು ದೆಹಲಿಯಿಂದ ಬೆಂಗಳೂರಿಗೆ ತೆರಳಿ ಅಲ್ಲಿ ತಮ್ಮ ಕುಟುಂಬದೊಂದಿಗೆ ನೆಲೆಸಿದ್ದರು. ಆಗಾಗ ದೂರವಾಣಿ ಮುಖೇನ ತಮ್ಮೆಲ್ಲ ಆತ್ಮೀಯರನ್ನು ಸಂಪರ್ಕಿಸಿ ಹಳೆಯ ನೆನಪುಗಳನ್ನು ಮೆಲುಕು ಹಾಕುತ್ತಿದ್ದರು. ಮಕ್ಕಳನ್ನು ಚೆನ್ನಾಗಿ ಓದಿಸಿ ಎಂಬುದು ಅವರ ತುಂಬು ಹೃದಯದ ಸಲಹೆಯಾಗಿತ್ತು.

ದೆಹಲಿಯಲ್ಲಿ ಬೈಕೆರೆ ನಾಗೇಶ್ ಅವರಂತಹ ಅಧಿಕಾರಿ, ಆದರ್ಶ ವ್ಯಕ್ತಿತ್ವದವರು ಬಹಳೇ ವಿರಳ. ಇಂತಹ ವ್ಯಕ್ತಿ ದಿನಾಂಕ 23.01.2024ರಂದು ಸ್ವರ್ಗಸ್ಥರಾಗಿರುವುದು ತುಂಬಲಾರದ ನಷ್ಟ. ಕಠಿಣ ಕಾಯಕಯೋಗಿ, ಹತ್ತಾರು ಮಠಮಂದಿರದ ಸ್ವಾಮೀಜಿಗಳರವರ ಆಶೀರ್ವಾದಗಳೊಂದಿಗೆ ಅವರು ಪುನೀತರಾಗಿದ್ದರು. ಜಗತ್ತಿನ ಹಲವಾರು ಮಹಾ ಪುರುಷರನ್ನು ಕಾಣುವ ಭಾಗ್ಯ ಅವರಿಗಿತ್ತು. ಅಂತಹ ಆದರ್ಶಗಳನ್ನು ಅನುಸರಿಸಿಕೊಳ್ಳುವಲ್ಲಿ ಬೈಕೆರೆ ನಾಗೇಶ್ ಸದಾ ಉತ್ಸಾಹಿಯಾಗಿದ್ದರು. ಅದಕ್ಕೆ ಉದಾಹರಣೆಯಾಗಿ ಸ್ಟೀಫನ್ ಗ್ರೆಲೆಟ್ ಅವರು ಬರೆದ ಈ ಕೆಳಗಿನ ಸಾಲುಗಳಿಂದ ಬೈಕೆರೆ ನಾಗೇಶ್ ಅವರು ಪ್ರಭಾವಿತರಾಗಿದ್ದರು.

I shall pass through this World but once
Any good thing that I can do, or any kindness
that I can show to any human being,
Let me do it now, and not defer it,
For I may not pass this way again.

**-Stephen Grellet**

ಪ್ರಭಾವಿತರಾಗಿ–ಪ್ರಭಾವಿಯಾದರು ಬೈಕೆರೆ ನಾಗೇಶ್ ನಮ್ಮೆಲ್ಲರನ್ನು ಅಗಲಿದ ಅವರಿಗೆ ನನ್ನ ಭಾವಪೂರ್ಣ ಶ್ರದ್ಧಾಂಜಲಿ.

ಲೇಖಕರು :
***ಶ್ರೀ ಮಂಜುನಾಥ ಜಿ. ಗೌಡ***
ಕರ್ನಾಟಕ ಭವನ,
ನವದೆಹಲಿ (9971182929)



## ನವದೆಹಲಿಯ ಬಸವ ಇಂಟರ್‌ನ್ಯಾಷನಲ್ ಸೆಂಟರ್‌ನ ವತಿಯಿಂದ ದಿವಂಗತ ಶ್ರೀ ಬೈಕೆರೆ ನಾಗೇಶ್ ಅವರಿಗೆ ಶ್ರದ್ಧಾಂಜಲಿ



ನವದೆಹಲಿಯ ಬಸವ ಇಂಟರ್‌ನ್ಯಾಷನಲ್ ಸೆಂಟರ್‌ನ ವತಿಯಿಂದ ದೆಹಲಿ ಕನ್ನಡ ಹಿರಿಯ ಮಾದ್ಯಮಿಕ ಶಾಲೆಯಲ್ಲಿ ಇತ್ತೀಚೆಗೆ ಅಗಲಿದ ಶ್ರೀ ಬೈಕೆರೆ ನಾಗೇಶ್ ಅವರಿಗೆ ಶ್ರದ್ಧಾಂಜಲಿ ಕಾರ್ಯಕ್ರಮವನ್ನು ದಿ. 27.01.2024ರಂದು ಆಯೋಜಿಸಲಾಗಿತ್ತು. ಭಾರತದ ಸರ್ವೋಚ್ಚ ನ್ಯಾಯಾಲಯದ ಹಿರಿಯ ನ್ಯಾಯವಾದಿ ಶ್ರೀ ಎಸ್ ಎಸ್ ಜವಳಿ, ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷ ಶ್ರೀ ಸಿ.ಎಂ. ನಾಗರಾಜ, ವಿಜ್ಞಾನಿಗಳಾದ ಡಾ. ಎಂ.ಎಸ್. ಶಶಿಕುಮಾರ್, ದೆಹಲಿ ಕನ್ನಡ ಶಾಲೆಯ ಪ್ರಾಂಶುಪಾಲರಾದ ಶ್ರೀ ಪ್ರಶಾಂತ್ ಕುಮಾರ್, ಜನಕಪುರಿ ಕನ್ನಡ ಕೂಟದ ಅಧ್ಯಕ್ಷರಾದ ಶ್ರೀ ಎನ್.ಆರ್. ಶ್ರೀನಾಥ, ಬಸವ ಇಂಟರ್‌ನ್ಯಾಷನಲ್ ಸೆಂಟರ್‌ನ ಅಧ್ಯಕ್ಷರಾದ ಶ್ರೀ ಅಶೋಕ ಕಲ್ಲೂರು, ಉಪಾಧ್ಯಕ್ಷರಾದ ಶ್ರೀ ವಿ.ವಿ. ಬಿರಾದಾರ ಅವರೊಂದಿಗೆ ಅನೇಕ ದೆಹಲಿ ಕನ್ನಡಿಗರು ಭಾಗವಹಿಸಿ ಭಾವಪೂರ್ಣ ಶ್ರದ್ಧಾಂಜಲಿ ಅರ್ಪಿಸಿದರು.

# ಆದರ್ಶ ವ್ಯಕ್ತಿ ಶ್ರೀ ಬೈಕೆರೆ ನಾಗೇಶ್

ಸರಳ ಸಜ್ಜನಿಕೆಯ, ಬಿಚ್ಚು ಹೃದಯದ, ಮುಗುಳ್ನಗೆಯ, ದೀನದಲಿತರ, ಬಡವರ ಬಂಧುಗಳಾಗಿ ಸೇವೆ ಸಲ್ಲಿಸುವ, ಬಸವ ಇಂಟರ್‌ನ್ಯಾಷನಲ್ ಸೆಂಟರ್‌ನ ಫೌಂಡರ್ ಮೆಂಬರ್, ಎಲ್ಲ ಕನ್ನಡಿಗರ ಜೊತೆಗೂಡಿ ಕೆಲಸ ಮಾಡುವ, ಹಿರಿಯ ಸದಸ್ಯರಾದ ಶ್ರೀ ಬೈಕೆರೆ ನಾಗೇಶ್ ಅವರು ದಿನಾಂಕ 23.01.2024 ರಂದು ಬೆಂಗಳೂರಿನ ವಿಕ್ರಂ ಆಸ್ಪತ್ರೆಯಲ್ಲಿ ನಿಧನರಾಗಿದ್ದಾರೆಂಬ ಸಮಾಚಾರ ತಿಳಿದು ಬಹಳ ದುಃಖವಾಯಿತು.

ದಿವಂಗತ ನಾಗೇಶ್ ಅವರು ಹಾಸನ ಜಿಲ್ಲೆಯ ಸಕಲೇಶಪುರ ತಾಲೂಕಿನ ಬೈಕೆರೆ ಗ್ರಾಮದಲ್ಲಿ ದಿನಾಂಕ 01.07.1951 ರಲ್ಲಿ ಜನಿಸಿದರು. ಹುಟ್ಟಿನಿಂದಲೇ ಅನೇಕ ಕಷ್ಟ ಕಾರ್ಪಣ್ಯಗಳನ್ನು ಸಹಿಸಿಕೊಂಡು ತಮ್ಮ ವಿದ್ಯಾಭ್ಯಾಸವನ್ನು ಮುಂದುವರೆಸಿ ಎಂ.ಎ. ಪದವಿಧರರಾಗಿ ಸಣ್ಣ ಪುಟ್ಟ ಕೆಲಸಗಳನ್ನು ಮಾಡುತ್ತ, ಬೆಂಗಳೂರಿನಿಂದ ನಂಜಪ್ಪನವರ ಒಬ್ಬ ಅಧಿಕಾರಿಗಳ ಜೊತೆ ದೆಹಲಿಗೆ ಬಂದರು. ಮೊದಲಿನಿಂದಲೂ ಪರಿಚಯವಾಗಿರುವ ದಿವಂಗತ ಗುರುಪಾದ ಸ್ವಾಮಿಯವರು ಆಗ ಕೇಂದ್ರ ಪೆಟ್ರೋಲಿಯಂ ಸಚಿವರಾಗಿದ್ದರು. ಅವರ ಮಾರ್ಗದರ್ಶನದಿಂದ ಅವರ ಸಚಿವಾಲಯದಲ್ಲಿ ಕಾರ್ಯದರ್ಶಿಯಾಗಿ ಶ್ರೀ ನಾಗೇಶ್ ಸಚಿವರ ಪ್ರೀತಿಗೆ ಪಾತ್ರರಾದರು. ಮುಂದೆ ಅವರು ಹಂತ ಹಂತವಾಗಿ ಕೇಂದ್ರ ಸಚಿವರಾದ ಸರ್ವ ಶ್ರೀ ರಾಮಕೃಷ್ಣ ಹೆಗ್ಡೆ, ಇಂಡಸ್ಟ್ರಿ ಸಚಿವರು, ಶ್ರೀ ಸಿ.ಕೆ. ಜಾಫರ್ ಶರೀಫ್, ರೈಲ್ವೆ ಸಚಿವರು, ಶ್ರೀ ಎಂ.ವಿ. ರಾಜಶೇಖರನ್, ಯೋಜನಾ ಸಚಿವರು, ಶ್ರೀ ಸುರೇಶ ಕಲ್ಮಾಡಿ, ರೈಲ್ವೆ ರಾಜ್ಯ ಸಚಿವರು, ಶ್ರೀ ಅನಂತಕುಮಾರ್, ರಸಾಯನಿಕ ಮತ್ತು ರಸಗೊಬ್ಬರ ಸಚಿವರು, ಭಾರತದ ಮಾಜಿ ಪ್ರಧಾನಮಂತ್ರಿ, ಶ್ರೀ ಎಚ್.ಡಿ. ದೇವೆಗೌಡ ಅವರು, ಹೀಗೆ ಹತ್ತಾರು ಸಚಿವರ ಕಾರ್ಯದರ್ಶಿಯಾಗಿ ಅನೇಕ ಜನಪರ ಸೇವೆಮಾಡಿ ಜನರ ಪ್ರೀತಿಗೆ ಕಾರಣರಾಗಿದ್ದರು. ಆಯಾ ಇಲಾಖೆಗಳಿಂದ ಸಿಗುವ ಸೌಲಭ್ಯಗಳನ್ನು ಸಣ್ಣ ಸಣ್ಣ ಗ್ರಾಮೀಣ ಭಾಗಕ್ಕೆ ಒದಗಿಸಿದ ಕೀರ್ತಿ ಬೈಕೆರೆ ನಾಗೇಶ್ ಅವರಿಗೆ ಸಲ್ಲುತ್ತದೆ. ಅಲ್ಲದೆ ಸರ್ಕಾರದಿಂದ ಜನ ಸಾಮಾನ್ಯರಿಗೆ ಸಿಗುವ ಸೌಲಭ್ಯಗಳ ಕೈಪಿಡಿ ಮಾಡಿ, ಜನ ಪ್ರತಿನಿಧಿಗಳನ್ನು, ಅಧಿಕಾರಿಗಳನ್ನು ಹಾಗು ಜನರನ್ನು ಎಚ್ಚರಿಸುವ ಕೆಲಸ ಮಾಡಿದ್ದಾರೆ. ತಮ್ಮ ಹುಟ್ಟೂರಿನ ಗ್ರಾಮದಲ್ಲಿ ಅಪಾರವಾದ ಸೇವೆಯನ್ನು ಸಲ್ಲಿಸಿದ್ದಾರೆ. ನಂತರ ಇವರು ದೆಹಲಿಯಲ್ಲಿ ಕರ್ನಾಟಕ ಸರ್ಕಾರದ, ವಿಶೇಷ ಪ್ರತಿನಿಧಿಯಾಗಿದ್ದ ಸಮಯದಲ್ಲಿ ತಮ್ಮ ಗ್ರಾಮದಲ್ಲಿ ಮಂದಿರವನ್ನು ಕಟ್ಟಿಸಿದರು, ಹೊಲಗದ್ದೆಗಳಿಗೆ ರಸ್ತೆ, ಸೇತುವೆ ನಿರ್ಮಾಣ, ಕೆರೆಗಳು, ಅಂಚೆ ಕಚೇರಿ, ರೈಲ್ವೆ ಬ್ರಿಜ್ ಮಾಡಿ ಹಳ್ಳಿ ಹಾಗು ದೆಹಲಿಯ ನಡುವೆ ಒಬ್ಬ ಒಂದು ಸೇತುವೆಯಾಗಿ ನಿಂತಿದ್ದರು ಎಂದರೆ ತಪ್ಪಾಗಲಾರದು.

ದೆಹಲಿ ಕರ್ನಾಟಕ ಸಂಘಕ್ಕೆ ಮತ್ತು ನಮ್ಮ ದೆಹಲಿ ಕನ್ನಡ ಶಾಲೆಗೆ ತುಂಬಾ ಸಹಕಾರ ನೀಡಿದ್ದಾರೆ. ವಿಶೇಷ ಪ್ರತಿನಿಧಿಗಳಾಗಿದ್ದಾಗ ಮಾನ್ಯ ಶ್ರೀ ಯಡಿಯೂರಪ್ಪನವರು ಮುಖ್ಯಮಂತ್ರಿಗಳಾಗಿದ್ದಂತಹ ಸಂದರ್ಭದಲ್ಲಿ ದೆಹಲಿ ಕರ್ನಾಟಕ ಸಂಘದ ಕಟ್ಟಡಕ್ಕೆ ಹೆಚ್ಚುವರಿ ಕೊಠಡಿ ನಿರ್ಮಾಣ ವಿಸ್ತರಣೆಗೆ ಒಂದು ಕೋಟಿ ರೂಪಾಯಿ ಅನುದಾನವನ್ನು ಕೊಡಿಸುವ ಪ್ರಯತ್ನದಲ್ಲಿ ಸಹಕರಿಸಿದ್ದರಲ್ಲದೇ ದೆಹಲಿ ಕನ್ನಡ ಶಾಲೆಗೆ ಉಚಿತ ಎರಡು ಬಸ್ಸುಗಳನ್ನು ಕರ್ನಾಟಕ ಸರ್ಕಾರದಿಂದ ಒದಗಿಸಿ ಕನ್ನಡದ ಮಕ್ಕಳಿಗೆ ಕಾಯಕಲ್ಪರಾಗಿದ್ದಾರೆ. ಅಂಥ ವ್ಯಕ್ತಿಯು ಇಂದು ನಮ್ಮೊಂದಿಗೆ ಇಲ್ಲ, ಕಳೆದ ವರ್ಷ ನವಂಬರ್ ತಿಂಗಳು ನನ್ನ ಜೊತೆ 15 ನಿಮಿಷ ಮಾತಾಡಿದ್ದರು, ದೆಹಲಿ ಕನ್ನಡ ಶಾಲೆ, ಕರ್ನಾಟಕ ಸಂಘ, ಬಸವ ಇಂಟರ್‌ನ್ಯಾಷನಲ್ ಸೆಂಟರ್‌ನ ವಿಷಯವಾಗಿ ಮೇಲಿಂದ ಮೇಲೆ ವಿಚಾರಿಸುತ್ತಿದ್ದರು. ದೀಪಾವಳಿ ಹಬ್ಬದ ಮೊದಲು ಆತ್ಮೀಯ ಕನ್ನಡಿಗರಿಗೆ ಸಿಹಿಜೇನು ತುಪ್ಪದ ಬಾಟಲ್, ವಿಲಕ್ಕಿ ಹಾಗು ಕ್ಯಾಲೆಂಡರ್ ಕೊಟ್ಟು ಎಲ್ಲರ ಸುಖ ದುಃಖದಲ್ಲಿ ಪಾತ್ರರಾಗುತಿದ್ದರು. ತಾವು ಒಬ್ಬ ಕೇಂದ್ರದ ದೊಡ್ಡ ಅಧಿಕಾರಿಯಾಗಿದ್ದರೂ ಸಹ ಜನ ಸಾಮಾನ್ಯರಂತೆ ಎಲ್ಲಾ ಸಮಾಜದವರ ಮೇಲೆ ಅಪಾರವಾದ ಕಾಳಜಿಯನ್ನು ವಹಿಸುತಿದ್ದರು. ಅಂದರೆ ಎಲ್ಲ ಕನ್ನಡಿಗರ ಮೇಲೆ ಇದ್ದ ಅವರ ಅಪಾರವಾದ ಪ್ರೀತಿಯನ್ನು ಎತ್ತಿ ತೋರಿಸುತ್ತದೆ.

ಅವರ ಹುಟ್ಟು ಸಾವಿನ ಮಧ್ಯದಲ್ಲಿ ಸುಮಾರು 64 ವರುಷಗಳ ಕಾಲ ನಿರಂತರ ಮಾಡಿದ ಜನಪರ ಸೇವೆ, ಇಲ್ಲಿನ ಸಂಘಟನೆಗಳಿಗೆ ಮತ್ತು ಕನ್ನಡಿಗರಿಗೆ ವರವಾಗಿ ಪರಿಣಮಿಸಿವೆ ಎಂದರೆ ಅತಿಶಯೋಕ್ತಿಯಾಗಲಾರದು. ಬಸವಣ್ಣನವರ ಆಚಾರ ವಿಚಾರಗಳನ್ನು ತಮ್ಮ ದಿನ ನಿತ್ಯದ ಜೀವನದಲ್ಲಿ ಅಳವಡಿಸಿಕೊಂಡು ಮಾನವ ಕಲ್ಯಾಣಕ್ಕಾಗಿ ದುಡಿದ ಒಬ್ಬ ಆದರ್ಶ ವ್ಯಕ್ತಿಯಾಗಿದ್ದರು ಶ್ರೀ ಬೈಕೆರೆ ನಾಗೇಶ್ ಅವರು. ಅವರ ಮೃತ್ಯುವಿನಿಂದ ನನಗೆ ಹಾಗು ನಮ್ಮ ಸಮಾಜಕ್ಕೆ ತುಂಬಲಾರದ ನಷ್ಟವಾಗಿದೆ. ಮೃತರ ಆತ್ಮಕ್ಕೆ ಶಾಂತಿಯನ್ನೀಯಲಿ, ಅವರ ಕುಟುಂಬ ವರ್ಗ, ಅಪಾರವಾದ ಬಂಧು ಮಿತ್ರರಿಗೆ ಅವರ ಅಗಲಿಕೆಯ ದುಃಖವನ್ನು ಸಹಿಸುವ ಶಕ್ತಿಯನ್ನು ನೀಡಲಿ ಎಂದು ಸಮಸ್ತ ದೆಹಲಿ ಕನ್ನಡಿಗರ ಪರವಾಗಿ ದೇವರಲ್ಲಿ ಪ್ರಾರ್ಥನೆ ಸಲ್ಲಿಸುತ್ತೇನೆ. ಅವರಿಗೆ ಭಾವಪೂರ್ಣ ಶ್ರದ್ಧಾಂಜಲಿ.

ಲೇಖಕರು :
***ಶ್ರೀ ವೈಜಿನಾಥ ವಿ. ಬಿರಾದಾರ***
ಉಪಾಧ್ಯಕ್ಷರು, ಬಸವ ಇಂಟರ್‌ನ್ಯಾಷನಲ್ ಸೆಂಟರ್ ಹಾಗು ಅಧ್ಯಕ್ಷರು, ಕಲ್ಯಾಣ ಕರ್ನಾಟಕ ಸಾಂಸ್ಕೃತಿಕ ಸಂಘ, ನವದೆಹಲಿ



## ಕನ್ನಡ ನಾಡಿನ ಹಲವು ಸಾಧಕರಿಗೆ ಬಸವ, ಚೌಡಯ್ಯ ಮತ್ತು ಪಂಪ ಪ್ರಶಸ್ತಿ ಸೇರಿದಂತೆ ವಿವಿಧ ಪ್ರಶಸ್ತಿ ಪ್ರದಾನ

ಕರ್ನಾಟಕ ಸರ್ಕಾರದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ನಾಡಿನ ಗಣ್ಯ ಸಾಧಕರಿಗೆ ವಿವಿಧ ಪ್ರಶಸ್ತಿಗಳನ್ನು ಪ್ರತಿ ವರ್ಷ ನೀಡುತ್ತಿದ್ದು 2022-23 ಮತ್ತು 2023-24ರ ಸಾಲಿನಲ್ಲಿ ಒಟ್ಟಾರೆ 21 ರಾಷ್ಟ್ರೀಯ ಮತ್ತು ರಾಜ್ಯ ಪ್ರಶಸ್ತಿಗಳನ್ನು 44 ಸಾಧಕರಿಗೆ ಪ್ರದಾನ ಮಾಡಿ ಪುರಸ್ಕರಿಸಿದೆ.

**ಪ್ರದಾನ ಮಾಡಲಾದ ವಿವಿಧ ಪ್ರಶಸ್ತಿಗಳು ಹಾಗು ಪುರಸ್ಕೃತರು ಈ ಕೆಳಗಿನಂತಿವೆ :**

**ರಾಷ್ಟ್ರೀಯ ವಿಭಾಗದಲ್ಲಿ ನೀಡಿದ ನಾಲ್ಕು ಪ್ರಶಸ್ತಿಗಳು (ತಲಾ 10 ಲಕ್ಷ ನಗದು ಸಹಿತ)**

**ಬಸವ ರಾಷ್ಟ್ರೀಯ ಪುರಸ್ಕಾರ :** ಮಹಾರಾಷ್ಟ್ರದ ಆನಂದ ತೇಲ್ತುಂಬ್ಡೆ ಮತ್ತು ಧಾರವಾಡದ ಎನ್.ಜಿ. ಮಹದೇವಪ್ಪ

**ಶ್ರೀ ಭಗವಾನ್ ಮಹಾವೀರ ಶಾಂತಿ ಪ್ರಶಸ್ತಿ :** ಧಾರವಾಡದ ಜಿನದತ್ತ ದೇಸಾಯಿ ಮತ್ತು ಗುಜರಾತಿನ ಗಾಂಧಿ ಸೇವಾಶ್ರಮ

**ಟಿ. ಚೌಡಯ್ಯ ಪ್ರಶಸ್ತಿ :** ಮುಂಬೈನ ಕೊಳಲುವಾದಕ ನಿತ್ಯಾನಂದ ಹಳದಿಪುರ ಮತ್ತು ಕೋಲಾರದ ನಾದಸ್ವರ ಕಲಾವಿದ ಶ್ರೀರಾಮುಲು

**ಗಾನಯೋಗಿ ಪಂಡಿತ್ ಪಂಚಾಕ್ಷರಿ ಗವಾಯಿ ಪ್ರಶಸ್ತಿ :** ಧಾರವಾಡದ ಹಿಂದೂಸ್ತಾನಿ ಗಾಯಕ ಸೋಮನಾಥ ಮರಡೂರ ಮತ್ತು ಮೈಸೂರಿನ ಕರ್ನಾಟಕ ಸಂಗೀತ ಕಲಾವಿದೆ ಶ್ರೀಮತಿ ನಾಗವೇಣಿ ಶ್ರೀನಾಥ

**ಸಾಮಾಜಿಕ ಮತ್ತು ಸಾಂಸ್ಕೃತಿಕ ವಿಭಾಗದ ಪ್ರಶಸ್ತಿಗಳು (ತಲಾ 5 ಲಕ್ಷ ನಗದು ಸಹಿತ)**

**ಸಂಗೊಳ್ಳಿ ರಾಯಣ್ಣ ಪ್ರಶಸ್ತಿ :** ಕೆ. ಮರುಳಸಿದ್ದಪ್ಪ (ಬೆಂಗಳೂರು), ಹಸನ್ ನಯೀಂ ಸುರಕೋಡ (ಬೆಳಗಾವಿ), ಕೆ. ರಾಮಯ್ಯ (ಕೋಲಾರ), ಜೆ.ಎಂ. ವೀರಸಂಗಯ್ಯ (ಬಳ್ಳಾರಿ)

**ಅಕ್ಕಮಹಾದೇವಿ ಪ್ರಶಸ್ತಿ :** ಜಗನ್ಮಾತೆ ಅಕ್ಕಮಹಾದೇವಿ ಆಶ್ರಮ ಟ್ರಸ್ಟ್ (ಧಾರವಾಡ), ಆರ್, ಸುನಂದಮ್ಮ (ಮಂಡ್ಯ), ಮೀನಾಕ್ಷಿ ಬಾಳಿ (ಕಲಬುರಗಿ), ಡಾ. ವಸುಂಧರಾ ಭೂಪತಿ (ಬೆಂಗಳೂರು)

**ಕನಕಶ್ರೀ ಪ್ರಶಸ್ತಿ :** ಲಿಂಗದಹಳ್ಳಿ ಹಾಲಪ್ಪ (ಹಾವೇರಿ), ಬಿ. ಶಿವರಾಮ ಶೆಟ್ಟಿ (ಮಂಗಳೂರು)

**ಸಾಹಿತ್ಯ ಹಾಗೂ ನಾಟಕ ವಿಭಾಗದ ಪ್ರಶಸ್ತಿಗಳು (ತಲಾ 5 ಲಕ್ಷ ನಗದು ಸಹಿತ)**

**ಪಂಪ ಪ್ರಶಸ್ತಿ :** ನಾ.ಡಿ'ಸೋಜ (ಶಿವಮೊಗ್ಗ)

**ಪ್ರೊ. ಕೆ.ಜಿ. ಕುಂದಣಗಾರ ಗಡಿನಾಡ ಸಾಹಿತ್ಯ ಪ್ರಶಸ್ತಿ :** ಕೆ. ವಿಶ್ವನಾಥ ಕಾರ್ನಾಡ್ (ಮಹಾರಾಷ್ಟ್ರ), ಚಂದ್ರಕಾಂತ ಪೋಕಳೆ (ಬೆಳಗಾವಿ)

**ದಾನಚಿಂತಾಮಣಿ ಅತ್ತಿಮಬ್ಬೆ ಪ್ರಶಸ್ತಿ :** ಭಾನು ಮುಷ್ತಾಕ್ (ಹಾಸನ), ಎಚ್.ಎಸ್. ಮುಕ್ತಾಯಕ್ಕ (ರಾಯಚೂರು)

**ಬಿ.ವಿ. ಕಾರಂತ ಪ್ರಶಸ್ತಿ :** ಸಿ. ಬಸವಲಿಂಗಯ್ಯ (ಬೆಂಗಳೂರು), ಸದಾನಂದ ಸುವರ್ಣ (ಮಂಗಳೂರು)

**ಗುಬ್ಬಿ ವೀರಣ್ಣ ಪ್ರಶಸ್ತಿ :** ಚನ್ನಬಸಯ್ಯ ಗುಬ್ಬಿ (ತುಮಕೂರು), ಎಲ್.ಬಿ. ಶೇಖ್ ಮಾಸ್ತರ (ವಿಜಯಪುರ)

**ಡಾ. ಸಿದ್ದಲಿಂಗಯ್ಯ ಸಾಹಿತ್ಯ ಪ್ರಶಸ್ತಿ :** ಮೊಗಳ್ಳಿ ಗಣೇಶ್ (ಹಂಪಿ), ಉತ್ತಮ ಕಾಂಬ್ಳೆ, ಬಿ.ಟಿ. ಜಾಹ್ನವಿ (ದಾವಣಗೆರೆ)

**ಕಲಾ ವಿಭಾಗದ ಪ್ರಶಸ್ತಿಗಳು (ತಲಾ 5 ಲಕ್ಷ ನಗದು ಸಹಿತ)**

**ವರ್ಣಶಿಲ್ಪಿ ವೆಂಕಟಪ್ಪ ಪ್ರಶಸ್ತಿ :** ಜಿ.ಎಲ್.ಎನ್. ಸಿಂಹ (ಮೈಸೂರು), ಬಸವರಾಜ್ ಎಲ್. ಜಾನೆ (ಕಲಬುರಗಿ)

**ಜಾನಪದಶ್ರೀ ಪ್ರಶಸ್ತಿ-ವಾದನ :** ಅರುವ ಕೊರಗಪ್ಪ ಶೆಟ್ಟಿ (ದಕ್ಷಿಣ ಕನ್ನಡ), ಜೆ.ಪಿ. ಜಗದೀಶ್ (ಚಿಕ್ಕಮಗಳೂರು)

**ಜಾನಪದಶ್ರೀ ಪ್ರಶಸ್ತಿ-ಗಾಯನ :** ಕಲ್ಲಪ್ಪ ಮಿರ್ಜಾಪುರ (ಬೀದರ್), ಹಲಗೆ ದುರ್ಗಮ್ಮ (ಚಿತ್ರದುರ್ಗ)

**ಸಂಗೀತ, ನೃತ್ಯ ವಿಭಾಗದ ಪ್ರಶಸ್ತಿಗಳು (ತಲಾ 5 ಲಕ್ಷ ನಗದು ಸಹಿತ)**

**ಶ್ರೀನಿಜಗುಣ-ಪುರಂದರ ಪ್ರಶಸ್ತಿ :** ಎಂ.ಕೆ. ಸರಸ್ವತಿ (ಮೈಸೂರು), ಅಕ್ಕಮಹಾದೇವಿ ಮಠ (ಧಾರವಾಡ)

**ಕುಮಾರವ್ಯಾಸ ಪ್ರಶಸ್ತಿ :** ಸಿದ್ದೇಶ್ವರ ಶಾಸ್ತ್ರಿ (ಗದಗ), ಕೃಷ್ಣಗಿರಿ ರಾಮಚಂದ್ರ (ಮೈಸೂರು)

**ಶಾಂತಲಾ ನಾಟ್ಯ ಪ್ರಶಸ್ತಿ :** ಚಿತ್ರಾ ವೇಣುಗೋಪಾಲ್ (ಬೆಂಗಳೂರು), ರೇವತಿ ನರಸಿಂಹನ್ (ಬೆಂಗಳೂರು)

ಈ ಮೇಲಿನ ಪ್ರಶಸ್ತಿಗಳಲ್ಲದೇ 2018-19, 2020-21, 2021-22, 2022-23 ನೇ ಸಾಲಿಗೆ ಈ ಹಿಂದೆ ಘೋಷಣೆ ಮಾಡಲಾಗಿದ್ದ ವಿವಿಧ 31 ಪ್ರಶಸ್ತಿಗಳನ್ನು ಸೇರಿ ಒಟ್ಟು 75 ಮಂದಿಗೆ ಇತ್ತೀಚೆಗೆ ಪ್ರದಾನ ಮಾಡಿ ಗೌರವಿಸಲಾಗಿದೆ.

ಈ ಎಲ್ಲಾ ಪ್ರಶಸ್ತಿಗಳಿಗೆ ಭಾಜನರಾದ ಕನ್ನಡನಾಡಿನ ಹೆಮ್ಮೆಯ ಸಾಧಕರಿಗೆ ದೆಹಲಿ ಕರ್ನಾಟಕ ಸಂಘ ಹಾಗೂ ಸಮಸ್ತ ದೆಹಲಿ ಕನ್ನಡಿಗರ ಪರವಾಗಿ ಅಭಿಮತ ಸಂಪಾದಕ ಮಂಡಳಿ ಹೃತ್ಪೂರ್ವಕ ಅಭಿನಂದನೆಗಳನ್ನು ಸಲ್ಲಿಸುತ್ತಿದೆ.

Delhi Karnataka Sangha Abhimata
Feb -2024, Vol. No.34, Issue No. 5, Price Rs.1/-
RNI Regn. No. 53405/91, DL-SW-01/4016/22-24
Date of Publication : Feb 8th / 9th, Posting Date : 10th / 11th, Total Pages-32 Monthly-Language Kannada, POSTED AT RMS DELHI-110006
Printed & Published by Radhakrishna, General Secretary on behalf of Delhi Karnataka Sangha (R)Rao Tularam Marg, Sector-12, R.K.Puram, New Delhi-110022
Tel: 26109615, Printed at Saujanya Printing Press B-303, Okhla Industrial Area, Phase-I, New Delhi-110020, Tel: 40520770, Editor: K.Sreenivasa Murthy



ಸಂಘದಲ್ಲಿ 24.12.2023ರಂದು ಆಯೋಜನೆಗೊಂಡ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಸ್ಥಳೀಯ ಕಲಾವಿದರಿಂದ ಪ್ರದರ್ಶನವಾದ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳು

ಕನ್ನಡ ಮಕ್ಕಳಿಂದ ಮನಮೋಹಕ ನೃತ್ಯ



ಶ್ರೀಮತಿ ಮಂಜುಳಾ ನಾಗರಾಜ್



ಶ್ರೀ ನಟರಾಜ್



ಶ್ರೀಮತಿ ಮಮತಾ ಶಿವರಾಮ್



ಶ್ರೀ ಎಸ್. ರಮೇಶ

ದೆಹಲಿ ಕನ್ನಡಿಗರಿಂದ ಗೀತ ಗಾಯನ



ದೆಹಲಿ ಕರ್ನಾಟಕ ಸಂಘದಲ್ಲಿ 03.12.2023 ರಂದು ಆಯೋಜಿಸಲಾದ 'ಕೈರುಚಿ' ಆಹಾರ ಮೇಳದಲ್ಲಿ ಭಾಗವಹಿಸಿದ ಗೃಹಿಣಿಯರಿಗೆ 24.12.2023 ರಂದು ನಡೆದ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಬಹುಮಾನ ಮತ್ತು ಸಹಾಯ ಧನ ವಿತರಣೆ ಮಾಡಿದ ಸಂದರ್ಭ, ಹಿರಿಯ ಕನ್ನಡ ಚಲನಚಿತ್ರನಟ ಶ್ರೀ ದೊಡ್ಡಣ್ಣನವರೊಂದಿಗೆ ಸಮೂಹ ದೃಶ್ಯ